ಮಂಗಳವಾರ, ಏಪ್ರಿಲ್ 14, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಇಶಾನ್ ಮಿಂಚು

ಸನ್‌ರೈಸರ್ಸ್ ಹೈದರಾಬಾದ್ ತಂಡದ ನಾಯಕ ಇಶಾನ್ ಕಿಶನ್ ಅವರು ಸೋಮವಾರ ಹೈದರಾಬಾದ್‌ನಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ 91 ರನ್ (44ಎ) ಬಾರಿಸಿದರು





ಬಿಸಿಲಿನ ತಾಪ

ರಾಜಸ್ಥಾನದ ಬೀಕಾನೇರ್‌ನಲ್ಲಿ ಮಹಿಳೆಯೊಬ್ಬರು ಬಿಸಿಲಿನ ತಾಪದಿಂದ ರಕ್ಷಿಸಲು ತಮ್ಮ ಮಗುವಿಗೆ ಬಟ್ಟೆಯನ್ನು ಹೊದಿಸಿಕೊಂಡು ಸಾಗಿದರು

ವಾಹನ ನಿಲುಗಡೆಗೆ ದುಬೈ ಮಾದರಿಯ ತಂತ್ರಜ್ಞಾನ

₹6 ಕೋಟಿ ವೆಚ್ಚದಲ್ಲಿ ಕೆ.ಆರ್. ಮಾರುಕಟ್ಟೆ ಪಾರ್ಕಿಂಗ್ ತಾಣದ ನವೀಕರಣ • ಒಂದು ವಾರದಲ್ಲಿ ಉದ್ಘಾಟನೆ

• ಖಲೀಲಅಹ್ಮದ ಶೇಖ

ಬೆಂಗಳೂರು: ನಗರದ ಹೃದಯ ಭಾಗದಲ್ಲಿರುವ ಕೃಷ್ಣ ರಾಜೇಂದ್ರ ಮಾರುಕಟ್ಟೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಹನ ನಿಲುಗಡೆ ಸಮಸ್ಯೆಗೆ ಪರಿಹಾರ ನೀಡಲು ಕೆ.ಆರ್. ಮಾರುಕಟ್ಟೆಯ ವಾಣಿಜ್ಯ ಕಟ್ಟಡದ ಕೆಳ ಅಂತಸ್ತಿನಲ್ಲಿದ್ದ ವಾಹನ ನಿಲುಗಡೆಗೆ ಹೊಸ ರೂಪ ನೀಡಲಾಗಿದೆ. 'ಅಡ್ವಾನ್ಸ್ಡ್ ಪಾರ್ಕಿಂಗ್ ತಂತ್ರಜ್ಞಾನ'(ದುಬೈ ಮಾದರಿಯ ತಂತ್ರಜ್ಞಾನ) ಅಳವಡಿಸಲಾಗಿದೆ.

ನಗರದ ಸ್ವಾತಂತ್ರ್ಯ ಉದ್ಯಾನ ದಲ್ಲಿರುವ 'ಬಹುಮಹಡಿ ಪಾರ್ಕಿಂಗ್ ಕಟ್ಟಡ'ದ ಗುತ್ತಿಗೆ ಪಡೆದಿರುವ 'ರೈಟ್ ಪಾರ್ಕಿಂಗ್ ಸಂಸ್ಥೆ'ಗೆ ಈ ವಾಹನ ನಿಲುಗಡೆ ಜಾಗದ ಗುತ್ತಿಗೆಯನ್ನು 10 ವರ್ಷಗಳ ಅವಧಿಗೆ ನೀಡಲಾಗಿದೆ. ₹6 ಕೋಟಿ ವೆಚ್ಚದಲ್ಲಿ ಕೆ.ಆರ್. ಮಾರುಕಟ್ಟೆ ವಾಹನ ನಿಲುಗಡೆ ಜಾಗದ ನವೀಕರಣ ಕಾಮಗಾರಿಯನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ.

ವಾಹನ ನಿಲುಗಡೆ ಸ್ಥಳಕ್ಕೆ ಮಳೆಗಾಲದಲ್ಲಿ ಪ್ರವಾಹದ ನೀರು ನುಗ್ಗುತ್ತಿತ್ತು. ಆದರೆ ಈಗ ಮಳೆ ನೀರು ಸಂಗ್ರಹಕ್ಕೆ ದೊಡ್ಡ ಸಂಪುಗಳನ್ನು ನಿರ್ಮಿಸಲಾಗಿದೆ. ದೊಡ್ಡಮಟ್ಟದಲ್ಲಿ ಪ್ರವಾಹ ಬಂದರೂ ತಕ್ಷಣಕ್ಕೆ ನೀರನ್ನು ಹೊರಗಡೆ ಹಾಕುವ ಮೋಟಾರ್‌ಗಳನ್ನು ಅಳವಡಿಸಲಾಗಿದೆ.

ಖರೀದಿಗಾಗಿ ಕೆ.ಆರ್. ಮಾರುಕಟ್ಟೆಗೆ ಬರುವ ಸಾರ್ವಜನಿಕರು ತಮ್ಮ ವಾಹನಗಳನ್ನು ಇಲ್ಲಿ ನಿಲುಗಡೆ ಮಾಡಬಹುದು. ಮಾರುಕಟ್ಟೆಗೆ ತೆರಳಲು

ಪಾರ್ಕಿಂಗ್ ಶುಲ್ಕದ ವಿವರ

ಅವಧಿ	ದ್ವಿಚಕ್ರ ವಾಹನ	ನಾಲ್ಕು ಚಕ್ರದ ವಾಹನ
0ಯಿಂದ 1	₹15	₹25
1ರಿಂದ 2	₹25	₹45
2ರಿಂದ 4	₹45	₹85
4ರಿಂದ 6	₹65	₹125
6ರಿಂದ 8	₹85	₹165
8ರಿಂದ 10	₹105	₹205
10ರಿಂದ 12	₹125	₹245
12ರಿಂದ 24	₹175	₹275

(ಕಾರಿಗೆ ಪಾಸ್ ದರ ₹5 ಸಾವಿರ (30ಗಳಿಗೆ) ಹಾಗೂ ದ್ವಿಚಕ್ರ ವಾಹನಕ್ಕೆ ₹1,500 ನಿಗದಿ ಪಡಿಸಲಾಗಿದೆ)

ಏನೇನು ಸೌಲಭ್ಯ?

- ದಿನದ 24 ಗಂಟೆಯೂ ವಾಹನ ಪಾರ್ಕಿಂಗ್‌ಗೆ ಅವಕಾಶ
- ಮಹಿಳೆಯರ ಸುರಕ್ಷತೆಗೆ 12 ಪ್ಯಾನಿಕ್ ಬಟನ್
- ಉಚಿತ ವೈ-ಫೈ ವ್ಯವಸ್ಥೆ
- ಶುದ್ಧ ಕುಡಿಯುವ ನೀರಿನ ಘಟಕ
- ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯದ ವ್ಯವಸ್ಥೆ
- ಫುಡ್‌ಕೋರ್ಟ್
- ಇ.ವಿ ಚಾರ್ಜಿಂಗ್ ಪಾಯಿಂಟ್
- ವ್ಯಾಲೆಟ್ ಪಾರ್ಕಿಂಗ್
- ವ್ಹೀಲ್ ಚೇರ್ ವ್ಯವಸ್ಥೆ
- ಅಡ್ವಾನ್ಸ್ಡ್ ಸೆಕ್ಯೂರಿಟಿ ಸಿಸ್ಟಂ
- 62 ಎಐ ಕ್ಯಾಮೆರಾಗಳು

ನವೀಕರಣದ ಬಳಿಕ ಪಾರ್ಕಿಂಗ್ ಸಾಮರ್ಥ್ಯ

ವಾಹನಗಳ ಮಾದರಿ	ಸಂಖ್ಯೆ
ಕಾರು ಹಾಗೂ ಜೀಪು	200
ದ್ವಿಚಕ್ರ ವಾಹನ	400



ಕೆ. ಆರ್ ಮಾರುಕಟ್ಟೆಯಲ್ಲಿ ನವೀಕರಣಗೊಂಡ ಅಡ್ವಾನ್ಸ್ಡ್ ಪಾರ್ಕಿಂಗ್ ತಂತ್ರಜ್ಞಾನದ ನೋಟ

ಪ್ರಜಾವಾಣಿ ಚಿತ್ರಗಳು: ಎಂ. ಎಸ್ ಮಂಜುನಾಥ್

ನಾಲ್ಕು ಲಿಫ್ಟ್‌ಗಳನ್ನು ಅಳವಡಿಸಲಾಗಿದೆ. ಸಾರ್ವಜನಿಕರು ವಿಶ್ರಾಂತಿ ಪಡೆಯಲು 100ಕ್ಕೂ ಹೆಚ್ಚು ಮಂದಿ ಕುಳಿತುಕೊಳ್ಳಲು ಬೆಂಚ್‌ಗಳನ್ನು ಹಾಕಲಾಗುತ್ತದೆ. ವಾತಾವರಣ ಸ್ವಚ್ಛವಾಗಿಡಲು ಕಸದ ಬುಟ್ಟಿಗಳನ್ನು ಇಡಲಾಗಿದೆ.

ಇಲ್ಲಿ ಕೃತಕ ಬುದ್ಧಿಮತ್ತೆ (ಎಐ) ಕ್ಯಾಮೆರಾಗಳು, ಮಹಿಳೆಯರಿಗೆ ಹಾಗೂ ಅಂಗವಿಕಲರ ವಾಹನಗಳನ್ನು ನಿಲುಗಡೆ ಮಾಡಲು ಪ್ರತ್ಯೇಕ ಸ್ಥಳಗಳನ್ನು



ವಾಹನ ನಿಲುಗಡೆಗೆ ಪ್ರವೇಶ ಕಲ್ಪಿಸುವ ಹೊರನೋಟ

ಮೀಸಲಿಡಲಾಗಿದೆ. ವರ್ಷಕ್ಕೆ ₹41 ಲಕ್ಷಕ್ಕೆ ಬಿಡ್ ಆಗಿದೆ. ಐದು ವರ್ಷಗಳ ನಂತರ ಬಿಡ್ ಮೊತ್ತವು ಏರಿಕೆ ಆಗಲಿದೆ ಎಂದು ಸಂಸ್ಥೆಯ ಮೂಲಗಳು ತಿಳಿಸಿವೆ.

ಟಿಕೆಟ್‌ಲೆಸ್ ವ್ಯವಸ್ಥೆ: ನಿಲುಗಡೆಗೆ ಬರುವ ವಾಹನಗಳಿಗೆ ಫಾಸ್ಟ್‌ಟ್ಯಾಗ್ ಅಥವಾ



ಮಹಿಳೆಯರ ವಾಹನಗಳಿಗಾಗಿ ಮೀಸಲಾಗಿರುವ ಸ್ಥಳ

ಯುಪಿಐ ಮೂಲಕ ಹಣ ಪಾವತಿಸುವ ಆಧುನಿಕ ತಂತ್ರಜ್ಞಾನವನ್ನು ಅಳವಡಿಕೆ ಮಾಡಲಾಗಿದೆ. ವಾಹನದ ಮಾಲೀಕರ ಮುಖಚಹರೆಯನ್ನು ಕ್ಯಾಮೆರಾ ಮೂಲಕ ಸೆರೆ ಹಿಡಿಯಲಾಗುತ್ತದೆ' ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಅನೈತಿಕ ಚಟುವಟಿಕೆಗಳಿಗೆ ಕಡಿವಾಣ ಹಾಕಲು 62 ಎ.ಐ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಇದಕ್ಕಾಗಿಯೇ ಒಂದು ಕಮಾಂಡ್ ಸೆಂಟರ್ ಸ್ಥಾಪಿಸಲಾಗಿದೆ. ಮಹಿಳೆಯರ ಹಾಗೂ ಮಕ್ಕಳ ಸುರಕ್ಷತೆಗೆ 12 ಪ್ಯಾನಿಕ್ ಬಟನ್ ವ್ಯವಸ್ಥೆ ಇದೆ. ಉಚಿತ ವೈಫೈ, ಇ.ವಿ ಚಾರ್ಜಿಂಗ್‌ಗೆ ಅವಕಾಶವಿದ್ದು, ಒಂದು ಬಾರಿಗೆ ಏಳು ಕಾರುಗಳನ್ನು ಚಾರ್ಜ್ ಮಾಡಬಹುದು' ಎಂದು ಹೇಳಿದರು.

'ಅವೆನ್ಯೂ ರಸ್ತೆ, ಬಿವಿಕೆ ಅಯ್ಯಂಗಾರ್ ಹಾಗೂ ಚಿಕ್ಕಪೇಟೆ ಮೆಟ್ರೊ ನಿಲ್ದಾಣದ ಮೂಲಕ ವಾಹನ ನಿಲುಗಡೆಗೆ ಪ್ರವೇಶ ಇದೆ. ಪಾರ್ಕಿಂಗ್ ಸ್ಥಳದಿಂದ ನೇರವಾಗಿ ಮೈಸೂರು ರಸ್ತೆಗೆ ಹೊರಗಡೆ ಹೋಗಲು ಅವಕಾಶ ನೀಡಲಾಗಿದೆ. ಇದಕ್ಕಾಗಿಯೇ ಒತ್ತುವರಿ ಆಗಿರುವ ರಸ್ತೆ ವಿಸ್ತರಣೆ ಮಾಡಿಕೊಡುವಂತೆ ಕೇಂದ್ರ ನಗರ ಪಾಲಿಕೆಗೆ ಮನವಿ ಮಾಡಿದ್ದೇವೆ' ಎಂದು ಕುಮಾರ್ ವಿವರಿಸಿದರು.

'ಕೆ.ಆರ್ ಮಾರುಕಟ್ಟೆ ವ್ಯಾಪ್ತಿಯಲ್ಲಿ ವಾಹನಗಳ ನಿಲುಗಡೆಗೆ ಸ್ಥಳದ ಅಭಾವವಿದೆ. ಮುಂಜಾನೆಯೇ ಬಂದರೆ ಮಾತ್ರ ರಸ್ತೆಬದಿಯಲ್ಲಿ ವಾಹನಗಳನ್ನು ನಿಲುಗಡೆ ಮಾಡಲು ಜಾಗ ದೊರೆಯಲಿದೆ. ಬೆಳಿಗ್ಗೆ ಎಂಟರ ನಂತರ ಬಂದರೆ ದೂರದಲ್ಲಿ ವಾಹನ ನಿಲುಗಡೆ ಮಾಡಿ ಮಾರುಕಟ್ಟೆಗೆ ಬರಬೇಕಾದ ಪರಿಸ್ಥಿತಿಯಿದೆ. ಈ ಸ್ಥಳವು ನವೀಕರಣಗೊಂಡು ಬಳಕೆಗೆ ಲಭ್ಯವಾದರೆ ಹೆಚ್ಚು ಅನುಕೂಲ ವಾಗಲಿದೆ' ಎಂದು ಸವಾರರಾದ ಶಿವರಾಜ್, ಶಂಕರ್ ತಿಳಿಸಿದರು.

'ಕೆ.ಆರ್. ಮಾರುಕಟ್ಟೆಯ ಇತಿಹಾಸ ಪ್ರತಿಬಿಂಬಿಸುವ ಬ್ಯಾನರ್‌ಗಳು'



ಕುಮಾರ್

ಹಿಂದೆ ಈ ಜಾಗವನ್ನು ಸಿದ್ಧಿಕಟ್ಟೆ ಎಂದು ಕರೆಯಲಾಗುತ್ತಿತ್ತು. ಈಗ ಅದೇ ಕೆ.ಆರ್. ಮಾರುಕಟ್ಟೆಯಾಗಿ ಬದಲಾಗಿದೆ. ಇದರ ಇತಿಹಾಸ ಪ್ರತಿಬಿಂಬಿಸುವ ಮಾಹಿತಿ ನೀಡುವ ಬ್ಯಾನರ್‌ಗಳನ್ನು ಅಳವಡಿಸಲಾಗಿದೆ. ಅವೆನ್ಯೂ ರಸ್ತೆಯ ಮೂಲಕ ವಾಹನ ನಿಲುಗಡೆಗೆ ಪ್ರವೇಶ ಕಲ್ಪಿಸುವ ಮುಂಭಾಗದಲ್ಲಿ ಕೃಷ್ಣರಾಜೇಂದ್ರ ಹಾಗೂ ನಾಡಪ್ರಭು ಕೆಂಪೇಗೌಡರ ಪ್ರತಿಮೆಗಳನ್ನು ಸ್ಥಾಪಿಸಲಾಗಿದೆ. ಎರಡೂ ಬದಿಯ ಗೋಡೆಗಳಲ್ಲಿ ಮೈಸೂರು ಅರಮನೆ, ಹಂಪಿಯ ಕಲ್ಲಿನ ರಥದ ಗೋಡೆ ಚಿತ್ರಗಳನ್ನು ಬಿಡಿಸಲಾಗಿದೆ. ಜ್ಞಾನಪೀಠ ಪ್ರಶಸ್ತಿ ಪಡೆದ ಸಾಹಿತಿಗಳ ಭಾವಚಿತ್ರಗಳನ್ನು ಬಿಡಿಸಲಾಗಿದೆ ಎಂದು ಕುಮಾರ್ ತಿಳಿಸಿದರು.



ಜ್ಞಾನಪೀಠ ಪ್ರಶಸ್ತಿ ಪಡೆದ ಸಾಹಿತಿಗಳ ಭಾವಚಿತ್ರಗಳನ್ನು ಗೋಡೆಯ ಮೇಲೆ ಬಿಡಿಸಲಾಗಿದೆ

ಹರಿಹರ ಪೀಠದ ವಚನಾನಂದ ಶ್ರೀ ಪದಚ್ಯುತಿ

ನಿರ್ಣಾಯಕ ಸಭೆಯಲ್ಲಿ 15 ಟ್ರಸ್ಟಿಗಳ ಪೈಕಿ 13 ಟ್ರಸ್ಟಿಗಳಿಂದ ನಿರ್ಣಯ • ಮಠದ ಬಳಿ ಹೈಡ್ರಾಮಾ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಹರಿಹರದಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ವಚನಾನಂದ ಶ್ರೀಗಳನ್ನು ಮಠದ ಮುಖಂಡರು ಪದಚ್ಯುತಿಗೊಳಿಸಿದ್ದಾಗಿ ಗುರುಪೀಠದ ಟ್ರಸ್ಟ್ ಹೇಳಿದೆ.

ಸೋಮವಾರ ನಡೆದ ಸಭೆಯಲ್ಲಿ 15 ಟ್ರಸ್ಟಿಗಳ ಪೈಕಿ 13 ಜನರು ಶ್ರೀಗಳ ಪದಚ್ಯುತಿಗೆ ನಿರ್ಣಯ ಕೈಗೊಂಡರು. ಟ್ರಸ್ಟಿಗಳು ಹಾಗೂ ಶ್ರೀಗಳ ನಡುವಿನ ಸುದೀರ್ಘ ತಿಕ್ಕಾಟ ಸೋಮವಾರ ಬಹಿರಂಗವಾಗಿಯೇ ವ್ಯಕ್ತವಾಯಿತು.

'ಬೆಂಗಳೂರಿನ ಶ್ವಾಸಯೋಗ ಪೀಠವನ್ನು ತ್ಯಜಿಸಬೇಕು ಎಂದು 2018ರಲ್ಲಿ ವೀರಶೈವ ಲಿಂಗಾಯತ ಪಂಚಮಸಾಲಿ ಮಠದ ಪೀಠಾರೋಹಣ ವೇಳೆ ತಿಳಿಸಲಾಗಿತ್ತು. ಶ್ರೀಗಳು ಒಪ್ಪಿದ್ದರು. ಇಷ್ಟು ವರ್ಷ ಕಳೆದರೂ ಶ್ವಾಸ ಯೋಗ ಪೀಠ ತ್ಯಜಿಸಲು ಮುಂದಾಗಿಲ್ಲ. ಹೀಗಾಗಿ ಪದಚ್ಯುತಿ ನಿರ್ಣಯ ವನ್ನು ಕೈಗೊಳ್ಳಲಾಗಿದೆ' ಎಂದು ಟ್ರಸ್ಟಿಗಳಾದ ಬಾವಿ ಬೆಟ್ಟಪ್ಪ, ಬಸವರಾಜ್ ದಿಂಡೂರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಹರಿಹರ ಸಮೀಪದ ಪಂಚಮಸಾಲಿ ಗುರುಪೀಠದ ಒಳಗೆ ಬೆಂಬಲಿಗರನ್ನು ಬಿಡುವ ವಿಷಯದಲ್ಲಿ ವಚನಾನಂದ ಶ್ರೀ ಹಾಗೂ ಪೊಲೀಸರ ನಡುವೆ ವಾಗ್ವಾದ ನಡೆಯಿತು

'ಟ್ರಸ್ಟ್‌ನ ನಿರ್ಣಯವನ್ನು ಹಿಂದೆ ಸ್ವಾಮೀಜಿಗೆ ತಿಳಿಸಿದಾಗ ಮಾರ್ಚ್ 24ರವರೆಗೆ ಸಮಯ ಕೋರಿದ್ದರು. ಆ ಗಡುವು ಮೀರಿದೆ. ಈಗ ಶ್ರೀಗಳು ಟ್ರಸ್ಟ್‌ನ ಮುಖಂಡರ ವಿರುದ್ಧವೇ ಸಮುದಾಯದವರನ್ನು ಎತ್ತಿಕಟ್ಟುವ ಕೆಲಸ ಮಾಡುತ್ತಿದ್ದಾರೆ. ಈ ನಡೆ-ನುಡಿ ಸರಿಯಿಲ್ಲ. ಟ್ರಸ್ಟಿಗಳನ್ನು ಕೆಟ್ಟದಾಗಿ ನಿಂದಿಸುತ್ತಿದ್ದಾರೆ' ಎಂದು ದೂರಿದರು.

'ಚಪ್ಪಲಿ ಬಿಡುವ ಜಾಗದಲ್ಲಿ ಟ್ರಸ್ಟಿಗಳನ್ನು ನಿಲ್ಲಿಸುವುದಾಗಿ ವಚನಾನಂದ ಶ್ರೀ ಹೇಳಿದ್ದರು. ಏಕವ್ಯಕ್ತಿ ಟ್ರಸ್ಟ್ ಮಾಡುವಂತೆ ಒತ್ತಾಯಿಸಿದ್ದರು. ಒಪ್ಪದಿದ್ದಾಗ ಬೆಂಬಲಿಗರ ಮೂಲಕ 'ಲೆಕ್ಕ ಕೊಡಿ' ಎಂಬ ನಾಟಕವಾಡುತ್ತಿದ್ದಾರೆ. ಇದರ ಹಿಂದೆ ರಾಜಕೀಯ ಪಿತೂರಿಯೂ ಇದೆ' ಎಂದು ಅವರು ಹೇಳಿದರು.

'ಲೆಕ್ಕ ಕೇಳುವುದಕ್ಕೆ ಅಭ್ಯಂತರ ಇಲ್ಲ. ಪ್ರತಿ ಲೆಕ್ಕವನ್ನೂ ನೋಟಿಸ್ ಬೋರ್ಡ್‌ನಲ್ಲಿ ಹಾಕಿದ್ದೇವೆ. ಯಾರು ಬೇಕಾದರೂ ಪರಿಶೀಲಿಸಬಹುದು' ಎಂದರು.

> ಶ್ವಾಸ ಯೋಗ ಪೀಠ ತ್ಯಜಿಸುವ ಬಗ್ಗೆ ಪೀಠಾರೋಹಣದ ವೇಳೆ ಷರತ್ತು ವಿಧಿಸಿರಲಿಲ್ಲ. ಟ್ರಸ್ಟ್‌ನವರೇ ಒತ್ತಾಯಿಸಿ ನನ್ನನ್ನು ಪೀಠಕ್ಕೆ ಕರೆತಂದಿದ್ದರು
>
> **ವಚನಾನಂದ ಶ್ರೀ,** ಪಂಚಮಸಾಲಿ ಗುರುಪೀಠ

> ಟ್ರಸ್ಟ್‌ನ ನಿರ್ಣಯವನ್ನು ಸ್ವಾಮೀಜಿ ಅವರಿಗೆ ತಿಳಿಸಿದ್ದೇವೆ. ಶ್ರೀಗಳೇ ಮಠದಿಂದ ಹೊರ ನಡೆದರೆ ಉತ್ತಮ. ಇಲ್ಲವಾದರೆ ಕಾನೂನು ಅದರ ಕೆಲಸ ಮಾಡುತ್ತದೆ
>
> **ಜೆ.ಪಿ.ಪಾಟೀಲ,** ಟ್ರಸ್ಟಿ

'ಭಕ್ತರು ಲೆಕ್ಕ ಕೇಳಿದ್ದಕ್ಕೆ ಟಾರ್ಗೆಟ್'

'ನನ್ನ ಉಚ್ಚಾಟನೆ ವಿಷಯವೇ ಹಾಸ್ಯಾಸ್ಪದ. ಟ್ರಸ್ಟ್‌ನವರಿಗೆ 'ಲೆಕ್ಕ ಕೊಡಿ' ಎಂದು ಮಠದ ಭಕ್ತರು ಕೇಳಿದ್ದಕ್ಕೆ ನನ್ನನ್ನು ಟಾರ್ಗೆಟ್ ಮಾಡಿದ್ದಾರೆ. ಷಡ್ಯಂತ್ರ ಮಾಡಿ ಉಚ್ಚಾಟನೆ ಮಾಡಿದ್ದಾರೆ' ಎಂದು ಪಂಚಮಸಾಲಿ ಪೀಠದ ವಚನಾನಂದ ಶ್ರೀ ತಿಳಿಸಿದರು.

'ಹಗರಣ ನಡೆಸಿದ ಕಳ್ಳರೇ ಪೊಲೀಸರ ರಕ್ಷಣೆಯಲ್ಲಿ ಸಭೆಗೆ ಬಂದಿದ್ದಾರೆ. ಇಲ್ಲಿಯವರೆಗೆ ದೇಣಿಗೆ ನೀಡಿದವರ ಮಾಹಿತಿಯನ್ನು ನೀಡುತ್ತಿಲ್ಲ. ವೀರಶೈವ ಲಿಂಗಾಯತ ವಿರೋಧಿಗಳು ಟ್ರಸ್ಟ್‌ನಲ್ಲಿದ್ದಾರೆ. ಬಸವಣ್ಣನ ಚಿತ್ರ ಹಾಕಲೂ ವಿರೋಧಿಸುತ್ತಿದ್ದಾರೆ' ಎಂದು ದೂರಿದರು. 'ಭಕ್ತರೊಂದಿಗೆ ಚರ್ಚಿಸಿ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು' ಎಂದು ತಿಳಿಸಿದರು. ಮಠದ ಒಳಗೆ ಟ್ರಸ್ಟಿಗಳ ಸಭೆ ನಡೆದರೆ, ಹೊರಗೆ ಶ್ರೀಗಳ ಬೆಂಬಲಿಗರು 'ಲೆಕ್ಕ ಕೊಡಿ' ಎಂದು ಪ್ರತಿಭಟನೆ ನಡೆಸಿದರು. ಒಂದುಹಂತದಲ್ಲಿ ಪೊಲೀಸರ ಜೊತೆ ವಾಗ್ವಾದ ನಡೆಯಿತು. ಪೊಲೀಸರು ಪ್ರತಿಭಟನಕಾರರನ್ನು ವಶಕ್ಕೆ ಪಡೆದು ಬಿಡುಗಡೆಗೊಳಿಸಿದರು.

ಐಪಿಎಲ್: ಮೆಟ್ರೊ ಸಂಚಾರ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಏಪ್ರಿಲ್ 15 ಮತ್ತು 24ರಂದು ನಡೆಯಲಿರುವ ಐಪಿಎಲ್ ಟಿ-20 ಕ್ರಿಕೆಟ್ ವೀಕ್ಷಣೆಗೆ ಬರುವ ಮೆಟ್ರೊ ಪ್ರಯಾಣಿಕರ ಅನುಕೂಲಕ್ಕಾಗಿ ವಿವಿಧ ಟರ್ಮಿನಲ್ ನಿಲ್ದಾಣಗಳಿಂದ ಕೊನೆಯ ಮೆಟ್ರೊ ಸಂಚಾರದ ಅವಧಿಯನ್ನು ವಿಸ್ತರಿಸಲಾಗಿದೆ.

ವೈಟ್‌ಫೀಲ್ಡ್‌ನಿಂದ (ಕಾಡುಗೋಡಿ) ರಾತ್ರಿ 12.30ಕ್ಕೆ, ಚಲ್ಲಘಟ್ಟ, ರೇಷ್ಮೆ ಸಂಸ್ಥೆ ಹಾಗೂ ಮಾದಾವರ ಟರ್ಮಿನಲ್‌ಗಳಿಂದ ರಾತ್ರಿ 12.45ಕ್ಕೆ, ಬೊಮ್ಮಸಂದ್ರದಿಂದ ರಾತ್ರಿ 12.30ಕ್ಕೆ, ಆರ್.ವಿ. ರಸ್ತೆಯಿಂದ ರಾತ್ರಿ 2ಕ್ಕೆ ಕೊನೆ ರೈಲು ಸಂಚರಿಸಲಿದೆ.

ನಾಡಪ್ರಭು ಕೆಂಪೇಗೌಡ ನಿಲ್ದಾಣ-ಮೆಜೆಸ್ಟಿಕ್‌ನಿಂದ ನಾಲ್ಕು ದಿಕ್ಕುಗಳಿಗೆ ಮಧ್ಯರಾತ್ರಿ 1.30ಕ್ಕೆ ಕೊನೆಯ ರೈಲು ಹೊರಡಲಿದೆ.

ನಮ್ಮ ಮೆಟ್ರೊ 44 ನಿಲ್ದಾಣಗಳಲ್ಲಿ ಹೆಚ್ಚುವರಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಈ ಪಾರ್ಕಿಂಗ್ ಸ್ಥಳಗಳಲ್ಲಿ ವಾಹನಗಳನ್ನು ನಿಲ್ಲಿಸಿ, ಕ್ರೀಡಾಂಗಣಕ್ಕೆ ಮೆಟ್ರೊದಲ್ಲಿ ಸಂಚರಿಸಬಹುದು. ಐಪಿಎಲ್ ಕ್ರಿಕೆಟ್ ಇರುವ ದಿನಗಳಲ್ಲಿ ದ್ವಿಚಕ್ರ ವಾಹನಗಳಿಗೆ ₹30 ಹಾಗೂ ಕಾರುಗಳಿಗೆ ₹60 ಶುಲ್ಕ ನಿಗದಿ ಮಾಡಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಐಪಿಎಲ್ ಟಿ-20 ಟಿಕೆಟ್ ಇರುವವರು ಅಂದು 'ನಮ್ಮ ಮೆಟ್ರೊ'ದಲ್ಲಿ ಉಚಿತವಾಗಿ ಸಂಚರಿಸಲು ಅವಕಾಶ ಕಲ್ಪಿಸಿಕೊಡಲಾಗಿದೆ. ಎರಡೂ ಕಡೆಯ ಪ್ರಯಾಣಕ್ಕೆ ಐಪಿಎಲ್ ಪಂದ್ಯದ ಟಿಕೆಟ್‌ಗಳಲ್ಲಿ 'ನಮ್ಮ ಮೆಟ್ರೊ' ಕ್ಯೂಆರ್ ಕೋಡ್ ಮುದ್ರಿತವಾಗಿರುತ್ತದೆ. ಡಿಜಿಟಲ್ ಐಪಿಎಲ್ ಟಿಕೆಟ್‌ಗಳಲ್ಲಿಯೂ ಲಭ್ಯವಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ. ಏ.18ರಂದು ಐಪಿಎಲ್ ಪಂದ್ಯವು ರಾತ್ರಿ 7.30ಕ್ಕೆ ಮುಗಿಯುವುದರಿಂದ ಮೆಟ್ರೊ ಸಂಚಾರದಲ್ಲಿ ಬದಲಾವಣೆ ಇರುವುದಿಲ್ಲ ಎಂದು ಮಾಹಿತಿ ನೀಡಿದ್ದಾರೆ.

ಬಿಎಂಟಿಸಿ ಬಸ್ ಹೆಚ್ಚುವರಿ ಸಂಚಾರ

ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಏ.15, 18, 24ರಂದು ನಡೆಯಲಿರುವ ಕ್ರಿಕೆಟ್ ಪಂದ್ಯವನ್ನು ವೀಕ್ಷಿಸಲು ಬರುವ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಬಿಎಂಟಿಸಿ ಬಸ್‌ಗಳು ಹೆಚ್ಚುವರಿಯಾಗಿ ಸಂಚರಿಸಲಿವೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಎಂ. ಚಿನ್ನಸ್ವಾಮಿ ಕ್ರೀಡಾಂಗಣದಿಂದ ಸರ್ಜಾಪುರ, ಎಲೆಕ್ಟ್ರಾನಿಕ್ ಸಿಟಿ (ಹೊಸೂರು ರಸ್ತೆ), ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್, ಆರ್.ಕೆ. ಹೆಗಡೆ ನಗರ-ಯಲಹಂಕ (ನಾಗವಾರ, ಟ್ಯಾನರಿ ರಸ್ತೆ), ಹೊಸಕೋಟೆ, ಬನಶಂಕರಿಗೆ ಬಸ್‌ಗಳು ಸಂಚರಿಸಲಿವೆ.

ಆಟೊ ಚಾಲಕರಿಗೆ ಧ್ರುವ ಸಹಾಯ

ಬೆಂಗಳೂರು: ಆಟೊ ಎಲ್‌ಪಿಜಿ ಪೂರೈಕೆಯಲ್ಲಿನ ವ್ಯತ್ಯಯದಿಂದ ಆಟೊ ಚಾಲಕರು ಸಂಕಷ್ಟಕ್ಕೆ ಒಳಗಾಗಿರುವುದರಿಂದ ನಟ ಧ್ರುವ ಸರ್ಜಾ ಅವರು ₹25 ಲಕ್ಷ ಸಹಾಯ ಮಾಡಿದ್ದಾರೆ.



ಧ್ರುವ ಸರ್ಜಾ

ಈ ಕುರಿತು ವಿಡಿಯೊ ಹಂಚಿಕೊಂಡಿರುವ ಅವರು, 'ಆಟೊ ಎಲ್‌ಪಿಜಿ ಸಮಸ್ಯೆಯಿಂದ ಆಟೊಗಳ ಸಂಚಾರ ನಿಂತಿದೆ. ಅನಿಲ ಸಿಕ್ಕಿದರೂ ದುಪ್ಪಟ್ಟು ದರವಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪಕ್ಷಭೇದ ಮರೆತು ಆದಷ್ಟು ಬೇಗ ಈ ಸಮಸ್ಯೆ ಬಗೆಹರಿಸಬೇಕು' ಎಂದಿದ್ದಾರೆ.

ನಗರದಲ್ಲಿ ಇಂದು

ಅಂಬೇಡ್ಕರ್ ಜಯಂತಿ: ಅತಿಥಿ: ಅಶೋಕ್ ದಳವಾಯಿ, ಅಧ್ಯಕ್ಷತೆ: ಪ್ರೊ.ವಿಶ್ವನಾಥ, ಆಯೋಜನೆ ಹಾಗೂ ಸ್ಥಳ: ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಳಿಗ್ಗೆ 8.30

ಅಗ್ನಿಶಾಮಕ ಸೇವಾ ಸಪ್ತಾಹ ಹಾಗೂ ಅಗ್ನಿಶಾಮಕ ಹುತಾತ್ಮರ ದಿನಾಚರಣೆ: ಅತಿಥಿ: ಪ್ರಶಾಂತ್ ಕುಮಾರ್ ಠಾಕೂರ್, ಉಪಸ್ಥಿತಿ: ಎಂ.ನಂಜುಂಡಸ್ವಾಮಿ, ರೇಣುಕಾ ಕೆ. ಸುಕುಮಾರ್, ಆಯೋಜನೆ: ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ರಾಜ್ಯ ವಿಪತ್ತು ಸ್ಪಂದನಾ ಪಡೆಯ ನಿರ್ದೇಶನಾಲಯ, ಸ್ಥಳ: ಆರ್.ಎ. ಮುಂಡ್ಕೂರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ತರಬೇತಿ ಅಕಾಡೆಮಿ, ಹುತಾತ್ಮರ ಉದ್ಯಾನ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 9

ಅಂಬೇಡ್ಕರ್ ಜಯಂತಿ: ಅಧ್ಯಕ್ಷತೆ: ಜಯಕರ ಎಸ್.ಎಂ., ಮುಖ್ಯ ಅತಿಥಿ: ಮೂಡ್ನಾಕೂಡು ಚಿನ್ನಸ್ವಾಮಿ, ಬಂಜಗೆರೆ ಜಯಪ್ರಕಾಶ್, ಉಪಸ್ಥಿತಿ: ಕೆ.ಟಿ. ಶಾಂತಲಾ, ಸಿ.ಎಸ್. ಕರಿಗಾರ್, ಸುನೀತಾ ಎಂ., ಆಯೋಜನೆ ಹಾಗೂ ಸ್ಥಳ: ಆಡಳಿತ ಕಚೇರಿ ಮುಂಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಳಿಗ್ಗೆ 9.30



ಅಂಬೇಡ್ಕರ್

ಅಂಬೇಡ್ಕರ್ ಜಯಂತಿ: ಉದ್ಘಾಟನೆ: ಎಂ.ವೆಂಕಟಸ್ವಾಮಿ, ಅತಿಥಿ: ಡಾ.ರಮಣರಾವ್, ಮುಖ್ಯ ಭಾಷಣ: ವೈ. ಮರಿಸ್ವಾಮಿ, ಆಯೋಜನೆ ಹಾಗೂ ಸ್ಥಳ: ನಾಗಸೇನಾ ವಿದ್ಯಾಕೇಂದ್ರ, ಸದಾಶಿವನಗರ, ಬೆಳಿಗ್ಗೆ 9.30

ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಹಾಗೂ ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಅಂಬೇಡ್ಕರ್ ಅವರ ಪ್ರತಿಮೆಗೆ ಗೌರವ ಸಮರ್ಪಣೆ: ಎಚ್.ಸಿ.ಮಹದೇವಪ್ಪ, ಉಪಸ್ಥಿತಿ: ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಸಮಾಜ ಕಲ್ಯಾಣ ಇಲಾಖೆ, ಸ್ಥಳ: ವಿಧಾನಸೌಧದ ಮುಂಭಾಗ, ಬೆಳಿಗ್ಗೆ 10

ಅಂಬೇಡ್ಕರ್ ಜಯಂತಿ: ಅತಿಥಿಗಳು ಗೋಪಾಲ್ ಎಸ್. ಸೆಟ್ಟಿ, ಎಂ. ಮಹಾದೇವ್, ಎ.ಆರ್. ಕೃಷ್ಣಮೂರ್ತಿ, ಎಸ್. ಶಿವಮಲ್ಲು, ಬಿ.ಎನ್. ಉಮೇಶ್, ಅಧ್ಯಕ್ಷತೆ: ಎಸ್. ಮರಿಸ್ವಾಮಿ, ಆಯೋಜನೆ ಹಾಗೂ ಸ್ಥಳ: ಡಾ. ಅಂಬೇಡ್ಕರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಲ್ಲತ್ತಹಳ್ಳಿ, ಬೆಳಿಗ್ಗೆ 10

ಅಂಬೇಡ್ಕರ್ ಜಯಂತಿ: ಉಪಸ್ಥಿತಿ: ಎಂ. ಗುರುಮೂರ್ತಿ, ಎಸ್. ರುದ್ರೇಶ್, ಕೆ. ಕಣ್ಣನ್, ಮಂಜುನಾಥ್, ಆರ್. ಶಿವಪ್ಪ, ನಾಗೇಶ್, ಹರೀಶ್, ಎಂ. ಮಾರಿ, ನಾಗೇಂದ್ರ ಕುಮಾರ್ ಕೆ., ತ್ಯಾಗರಾಜನ್, ಆಯೋಜನೆ: ಮೂಲನಿವಾಸಿ ಸಂಘಟನೆಗಳ ಒಕ್ಕೂಟ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಪಾರ್ಕ್, ಆರ್.ಆರ್.ನಗರ, ಬೆಳಿಗ್ಗೆ 10

ಅಂಬೇಡ್ಕರ್ ಹಬ್ಬ: ಬೋಧಿವೃಕ್ಷ ಮತ್ತು ಬೋಧಿವರ್ಧನ ಪ್ರಶಸ್ತಿ ಪ್ರದಾನ: ಕುಂ. ವೀರಭದ್ರಪ್ಪ, ಅತಿಥಿ: ಅಶೋಕ್, ಅಧ್ಯಕ್ಷತೆ: ಎಸ್. ಮರಿಸ್ವಾಮಿ, ಪ್ರಶಸ್ತಿ ಪುರಸ್ಕೃತರು: ಕೆ. ವೀರಮಣಿ, ಕೆ. ಗಂಗಮ್ಮ, ಬಸಣ್ಣಾ ಸಿಂಗೆ, ರಾಮಕೃಷ್ಣಪ್ಪ, ಸೀತವ್ವ ಜೋಡಟ್ಟಿ, ಮರಿಯಮ್ಮ ಬಿಜ್ಜೂರು, ಆಯೋಜನೆ ಹಾಗೂ ಸ್ಥಳ: ಸ್ಫೂರ್ತಿ ಧಾಮ, ಅಂಜನಾನಗರ, ಮಾಗಡಿ ಮುಖ್ಯರಸ್ತೆ, ಬೆಳಿಗ್ಗೆ 11

ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಮ್ ಜಯಂತಿ ಅಂಗವಾಗಿ ರಾಜ್ಯಮಟ್ಟದ ದಲಿತ ಹಿಂದುಳಿದ ಅಲ್ಪಸಂಖ್ಯಾತರ ಏಕತಾ ಸಮಾವೇಶ: ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಲಿಡ್ಕರ್ ಭವನ, ವಸಂತನಗರ, ಬೆಳಿಗ್ಗೆ 11.30

ಅಂಬೇಡ್ಕರ್ ಜಯಂತಿ ಹಾಗೂ 'ಭೀಮ ರತ್ನ ಪ್ರಶಸ್ತಿ' ಪ್ರದಾನ ಸಮಾರಂಭ: ಸಾನ್ನಿಧ್ಯ: ಬೋಧಿದತ್ತ ಭಂತೇಜಿ, ಮಿಲಿಂದ್ ಗುರೂಜಿ, ಉದ್ಘಾಟನೆ: ಬಿ.ಟಿ. ಲಲಿತಾನಾಯಕ್, ಪ್ರಶಸ್ತಿ ಪುರಸ್ಕೃತರು: ಕೋಟಿಗಾನಹಳ್ಳಿ ರಾಮಯ್ಯ, ಅಧ್ಯಕ್ಷತೆ: ಎಂ. ವೆಂಕಟಸ್ವಾಮಿ, ಅಧ್ಯಕ್ಷತೆ: ವೈ. ಮರಿಸ್ವಾಮಿ, ಆಯೋಜನೆ: ಸಮತಾ ಸೈನಿಕ ದಳ, ಸ್ಥಳ: ಹೋಟೆಲ್ ಕಾನಿಷ್ಕ, ಗಾಂಧಿನಗರ, ಮಧ್ಯಾಹ್ನ 12

58ನೇ ವರ್ಷದ ಮಕ್ಕಳ ಬೇಸಿಗೆ ರಜೆಯ ಶಿಕ್ಷಣ ಹಾಗೂ ಮನರಂಜನಾ ಶಿಬಿರ ಉದ್ಘಾಟನಾ ಸಮಾರಂಭ: ಅಧ್ಯಕ್ಷತೆ: ಕೆ. ಮೋಹನ್ ದೇವ್ ಆಳ್ವ, ಉದ್ಘಾಟನೆ: ಕೆ. ಕಾಳಿ, ಅತಿಥಿ: ಕಪಿಲ್ ಪವನ್ ಪಂತ್, ಆಯೋಜನೆ ಹಾಗೂ ಸ್ಥಳ: ಅಖಿಲ ಕರ್ನಾಟಕ ಮಕ್ಕಳ ಕೂಟ, ಕೋಟೆ, ಮಧ್ಯಾಹ್ನ 3

88ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಶ್ರೀನಿವಾಸ್ ಶರ್ಮಾ ಮತ್ತು ತಂಡ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಛೇರಿ: ವೆಂಕಟೇಶ್ ಕುಮಾರ್, ಸತೀಶ್ ಕೊಲ್ಲಿ, ಕೇಶವ ಜೋಶಿ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 4.30 ರಿಂದ

ದತ್ತಿ ಉಪನ್ಯಾಸ: 'ಕಠೋಪನಿಷತ್' ವಿಷಯದ ಬಗ್ಗೆ: ಎಸ್. ಎಸ್. ಶ್ರೀಧರಮೂರ್ತಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಅಂಬೇಡ್ಕರ್ ಜಯಂತಿ ಪ್ರಯುಕ್ತ 'ಅಂಬೇಡ್ಕರ್ ವಾದ' ಸಂಚಿಕೆ ಬಿಡುಗಡೆ: ಪುರುಷೋತ್ತಮ ಬಿಳಿಮಲೆ, ಅತಿಥಿ: ನಟರಾಜ್ ಹುಳಿಯಾರ್, ಅಧ್ಯಕ್ಷತೆ: ಮಾವಳ್ಳಿ ಶಂಕರ್, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ಸ್ಥಳ: ವಿಧಾನಸೌಧದ ಅಂಬೇಡ್ಕರ್ ಪ್ರತಿಮೆ ಮುಂಭಾಗ, ಸಂಜೆ 6

33ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಕಲ್ಯಾಣಪುರಂ ಅರವಿಂದ್, ಪಿಟೀಲು: ಎಚ್.ಕೆ. ವೆಂಕಟರಾಮ್, ಮೃದಂಗ: ಅರುಣಪ್ರಕಾಶ್ ಕೃಷ್ಣನ್, ಘಟ: ಜಿ.ಎಸ್. ರಾಮಾನುಜಂ, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30ರಿಂದ

26ನೇ ವರ್ಷದ ಪ್ರವಚನ ವಾಹಿನಿ: ಭಾಗವತದ ಸಂದೇಶ: ಅಶೋಕಾಚಾರ್ಯ ಜೋಶಿ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಸಮಗ್ರ ಮಹಾಭಾರತ' ಪ್ರವಚನ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ ಹಾಗೂ ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಸಂಜೆ 6.30

'ಹುಚ್ಚರಯ್ಯ ಹುಚ್ಚರು' ನಾಟಕ ಪ್ರದರ್ಶನ: ಕಥೆ ಮತ್ತು ಸಂಭಾಷಣೆ: ಮನೋಜ್ ಎಂ.ಆರ್., ತಂಡ: ಪಯಣ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಬಿಬಿಸಿ ಟೆಂಡರ್ ರದ್ದತಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಬಹುನಿರೀಕ್ಷಿತ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಬಿಬಿಸಿ-ಪಿಆರ್‌ಆರ್-1) ಯೋಜನೆಗೆ ಆಹ್ವಾನಿಸಿರುವ ಟೆಂಡರ್ ರದ್ದುಗೊಳಿಸಬೇಕು ಎಂದು ಪಿಆರ್‌ಆರ್ ರೈತ ಹಾಗೂ ನಿವೇಶನದಾರರ ಸಂಘ ಆಗ್ರಹಿಸಿದೆ.

ಈ ಸಂಬಂಧ ಸಂಘದ ಅಧ್ಯಕ್ಷ ಮಾವಳ್ಳಿಪುರ ಶ್ರೀನಿವಾಸ್ ನೇತೃತ್ವದ ನಿಯೋಗ ಬಿಬಿಸಿ ವಿಶೇಷ ಉದ್ದೇಶ ಘಟಕದ (ಎಸ್‌ಪಿವಿ) ಅಧ್ಯಕ್ಷ ಎಲ್.ಕೆ.ಅತೀಕ್ ಹಾಗೂ ಆಯುಕ್ತ ಪಿ.ಮಣಿವಣ್ಣನ್ ಅವರಿಗೆ ಮನವಿ ಸಲ್ಲಿಸಿತು.

ತುಮಕೂರು ರಸ್ತೆ ಮತ್ತು ನಗರದ ಹೊರವಲಯದಲ್ಲಿರುವ ಬಳ್ಳಾರಿ ರಸ್ತೆ ಸಂಪರ್ಕಿಸುವ 19.80 ಕಿ.ಮೀ. ಉದ್ದದ ಯೋಜನೆಯ ನಿರ್ಮಾಣಕ್ಕಾಗಿ ಟೆಂಡರ್ ಕರೆಯಲಾಗಿದೆ. ಯೋಜನೆಗೆ 2007ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿದ್ದು, ಈವರೆಗೂ ಅನುಷ್ಠಾನ ಗೊಂಡಿಲ್ಲ. ಹಾಗಾಗಿ ಬಿಡಿಎ ಕಾಯ್ದೆ 1894ರ ಸೆಕ್ಷನ್ 27 ಪ್ರಕಾರ ಅಧಿಸೂಚನೆ ಹೊರಡಿಸಿದ ಬಳಿಕ ಐದು ವರ್ಷಗಳಲ್ಲಿ ಜಾರಿಯಾಗದಿದ್ದರೆ ಯೋಜನೆಯೇ ರದ್ದಾಗುತ್ತದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.



ಬಿಬಿಸಿ ವಿಶೇಷ ಉದ್ದೇಶ ಘಟಕದ (ಎಸ್‌ಪಿವಿ) ಅಧ್ಯಕ್ಷ ಎಲ್.ಕೆ.ಅತೀಕ್ ಹಾಗೂ ಆಯುಕ್ತ ಪಿ.ಮಣಿವಣ್ಣನ್ ಅವರಿಗೆ ಪಿಆರ್‌ಆರ್ ರೈತ ಹಾಗೂ ನಿವೇಶನದಾರರ ಸಂಘ ಮನವಿ ಸಲ್ಲಿಸಿತು. ಮುಖಂಡರಾದ ಮಾವಳ್ಳಿಪುರ ಶ್ರೀನಿವಾಸ್, ಜಗನ್ನಾಥ್ ಈರಂಡಹಳ್ಳಿ, ಗೌತಮ್ ಚಂದ ಜೈನ್, ಗೋವಿಂದರಾಜು ಇದ್ದರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆಗೆ ತಿದ್ದುಪಡಿ ತಂದು, ಕೇಂದ್ರ ಸರ್ಕಾರದ 2013ರ ಭೂ ಸ್ವಾಧೀನ ಮತ್ತು ಪುನರ್ವಸತಿ ಕಾಯ್ದೆ ಜಾರಿಗೊಳಿಸಬೇಕು. ರೈತರ ಮನವಿ ನಿರ್ಲಕ್ಷಿಸಿದರೆ ಪ್ರಾಧಿಕಾರವೇ ಸಂಪೂರ್ಣ ಹೊಣೆಯಾಗಲಿದ್ದು, ಕಾನೂನು ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದ್ದಾರೆ.

ನಿಯೋಗದಲ್ಲಿ ಸಂಘದ ಉಪಾಧ್ಯಕ್ಷರಾದ ಜಗನ್ನಾಥ್ ಈರಂಡಹಳ್ಳಿ, ಗೌತಮ್ ಚಂದ ಜೈನ್, ಗೋವಿಂದರಾಜು, ಪ್ರಧಾನ ಕಾರ್ಯದರ್ಶಿ ಕೃಷ್ಣ ರಮೇಶ್, ಖಜಾಂಚಿ ನರಸಿಂಹಮೂರ್ತಿ, ಜಂಟಿ ಕಾರ್ಯದರ್ಶಿ ಎಂ.ವೆಂಕಟೇಶ್, ಗೋಪಾಲರೆಡ್ಡಿ ಇದ್ದರು.

ಕನ್ನಡ ಜನಶಕ್ತಿ ಕೇಂದ್ರದಿಂದ ನಟಿ ಗಿರಿಜಾ ಲೋಕೇಶ್ ಅವರಿಗೆ ರಾಜ್‌ಕುಮಾರ್ ಪ್ರಶಸ್ತಿ ಪ್ರದಾನ


'ಸಿನಿಮಾ ಸಂಸ್ಕೃತಿ ಬೆಳೆಸಿದ ರಾಜ್‌ಕುಮಾರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್‌ಕುಮಾರ್ ಅವರು ನಟನೆ, ಭಾಷಾ ಪ್ರಯೋಗಗಳ ವಿಶಿಷ್ಟತೆಯಿಂದ ಬುದ್ಧಿ ಜೀವಿಗಳೂ ಸೇರಿದಂತೆ ಸಮಾಜದ ಎಲ್ಲ ವರ್ಗದ ಜನರನ್ನು ಸಿನಿಮಾದ ಕಡೆ ಆಕರ್ಷಿಸಿದರು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹೇಳಿದರು.

ಕನ್ನಡ ಜನಶಕ್ತಿ ಕೇಂದ್ರವು ಕನ್ನಡ ಭವನದ ನಯನ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಸಮಾರಂಭದಲ್ಲಿ ನಟಿ ಗಿರಿಜಾ ಲೋಕೇಶ್ ಅವರಿಗೆ ವರನಟ ಡಾ.ರಾಜ್‌ಕುಮಾರ್ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

'ಸಾಮಾನ್ಯವಾಗಿ ಕಲಾತ್ಮಕ ಚಿತ್ರಗಳ ಬಗ್ಗೆ ಮಾತ್ರ ಬುದ್ಧಿಜೀವಿಗಳು ಯೋಚಿಸುತ್ತಿರುವಾಗ, ರಾಜ್‌ಕುಮಾರ್ ಅವರು ಕರ್ನಾಟಕದ ಜನಪ್ರಿಯ ಸಂಸ್ಕೃತಿಗೆ ಹೊಸ ವ್ಯಾಖ್ಯಾನ ಬರೆದರು. ಈ ಕುರಿತು ಇನ್ನಷ್ಟು ಅಧ್ಯಯನಗಳು ನಡೆಯಬೇಕಾಗಿವೆ' ಎಂದು ತಿಳಿಸಿದರು.



ನಟಿ ಗಿರಿಜಾ ಲೋಕೇಶ್ ಅವರಿಗೆ 'ವರನಟ ಡಾ.ರಾಜಕುಮಾರ್' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕನ್ನಡ ಅಭಿವೃದ್ಧಿ ಪ್ರಾಧಿಕಾರ'ದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, 'ಕನ್ನಡ ಜನಶಕ್ತಿ ಕೇಂದ್ರ'ದ ಅಧ್ಯಕ್ಷ ಸಿ.ಕೆ. ರಾಮೇಗೌಡ, ಗೌರವ ಸಲಹೆಗಾರ ಪಿ. ಮಲ್ಲಿಕಾರ್ಜುನಪ್ಪ ಮತ್ತು ಕನ್ನಡ ಹೋರಾಟಗಾರ ಸಾ.ರಾ. ಗೋವಿಂದು ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

'ರಂಗಭೂಮಿ ಮತ್ತು ಸಿನಿಮಾ ದೃಷ್ಟಿಯಿಂದ 1970 ಮತ್ತು 1980ರ ದಶಕ ಸುವರ್ಣ ಕಾಲವಾಗಿತ್ತು. ಚೋಮನದುಡಿ, ಭುಜಂಗಯ್ಯನ ದಶಾವತಾರ, ಸಂಸ್ಕಾರ, ವಂಶವೃಕ್ಷ ಮೊದಲಾದ ಕನ್ನಡದ ಕೃತಿಗಳು ಚಲನಚಿತ್ರಗಳಾದ ಕಾಲಘಟ್ಟವದು. ಅಂಥ ಕೃತಿಗಳಿಗೆ ಜೀವ ತುಂಬುವ ಕೆಲಸವನ್ನು ಗಿರಿಜಾ ಲೋಕೇಶ್ ಅಚ್ಚು ಕಟ್ಟಾಗಿ ಮಾಡಿದ್ದರು. ರಂಗಭೂಮಿಯಲ್ಲೂ ಛಾಪು ಮೂಡಿಸಿದ್ದಾರೆ' ಎಂದರು.

ಪ್ರಶಸ್ತಿ ಸ್ವೀಕರಿಸಿದ ಗಿರಿಜಾ ಲೋಕೇಶ್ ಮಾತನಾಡಿ, 'ರಾಜ್‌ಕುಮಾರ್ ಅವರಂತಹ ಶ್ರೇಷ್ಠ ನಟರೊಂದಿಗೆ ಕೆಲಸ ಮಾಡುವ ಅವಕಾಶ ಸಿಕ್ಕಿತ್ತು. ಅವರ ಕುಟುಂಬದೊಂದಿಗೆ ಒಡನಾಟವೂ ಇತ್ತು. ಅವರದ್ದೇ ಹೆಸರಿನ ಪ್ರಶಸ್ತಿಯನ್ನು ನನಗೆ ನೀಡಿರುವುದಕ್ಕೆ ಹೆಮ್ಮೆಯಿದೆ' ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕನ್ನಡ ಹೋರಾಟಗಾರ ಸಾ.ರಾ.ಗೋವಿಂದು ಮಾತನಾಡಿ, 'ರಾಜ್‌ಕುಮಾರ್ ಅವರು ರಾಷ್ಟ್ರ ಮಟ್ಟದ ಅತ್ಯುತ್ತಮ ಕಲಾವಿದ. ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಸ್ವೀಕರಿಸುವ ಸಂದರ್ಭದಲ್ಲಿ ಅವರಿಗೆ ದೊರೆತ ಗೌರವ ನೋಡಿ ಮನ ತುಂಬಿ ಬಂದಿತು. ಈಗಲೂ ಚಳವಳಿಗಳಲ್ಲಿ ನಾನು ಗಟ್ಟಿಯಾಗಿರಲು ಅವರೇ ಕಾರಣ. ಒಂದೇ ಒಂದು ಕಪ್ಪು ಚುಕ್ಕೆ ಬಾರದ ಹಾಗೆ ಹೋರಾಟಗಳನ್ನು ರೂಪಿಸಿಕೊಂಡು ಬಂದಿದ್ದೇವೆ' ಎಂದರು.

ಗಿರಿಜಾ ಲೋಕೇಶ್ ಅವರು ಅಭಿಜಾತ ಕಲಾವಿದೆ. ಅವರ ಕುಟುಂಬ ರಂಗಭೂಮಿಯಲ್ಲಿ ತೊಡಗಿಸಿಕೊಂಡು ಹಲವು ಕಲಾವಿದರನ್ನು ಬೆಳೆಸಿ ಆಶ್ರಯ ನೀಡಿದೆ. ರಂಗಭೂಮಿಯಿಂದ ಬಂದು ಚಿತ್ರರಂಗದಲ್ಲೂ ಹೆಸರು ಮಾಡಿದ ಗಿರಿಜಾ ಅವರಿಗೆ ಪ್ರಶಸ್ತಿ ನೀಡಿದ್ದು ಗೌರವ ಹೆಚ್ಚಿಸಿದೆ ಎಂದು ಹೇಳಿದರು.

ಕನ್ನಡ ಜನಶಕ್ತಿ ಕೇಂದ್ರದ ಸಿ.ಕೆ.ರಾಮೇಗೌಡ, ಸಲಹೆಗಾರ ಪಿ.ಮಲ್ಲಿಕಾರ್ಜುನಪ್ಪ ಮತ್ತಿತರರು ಉಪಸ್ಥಿತರಿದ್ದರು.

ಮಂಗಳವಾರ, ಏಪ್ರಿಲ್ 14, 2026| ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಅಗ್ರಸ್ಥಾನಕ್ಕೆ ಸಿನ್ನರ್
ಭಾನುವಾರ ಮಾಂಟೆ ಕಾರ್ಲೊ ಮಾಸ್ಟರ್ ಪ್ರಶಸ್ತಿ ಗೆದ್ದ ಇಟಲಿಯ ಟೆನಿಸ್ ತಾರೆ ಯಾನಿಕ್ ಸಿನ್ನರ್ ಸೋಮವಾರ ಪ್ರಕಟಗೊಂಡ ಎಟಿಪಿ ರ್‍ಯಾಂಕಿಂಗ್‌ನಲ್ಲಿ ಕಾರ್ಲೋಸ್ ಅಲ್ಕರಾಜ್ ಅವರನ್ನು ಹಿಂದಿಕ್ಕಿ ಮತ್ತೆ ಅಗ್ರಸ್ಥಾನಕ್ಕೇರಿದರು





ಸಾಂಪ್ರದಾಯಿಕ ನೃತ್ಯ...
ಮ್ಯಾನ್ಮಾರ್‌ನ ನೇಪಿಟಾವ್‌ನಲ್ಲಿ ಸಾಂಪ್ರದಾಯಿಕ 'ಜಲ ಉತ್ಸವ'ದ ಉದ್ಘಾಟನೆ ಸಮಾರಂಭದಲ್ಲಿ ನೃತ್ಯ ಪ್ರದರ್ಶಿಸಿದ ಯುವತಿ



ಬೆವರುವಿರೇಕೆ?

• ಡಾ. ವೀಣಾ ಎನ್. ಸುಳ್ಯ



ಬೇಸಿಗೆ ಕಾಲದ ಸಭೆ- ಸಮಾರಂಭಗಳು, ಭೋಜನಕೂಟಗಳು, ಜಾತ್ರೆ, ಸಂತೆಯಲ್ಲಿ 'ಅಯ್ಯೋ ಇದೆಂಥ ಸೆಕೆ! ಎಷ್ಟೊಂದು ಬೆವರು!' ಯಾಕಾದ್ರೂ ಇಷ್ಟು ಬೆವರುತ್ತಿದೆಯೋ' ಎನ್ನುವ ಗೊಣಗಾಟ ಎಲ್ಲೆಲ್ಲೂ ಕೇಳಿ ಬರುತ್ತಿರುತ್ತದೆ. ಪ್ರಖರ ಬಿಸಿಲಿನಲ್ಲಿ ಕೆಲಸ ಮಾಡುವ ಎಷ್ಟೋ ಶ್ರಮಿಕರು, ಹೊಲದಲ್ಲಿ ಕೆಲಸ ಮಾಡುವ ರೈತರು ಬೆವರಿನಿಂದ ತೊಯ್ದು ತೊಪ್ಪೆಯಾಗಿ ಇರುವುದನ್ನು ನೋಡುತ್ತಿರುತ್ತೇವೆ. ಜ್ವರ ಬಂದು ಜ್ವರ ಇಳಿಯುವ ಹೊತ್ತಿನಲ್ಲಿ, ಭಯ, ಆತಂಕಗಳು ಉಂಟಾದಾಗ, ದೇಹದಲ್ಲಿ ಸಕ್ಕರೆ ಅಂಶ ಕಡಿಮೆಯಾದಾಗ, ಋತುಬಂಧದ ಸಮಯದಲ್ಲಿಯೂ ತುಂಬಾ ಬೆವರು ಬರುತ್ತದೆ.

ಹಾಗಾದರೆ ಈ ಬೆವರು ಎಂದರೇನು? ಎಲ್ಲಿಂದ ಮತ್ತು ಏಕೆ ಉತ್ಪತ್ತಿಯಾಗುತ್ತದೆ, ಅದರಿಂದ ಆಗುವ ಸಹಾಯಗಳೇನು? ತೊಂದರೆಗಳೇನು ಎಂಬುದನ್ನು ನೋಡೋಣ.

ನಮ್ಮ ದೇಹದ ಅತ್ಯಂತ ದೊಡ್ಡ ಅಂಗವೆಂದರೆ ಅದು ಚರ್ಮ.

ದೇಹಕ್ಕೆ ರಕ್ಷಣೆ ಕೊಡುವುದರ ಜೊತೆಗೆ ದೇಹದ ತಾಪಮಾನವನ್ನು ಕಾಪಾಡುವ ಜವಾಬ್ದಾರಿಯನ್ನು ಚರ್ಮ ಹೊಂದಿದೆ. ಅದು ಸಾಧ್ಯವಾಗುವುದು ಸ್ವೇದ ಗ್ರಂಥಿಗಳಿಂದ ಉತ್ಪತ್ತಿಯಾಗುವ ಬೆವರಿನ ಮೂಲಕ.

ಬೆವರು ಎಂದರೇನು?: ಸ್ವೇದ ಗ್ರಂಥಿಗಳಿಂದ ಉತ್ಪತ್ತಿಯಾದ ನೀರು ಮತ್ತು ಲವಣಗಳ ಮಿಶ್ರಣ (ಸೋಡಿಯಂ, ಕ್ಲೋರೈಡ್, ಪೊಟ್ಯಾಷಿಯಂ, ಯೂರಿಯಾ, ಲ್ಯಾಕ್ಟಿಕ್ ಆಮ್ಲ, ಸಾರಜನಕ). ನಮ್ಮ ದೇಹದಲ್ಲಿ ಮುಖ್ಯವಾಗಿ ಎರಡು ರೀತಿಯ ಬೆವರು ಗ್ರಂಥಿಗಳಿವೆ. ದೇಹದ ಎಲ್ಲಾ ಭಾಗಗಳಲ್ಲಿ ಗ್ರಂಥಿಗಳಿದ್ದು, ಅಂಗೈ , ಪಾದಗಳು ಮತ್ತು ಹಣೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಬಹುದು. ಸುರುಳಿಯಾಕಾರದ ಭಾಗ- ಬೆವರನ್ನುಉತ್ಪತ್ತಿ ಮಾಡಿದರೆ, ಕೊಳವೆಯಾಕಾರದ ಭಾಗ- ಬೆವರನ್ನು ಚರ್ಮದ ಮೇಲ್ಭಾಗಕ್ಕೆ ಸಾಗಿಸಿ, ಅಲ್ಲಿ ತೆರೆದುಕೊಳ್ಳುತ್ತದೆ. ವಾತಾವರಣದಲ್ಲಿ ಉಷ್ಣತೆ ಜಾಸ್ತಿಯಾದಾಗ ಸಕ್ರಿಯವಾಗಿ ಭಾಗವಹಿಸುವುದು ಈ ಗ್ರಂಥಿಗಳ ಕೆಲಸ.

ಎರಡನೆಯ ವಿಧವಾದ ಸ್ವೇದ ಗ್ರಂಥಿ ಕಾಣಿಸಿಕೊಳ್ಳುವುದು ಕಂಕುಳು, ಜನನೇಂದ್ರಿಯದ ಸುತ್ತ. ಈ ಗ್ರಂಥಿಗಳು ಸಕ್ರಿಯವಾಗುವುದು ಪ್ರೌಢಾವಸ್ಥೆಯಲ್ಲಿ. ಈ ಗ್ರಂಥಿಗಳಲ್ಲಿ ಉತ್ಪತ್ತಿಯಾದ ಬೆವರು ಸ್ವಲ್ಪ ಹೆಚ್ಚು ಜಿಗುಟಾಗಿರುತ್ತದೆ ಮತ್ತು ಪ್ರೋಟೀನ್, ಕಾರ್ಬೋಹೈಡ್ರೇಟ್‌ಗಳು ಬೆರೆತಿರುತ್ತವೆ. ಈ ಗ್ರಂಥಿಯ ಇನ್ನೊಂದು ವಿಶೇಷ, ಬೆವರು ನೇರವಾಗಿ ಚರ್ಮಕ್ಕೆ ತೆರೆದುಕೊಳ್ಳದೆ ಕೂದಲಿನ ಕೋಶದ ದ್ವಾರಕ್ಕೆ ತೆರೆದುಕೊಳ್ಳುತ್ತದೆ.

ಒತ್ತಡ, ಭಯ, ಆತಂಕ, ಲೈಂಗಿಕ ಚಟುವಟಿಕೆಗಳ ಸಮಯದಲ್ಲಿ ಕಾರ್ಯನಿರ್ವಹಿಸುವುದು ಈ ಗ್ರಂಥಿಗಳು. ದೇಹಕ್ಕೆ ತನ್ನದೇ ಆದ ಒಂದು ಘಮಲನ್ನು ಕೊಡುವುದು ಈ ಗ್ರಂಥಿಗಳಿಂದ ಉತ್ಪತ್ತಿಯಾಗುವ ಬೆವರು.

ಚರ್ಮದ ಮೇಲ್ಭಾಗಕ್ಕೆ ಬಂದ ಬೆವರು ಆವಿಯಾಗುವ ಮೂಲಕ ದೇಹದ ಉಷ್ಣತೆಯನ್ನು ಪರಿಣಾಮಕಾರಿಯಾಗಿ ತಂಪಾಗಿಸುತ್ತದೆ. ಅಷ್ಟೇ ಅಲ್ಲದೆ ಶರೀರದಲ್ಲಿ ಉಪ್ಪು ಮತ್ತು ನೀರಿನ ಸಮತೋಲನವನ್ನು ಕಾಪಾಡುತ್ತದೆ. ಚರ್ಮ ಒಣಗದಂತೆ ನೋಡಿಕೊಳ್ಳುತ್ತದೆ. ಸೋಂಕಿನಿಂದ ಕಾಪಾಡುತ್ತದೆ.

ಬೆವರಿನ ಪ್ರಮಾಣ: ಬೆವರಿನ ಪ್ರಮಾಣವು ನಮ್ಮ ದೈನಂದಿನ ಚಟುವಟಿಕೆ, ತಾಪಮಾನ, ಭಾವನಾತ್ಮಕ ಸ್ಥಿತಿಯನ್ನು ಅವಲಂಬಿಸಿದೆ. ಸುಮಾರು 300 ರಿಂದ 700 ಎಂ.ಎಲ್‌ನಷ್ಟು ನೀರು ನಮ್ಮ ಶರೀರದಿಂದ ಬೆವರಿನ ಮೂಲಕ ಹೊರ ಹೋಗಬಹುದು.

ಬೆವರು ಉತ್ಪತ್ತಿಯಾದ ಸಮಯದಲ್ಲಿ ಅದು ಯಾವುದೇ ವಾಸನೆಯನ್ನು ಹೊಂದಿರುವುದಿಲ್ಲ, ಆ ಬಳಿಕ ಚರ್ಮದಲ್ಲಿ ಇರುವ ಬ್ಯಾಕ್ಟೀರಿಯಾಗಳಿಂದ ವಾಸನೆ ಉಂಟಾಗುತ್ತದೆ.

ಬೆವರುವಿಕೆಗೆ ಕಾರಣಗಳು: ದೇಹವು ಇರಬೇಕಾದದ್ದಕಿಂತ ಹೆಚ್ಚು ಬೆಚ್ಚಗಾಗಿರುವುದನ್ನು ಮಿದುಳಿನಲ್ಲಿರುವ ಹೈಪಥಲಾಮಸ್ ಗುರುತಿಸಿ ಸ್ವೇದ ಗ್ರಂಥಿಗಳಿಗೆ , ದೇಹವನ್ನು ತಂಪಾಗಿಸಲು ಸೂಚನೆ ನೀಡುವುದರಿಂದ ಬೆವರಿನ ಉತ್ಪತ್ತಿಯಾಗುತ್ತದೆ. ಉದಾಹರಣೆಗೆ ವಾತಾವರಣದಲ್ಲಿ ಉಷ್ಣತೆ ಹೆಚ್ಚಿದಾಗ, ದೈಹಿಕ ಶ್ರಮದ ಕೆಲಸ ಮಾಡುತ್ತಿದ್ದಾಗ, ವ್ಯಾಯಾಮ ಮಾಡುವಾಗ ಬೆವರು ಉತ್ಪತ್ತಿ ಆಗುತ್ತದೆ. ಭಯ, ಆತಂಕ, ಒತ್ತಡ , ಕೋಪ ಬಂದಾಗ, ಹೃದಯಬಡಿತ ಏರಿದಾಗ , ಸೆರೆಬ್ರಲ್ ಕಾರ್ಟೆಕ್ಸ್‌ನ ಸೂಚನೆಗೆ ಅನುಸಾರವಾಗಿ ಉತ್ಪತ್ತಿಯಾಗುತ್ತದೆ. ಬಿಸಿ ಆಹಾರ , ಸಿಹಿ ಪದಾರ್ಥ, ಮಸಾಲೆ ಬೆರೆಸಿದ ಆಹಾರ ಸೇವನೆ ಮಾಡಿದ ಬಳಿಕ, ಕಾಫಿ, ಟೀ ಕುಡಿದ ತಕ್ಷಣ ಹೆಚ್ಚು ಬೆವರುವುದು.

ಮಲೇರಿಯಾ, ಟೈಫಾಯಿಡ್, ಮಿದುಳು ಜ್ವರ ಕಡಿಮೆಯಾಗುವ ಸಮಯದಲ್ಲಿ ಅಥವಾ ಜ್ವರ ಕಡಿಮೆ ಮಾಡುವ ಮಾತ್ರೆಯನ್ನು ತೆಗೆದುಕೊಂಡು, ದೇಹದ ಉಷ್ಣತೆ ಕಮ್ಮಿಯಾಗುವ ಸಂದರ್ಭದಲ್ಲಿ ಬೆವರುವಿಕೆ ಕಾಣಿಸಿಕೊಳ್ಳುತ್ತದೆ.

ಬೆವರುವಿಕೆ ಕಾಯಿಲೆಯ ಸೂಚನೆ?!

ಮಧುಮೇಹ ಇದ್ದವರಲ್ಲಿ ಸಕ್ಕರೆ ಅಂಶ ಕಡಿಮೆಯಾದ ಸಂದರ್ಭ ದೇಹವೆಲ್ಲಾ ಬೆವರುವುದು ಒಂದು ಸೂಚನೆ.

ಶರೀರದಲ್ಲಿ ಥೈರಾಯಿಡ್ ಜೀವರಸಧಾತುಗಳು ಹೆಚ್ಚಾಗಿದ್ದಾಗ ಶರೀರದ ಚಯಾಪಚಯ ಕ್ರಿಯೆ ಕ್ಷಿಪ್ರವಾಗಿ ನಡೆಯುತ್ತಿರುತ್ತದೆ. ದೇಹದ ಉಷ್ಣತೆ ಹೆಚ್ಚುವುದರಿಂದ ಅದನ್ನು ಸರಿಪಡಿಸಲು ದೇಹದಲ್ಲಿ ಬೆವರಿನ ಉತ್ಪತ್ತಿ ಹೆಚ್ಚಾಗುತ್ತದೆ. ಹೃದಯಾಘಾತ ಉಂಟಾದಾಗ, ನೋವಿನ ಜೊತೆಗೆ ಶರೀರದಲ್ಲಿ ಪೂರ್ತಿ ಬೆವರುವಿಕೆ ಕಾಣಿಸಿಕೊಳ್ಳಬಹುದು. ಋತುಬಂಧದ ಸಮಯದಲ್ಲಿ ವಾತಾವರಣದ ಉಷ್ಣತೆ ಸಹಜವಾಗಿದ್ದಾಗಲೂ ರಾತ್ರಿ ಬೆವರುವಿಕೆ ಕಾಣಿಸಿಕೊಳ್ಳುತ್ತದೆ.

ಸ್ಥೂಲಕಾಯ ಇರುವವರಲ್ಲಿ, ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಿರುವವರಲ್ಲಿ, ಖಿನ್ನತೆಗೆ ತೆಗೆದುಕೊಳ್ಳುವ ಔಷಧಗಳಿಂದ, ಕೆಲವು ರಕ್ತದೊತ್ತಡ ಕಡಿಮೆ ಮಾಡುವ ಔಷಧ ಹೆಚ್ಚು ಬೆವರುವಂತೆ ಮಾಡಬಹುದು. ಹೈಪರ್ ಹೈಡ್ರೋಸಿಸ್ ಇರುವವರಲ್ಲಿ ಯಾವುದೇ ಕಾರಣವಿಲ್ಲದೆ ಅತಿಯಾಗಿ ಬೆವರುತ್ತದೆ. ಈ ಸಮಸ್ಯೆ ಇರುವವರಲ್ಲಿ, ಅಂಗೈ , ಪಾದ ಮತ್ತು ಕಂಕುಳು ಕೆಳಗೆ ವಿಪರೀತವಾಗಿ ಬೆವರು ಉತ್ಪತ್ತಿ ಯಾಗುತ್ತದೆ. ದೇಹದ ಸಿಂಪೆಥೆಟಿಕ್ ನರಗಳು ವಿಪರೀತವಾಗಿ ಸ್ಪಂದಿಸುವುದೇ ಇದಕ್ಕೆ ಕಾರಣ.

ಅನನುಕೂಲಗಳು: ಬೆವರು ಸಾಲೆ (ಹೀಟ್ ರ‍್ಯಾಷ್) : ಬೆವರಿನಗ್ರಂಥಿಗಳು ಮುಚ್ಚಿ ಹೋಗಿ ಬೆವರು ಚರ್ಮದ ಅಡಿಯಲ್ಲಿ ಸಿಕ್ಕಿಹಾಕಿಕೊಂಡಾಗ ಕೆಂಪು ಸಣ್ಣ ಸಣ್ಣ ಗುಳ್ಳೆಗಳು ಕಾಣಿಸಿಕೊಳ್ಳುತ್ತವೆ . ವಿಪರೀತ ತುರಿಕೆಯನ್ನು ಉಂಟುಮಾಡುತ್ತವೆ. ಮತ್ತೆ ತುರಿಸಿಕೊಳ್ಳುವುದರಿಂದ ನೋವು, ಕಿರಿಕಿರಿಯು ಉಂಟಾಗುವ ಸಾಧ್ಯತೆ ಇದೆ. ಶರೀರದ ತೇವಾಂಶ ಹೆಚ್ಚುವುದರಿಂದ ಬ್ಯಾಕ್ಟೀರಿಯಾ/ ವೈರಸ್ ಬೆಳೆದು ಚರ್ಮದ ಸೋಂಕುಗಳನ್ನು ಉಂಟುಮಾಡಬಹುದು. ದೇಹದಲ್ಲಿ ತೇವಾಂಶ ಹೆಚ್ಚುವುದರಿಂದ ಫಂಗಸ್ ಬೆಳೆದು, ತೊಡೆ ಸಂದುಗಳಲ್ಲಿ, ಕಂಕುಳು ಕೆಳಗೆ ರಿಂಗ್ ವರ್ಮ್ ಉಂಟಾಗಬಹುದು. ಶರೀರದಲ್ಲಿ ನೀರು ಮತ್ತು ಲವಣದ ಅಂಶ ಕಡಿಮೆಯಾಗಿ ವಿಪರೀತ ಸುಸ್ತು, ತಲೆನೋವು, ಮೈಕೈ ನೋವು ಕಾಣಿಸಿ ಕೊಳ್ಳಬಹುದು.

ಹೀಗೆ ಕಾಪಾಡಿಕೊಳ್ಳಿ

ಪ್ರತಿದಿನ ಎರಡು ಹೊತ್ತು ತಣ್ಣೀರಿನಲ್ಲಿ ಸ್ನಾನ ಮಾಡಿ. ಇದರಿಂದ ದೇಹದಲ್ಲಿರುವ ಬ್ಯಾಕ್ಟೀರಿಯಾಗಳ ಸಂಖ್ಯೆ ಕಡಿಮೆಯಾಗುತ್ತದೆ. ಸಡಿಲವಾದ, ತೆಳು ಬಣ್ಣದ ಹತ್ತಿ, ರೇಷ್ಮೆಯಂಥ ನೈಸರ್ಗಿಕ ಬಟ್ಟೆಗಳನ್ನು ಬಳಸಿ. ಇದರಿಂದ ಚರ್ಮ ಸಹಜವಾಗಿ ಉಸಿರಾಡುತ್ತದೆ. ವ್ಯಾಯಾಮ ಮಾಡುವಾಗ ತೇವಾಂಶ ಹೊರಹಾಕಲು ಸಹಾಯವಾಗುವಂಥ ವಿನ್ಯಾಸವಿರುವ ಬಟ್ಟೆಗಳನ್ನು ಬಳಸಿ. ಸಾಕಷ್ಟು ನೀರು ಕುಡಿಯಿರಿ. ನೀರಿನ ಅಂಶ ಹೆಚ್ಚಿರುವ ತರಕಾರಿ, ಹಣ್ಣು-ಹಂಪಲುಗಳನ್ನು ಬಳಸಿ, ಕಾಫಿ, ಟೀ, ಮಸಾಲೆಯುಕ್ತ ಆಹಾರವನ್ನು ಕಡಿಮೆ ಮಾಡಿ.

ಆರೋಗ್ಯ: ಕಾಳಜಿ ಇರಲಿ ಭಯ ತೊಲಗಲಿ

• ರಮ್ಯಾ ಶ್ರೀಹರಿ

'ಕೊನೆಗೂ ಮನುಷ್ಯನಿಗೆ ಏನು ಬೇಕು?' ಎಂಬುದರಷ್ಟು ಕಠಿಣ ಪ್ರಶ್ನೆ ಮತ್ತೊಂದು ಇರಲಾರದು. ಯಾಕಾಗಿ ಜೀವನಪರ್ಯಂತ ಅನುದಿನವೂ ಈ ಪರಿಯ ಹೋರಾಟ ಮಾಡುವುದು? ಈ ಬದುಕಿನಿಂದ ಕಡೆಗೂ ಏನು ಪಡೆಯಬಲ್ಲೆವು? ನಿರಂತರ ಸಂತೋಷವಾದರೂ ಏಕೆ ಬೇಕು? ಏನಾದೀತು ಸಂತೋಷವಿಲ್ಲದಿದ್ದರೆ?

ನೆಮ್ಮದಿಯಾಗಿರಬೇಕೆಂದು ಎಲ್ಲರನ್ನೂ ಬಿಟ್ಟು ಎಲ್ಲೋ ದೂರ ಕಾಡಿಗೆ ಹೋಗುವುದು, ಒಂಟಿತನ ನೆಮ್ಮದಿಗೆ ಭಂಗ ಎಂದು ಮತ್ತೆ ನಾಡಿಗೆ ಮರಳುವುದು; ತೃಪ್ತಿಯಾಗಿ ಬದುಕಬೇಕೆಂದು ಪಡೆದದ್ದೇ ಅತೃಪ್ತಿಗೆ ದಾರಿಮಾಡಿಕೊಡುವುದು; ಮನೆ ಬೇಸರವೆಂದು ಪ್ರಪಂಚ ಪರ್ಯಟನೆಗೆ ಹೋಗುವುದು, ಆ ವಿಶಾಲ ಪ್ರಪಂಚದಲ್ಲಿ ಮತ್ತೆ ನಮ್ಮ ಬೆಚ್ಚಗಿನ ಗೂಡು ಕಂಡುಕೊಳ್ಳಲು ಪರಿತಪಿಸುವುದು; ಏನೋ ಮಹತ್ವವಾದದ್ದನ್ನು ಸಾಧಿಸಲು ಅತ್ಯುತ್ಸಾಹದಲ್ಲಿ ತೊಡಗಿಕೊಳ್ಳುವುದು, ಏನೂ ಮಾಡದೇ 'ಸುಮ್ಮನೆ ಇರುವುದು' ದೊಡ್ಡ ಸಾಧನೆ ಎಂದು ಅರಿಯುವುದು; ಒಟ್ಟಿನಲ್ಲಿ ನಾವು ಎಲ್ಲಿರುವೆವೋ, ಏನಾಗಿರುವೆವೋ, ಹೇಗಿರುವೆವೋ, ಯಾವುದನ್ನು ಗಟ್ಟಿಯಾಗಿ ಹಿಡಿದಿದ್ದೇವೋ ಅದನ್ನು ಬಿಟ್ಟು ಹೊರಡುವುದು, 'ನನ್ನ ಬಳಿ ಏನಿತ್ತೋ ಅದೇ ನಿಜವಾಗಲೂ ನನಗೆ ಬೇಕಾದ್ದು' ಎಂದರಿತು ಶುರುಮಾಡಿದ ಜಾಗಕ್ಕೇ ಬಂದು ಮುಟ್ಟುವುದು; ಆರೋಗ್ಯದ ಕಡೆಗಿನ ಪ್ರಯಾಣವೂ ಈ ಬಗೆಯದೇ ಹೌದು. ಆರೋಗ್ಯ ಎನ್ನುವುದನ್ನು ಒಂದು ದೈಹಿಕ ಸ್ಥಿತಿ ಎಂಬುದಾಗಿ ನೋಡದೆ ಅದನ್ನು ನಮ್ಮತನದ ಕಡೆಗಿನ ಪಯಣದಂತೆ, ಅಂದರೆ ಆರೋಗ್ಯವನ್ನು ಒಂದು ಆಧ್ಯಾತ್ಮಿಕ ಪ್ರವಾಸದಂತೆ ಕಂಡಾಗ ಆರೋಗ್ಯಕ್ಕೆ ಸಂಬಂಧಿಸಿದ ಅನೇಕ ವಿಷಯಗಳು ನಮಗೆ ಅರ್ಥವಾಗುತ್ತಾ ಹೋಗುತ್ತವೆ.

ಯಾವ ಕೆಲಸ ಮಾಡುವುದರಿಂದ ನಮ್ಮ ಚೈತನ್ಯದ ಸಂಪೂರ್ಣ ವಿನಿಯೋಗ ವಾಗುವುದೋ ಆ ಕೆಲಸವನ್ನು ಮಾಡಿಕೊಂಡು, ಏನು ನಮ್ಮ ಪರಿಸರದಲ್ಲಿ ಬೆಳೆಯುವುದೋ ಅದನ್ನೇ ತಿಂದುಕೊಂಡು, ನಮ್ಮ ದೇಹ-ಮನಸ್ಸನ್ನು ಪ್ರೀತಿಯಿಂದ ಸ್ನೇಹದಿಂದ ಕಂಡು, ಪಡೆದದ್ದನ್ನು ಭಾಗ್ಯವೆಂದು ಸ್ವೀಕರಿಸಿ, ಬದುಕಿನಲ್ಲಿ ಇಲ್ಲದ್ದನ್ನು ಮನಸ್ಸಿನಲ್ಲೂ ಇರಗೊಡದೆ ಇರುವ ಸ್ವಾಭಾವಿಕ ಜೀವನಕ್ರಮದಿಂದ ನಾವೆಲ್ಲಾ ಎಷ್ಟು ದೂರಬಂದಿದ್ದೇವೆ ಎನ್ನುವುದನ್ನು ಯಾರೇನೂ ನಮಗೆ ಬಿಡಿಸಿ ಹೇಳಬೇಕಾಗಿಲ್ಲ.

ಮನುಷ್ಯ ಪ್ರಾಕೃತಿಕ ಸ್ಥಿತಿಯಿಂದ ದೂರಸರಿದು ಸಾಂಸ್ಕೃತಿಕ ನೆಲೆಗಟ್ಟನ್ನು ಕಂಡುಕೊಳ್ಳುವುದೇಕೋ? ಮತ್ತೆ 'ಪ್ರಕೃತಿಯಿಂದ ನಾನು ದೂರವಾದೆ, ನಾನಲ್ಲೇ ಚೆನ್ನಾಗಿದ್ದೆ' ಎಂದು ಕೊರಗುವುದೇಕೋ? ಪ್ರಕೃತಿಯಿಂದ ಸಂಸ್ಕೃತಿಯ ಕಡೆಗೆ ನಡೆಯುವ ಮನುಷ್ಯನಿಗೆ ಆರೋಗ್ಯ-ಅನಾರೋಗ್ಯಗಳ ಚಿಂತನೆ-ಚಿಂತೆ ಕಾಡದೇ ಇರುವುದಾದರೂ ಹೇಗೆ?

ಆರೋಗ್ಯದ ಕಡೆಗಿನ ಪಯಣವೆಂದರೆ ಅದು ನಮ್ಮನ್ನು, ನಾವು ಬದುಕುವ ರೀತಿಯನ್ನು, ಬದುಕಿನ ಬಗೆಗಿನ ಪ್ರೀತಿಯನ್ನು, ಕಟ್ಟಿಕೊಂಡ ಕಟ್ಟುಪಾಡುಗಳನ್ನು, ಬೆಳೆಸಿಕೊಂಡ ಚಿತ್ರವಿಚಿತ್ರ ಆಸೆಗಳನ್ನು, ಮೌಲ್ಯಗಳೆಂದುಕೊಂಡು ಹೊತ್ತು ತಿರುಗುವ ಆಲೋಚನೆಗಳನ್ನು, ಜೀವನಶೈಲಿ ಎಂದು ರೂಢಿಸಿಕೊಂಡ ಭಯಮೂಲವಾದ ಅಭ್ಯಾಸಗಳನ್ನು- ಈ ಎಲ್ಲವನ್ನೂ ಒಮ್ಮೆ ಸಮಗ್ರವಾಗಿ ಅವಲೋಕಿಸುವುದು, ಈ ಎಲ್ಲದರ ಹಿಂದಿರುವ ಉದ್ದೇಶಗಳನ್ನು, ಅವುಗಳ ಪರಿಣಾಮವನ್ನು ಕೂಲಂಕಷವಾಗಿ ಪರೀಕ್ಷಿಸಿಕೊಳ್ಳುವುದು ಎಂದರ್ಥ.

ದೈಹಿಕ-ಮಾನಸಿಕ ಆರೋಗ್ಯದ ಬಗ್ಗೆ ಇಂದು ನಮಗೆ ಹಿಂದೆಂದೂ ಇಲ್ಲದಷ್ಟು ಮಾಹಿತಿ ಸಿಗುತ್ತದೆ. ಸಾಮಾಜಿಕ ಮಾಧ್ಯಮದಲ್ಲಂತೂ ಆರೋಗ್ಯ ಸಂಬಂಧಿತ ವಿಷಯಗಳದ್ದೇ ಸಿಂಹಪಾಲು. ಯಾವುದು ಆರೋಗ್ಯ, ಯಾವುದು ಅನಾರೋಗ್ಯ, ಏನು ತಿನ್ನಬೇಕು, ಏನು ತಿನ್ನಬಾರದು, ಆರೋಗ್ಯಕ್ಕೆ ಪೂರಕವಾಗಿ ಏನು ಮಾಡಬೇಕು, ಏನು ಮಾಡಬಾರದು ಎಂದು ಹೇಳುವವರ ಸಂಖ್ಯೆಯೇನು ವಿರಳವೇ? ಎಲ್ಲರೂ ಅವರವರದೇ ಒಂದು ಆರೋಗ್ಯ ಸಿದ್ಧಾಂತ ಕಟ್ಟಿಕೊಂಡು ಅದನ್ನೇ ಎಲ್ಲರಿಗೂ ಬೋಧಿಸುತ್ತಿರುತ್ತಾರೆ. ಸುಮ್ಮನೆ ಹಿಂದಿನಂತೆ ದಿನಕ್ಕೆರಡು ಬಾರಿ ಅನ್ನ ತಿನ್ನುವುದೋ ಸಿರಿಧಾನ್ಯ ತಿನ್ನುವುದೋ, ದೋಸೆ-ಇಡ್ಲಿ ತಿನ್ನುವುದೋ ಓಟ್ಸ್ ತಿನ್ನುವುದೋ, ರಾತ್ರಿಗೆ ರೊಟ್ಟಿ ತಿನ್ನುವುದೋ ಬೇಯಿಸಿದ ತರಕಾರಿ ಮಾತ್ರ ತಿನ್ನುವುದೋ, ಹಣ್ಣು ಯಾವಾಗ ತಿನ್ನಬೇಕು, ಯಾವ ತಿನಿಸಿನಿಂದ ಎಷ್ಟು ಪ್ರೋಟೀನು ಸಿಗುತ್ತದೆ ಮುಂತಾದ ಪ್ರಶ್ನೋತ್ತರಗಳು; ಮಿದುಳು ಸ್ರವಿಸುವ ಹಾರ್ಮೋನುಗಳ ಅಸಮತೋಲನವೋ ಕರುಳಿನಲ್ಲಿರುವ ಸೂಕ್ಷ್ಮಜೀವಿಗಳ ಹೆಚ್ಚುಕಡಿಮೆಯೋ, ಹೃದಯಬಡಿತದ ಸಣ್ಣ ಏರುಪೇರೋ, ಎಣ್ಣೆ-ಸಕ್ಕರೆ-ಮೈದಾ ಹಿಟ್ಟುಗಳ ಸಂಯೋಗವೋ, ಆಹಾರದಲ್ಲಿ ಸೇರಿರುವ ಕೃತಕ ವಸ್ತುಗಳಲ್ಲಿನ ರಾಸಾಯನಿಕಗಳೋ, ಅನೈರ್ಮಲ್ಯವೋ, ಎಲ್ಲೆಲ್ಲೂ ಗಾಳಿಯಂತೆ ಹಬ್ಬುತ್ತಿರುವ ಪ್ಲಾಸ್ಟಿಕ್ ಹಾವಳಿಯೋ, ಔಷಧದ ಅಡ್ಡಪರಿಣಾಮವೋ, ಕೀಟನಾಶಕಗಳ ಕಾರ್ಯವಿಧಾನವೋ, ತಂತ್ರಜ್ಞಾನ ತರುವ ಆಪತ್ತೋ, ಒತ್ತಡದ ಜೀವನವೋ, ಒತ್ತಿಟ್ಟ ದುಃಖವೋ, ಕಿತ್ತಾಡುವ ಕುಟುಂಬಗಳೋ, ಆನುವಂಶೀಯತೆಯೋ, ಆಲೋಚನಾಕ್ರಮವೋ, ಕೇವಲ ಅದೃಷ್ಟ-ದುರದೃಷ್ಟವೋ- ಎಲ್ಲ ಅನಾರೋಗ್ಯವೂ ಶುರುವಾಗುವುದೆಲ್ಲಿಂದ ಎನ್ನುವ ವಿಶ್ಲೇಷಣೆಯಂತೂ ತಲೆಚಿಟ್ಟು ಹಿಡಿಸುವುದು ಖಂಡಿತ.

ಸುಮ್ಮನೆ ನುರಿತ ವೈದ್ಯರು ಹೇಳಿದ್ದನ್ನು ಕೇಳಿಕೊಂಡು, ಪಾಲಿಸಿಕೊಂಡು ಇರುವವರ ಸದ್ಬುದ್ಧಿಯನ್ನೂ ಹಾಳುಮಾಡುವ ಸಂಶಯಬುದ್ಧಿ ಇಂದು ಎಲ್ಲ ರನ್ನೂ ಕಾಡಿಸುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಆರೋಗ್ಯದ ಬಗೆಗಿನ ಕಾಳಜಿ ಭಯವಾಗಿ ಮಾರ್ಪಾಡಾಗುವುದಕ್ಕೆ ಹೆಚ್ಚಿನ ಸಮಯವೇನೂ ಬೇಕಾಗುವುದಿಲ್ಲ. 'ಆರೋಗ್ಯವನ್ನು ಕಾಪಾಡಿಕೊಳ್ಳಲು ನಾವೇನು ಮಾಡಬಹುದೋ ಅದನ್ನು ಮಾಡಬಹುದು, ಅದನ್ನು ಮೀರಿ ಚಿಂತಿಸಿ ಫಲವಿಲ್ಲ, ಏಕೆಂದರೆ ಆರೋಗ್ಯ ಎನ್ನು ವುದು ಸದ್ಯಕ್ಕೆ ನಮ್ಮ ತಿಳಿವಳಿಕೆಗೆ, ನಿಯಂತ್ರಣಕ್ಕೆ ಸಂಪೂರ್ಣವಾಗಿ ಸಿಗುವಂತಹದ್ದಲ್ಲ ಎನ್ನುವ ಸತ್ಯವನ್ನು ಮರೆತು ಸದಾ ಏನು ತಿನ್ನಬೇಕು, ಯಾವ ವ್ಯಾಯಾಮ ಮಾಡಬೇಕು, ಆ ರೋಗ ಬಂದರೆ, ಈ ತೊಂದರೆಯಾದರೆ ಎಂಬ ಭಯವನ್ನು ನಿರ್ವಹಿಸುವುದನ್ನು ಮೊದಲು ಕಲಿಯಬೇಕು.

ಅನಾರೋಗ್ಯದ ಭಯ ಒಂದು ನೆಪವಷ್ಟೇ; ಅದರ ಆಳದಲ್ಲಿ ಮತ್ತೇನೋ ಭಯವಿರುತ್ತದೆ. ಅಂದರೆ 'ಬದುಕನ್ನು ನನ್ನ ಅಜಾಗರೂಕತೆಯಿಂದ ಹಾಳುಮಾಡಿ ಕೊಂಡುಬಿಟ್ಟರೆ, ಬದುಕು ಅನಾರೋಗ್ಯದ ಕಾರಣದಿಂದ ನನ್ನ ಕೈಜಾರಿಹೋದರೆ, ನಾನು ಪ್ರೀತಿಸುವ ವ್ಯಕ್ತಿ ಅನಾರೋಗ್ಯಕ್ಕೆ ತುತ್ತಾಗಿ ನನ್ನಿಂದ ದೂರವಾದರೆ' ಎನ್ನುವ ಭಯ ಇರುತ್ತದೆ. ಬದುಕಿನ ಬಗೆಗಿನ ಈ ಆತಂಕವನ್ನು ನಿರ್ವಹಿಸುವ ಮಾರ್ಗಗಳನ್ನು ಕಂಡುಕೊಂಡಾಗ ಮಾತ್ರ ಅಂತರ್ಜಾಲದಲ್ಲಿ ಆರೋಗ್ಯದ ಮಾಹಿತಿಯನ್ನು ಹುಡುಕುವ ಅಭ್ಯಾಸ ಕೊನೆಯಾಗುತ್ತದೆ. ಬದುಕನ್ನು ಬದುಕದೇ ಅದರ ಬಗ್ಗೆ ಯೋಚನೆ, ಯೋಜನೆಗಳನ್ನು ಮಾಡುವಾಗ ಮಾತ್ರ ಅನಾರೋಗ್ಯ, ಸಾವು ಮುಂತಾದವುಗಳ ಚಿಂತೆ ಕಾಡುತ್ತದೆ. ಬದುಕನ್ನು ಪ್ರತಿಕ್ಷಣವೂ ಸವಿಯುವುದು ಅಭ್ಯಾಸವಾದಾಗ ಕಾಲ್ಪನಿಕ ಭಯಗಳು ಅಷ್ಟು ಬಾಧಿಸುವುದಿಲ್ಲ.

ಜೀವನದಲ್ಲಿ ಮುಖ್ಯವಾಗಿ ಮಾಡಲೇಬೇಕೆಂದಿರುವ ಕೆಲಸವನ್ನುಆದಷ್ಟು ಬೇಗ, ಅಚ್ಚುಕಟ್ಟಾಗಿ ಮಾಡಿ ಮುಗಿಸುವ ಬಗೆಗೆ ದಿನವೂ ಪ್ರಯತ್ನ ಜಾರಿಯಲ್ಲಿರಲಿ. 'ನಾಳೆ'ಯನ್ನು ತುಂಬಾ ನೆಚ್ಚಿ ಬದುಕಬೇಕಾದಾಗ ಮಾತ್ರ 'ನಾಳೆ ಅನಾರೋಗ್ಯವಾದರೆ' ಎಂಬ ಭಯ ಅತಿ ಹೆಚ್ಚಾಗಿ ಕಾಡುತ್ತದೆ. ನಮ್ಮ ನಿಯಂತ್ರಣ ದಲ್ಲಿರುವುದು ಏನು, ನಮ್ಮ ನಿಯಂತ್ರಣದಲ್ಲಿಲ್ಲದಿರುವುದೇನು ಎನ್ನುವುದರ ಬಗೆಗೆ ಸ್ಪಷ್ಟ ಚಿತ್ರಣವಿರಲಿ. ನಮ್ಮ ನಿಯಂತ್ರಣದಲ್ಲಿಲ್ಲದ್ದನ್ನು, ಅದರ ಬಗೆಗೆ ನಮ್ಮ ಭಾವನೆಗಳನ್ನು ಒಮ್ಮೆ ವಿವರವಾಗಿ ಬರೆದಿಟ್ಟು ಅದರ ಬಗ್ಗೆ ಚಿಂತೆ ಬಂದಾಗಲೆಲ್ಲ- 'ಅದು ನನ್ನ ನಿಯಂತ್ರಣದಲ್ಲಿಲ್ಲ, ನಾನು ಅದರ ಬಗ್ಗೆ ಯೋಚಿಸಬೇಕಾಗಿಲ್ಲ' ಎಂದು ನೆನಪಿಸಿಕೊಳ್ಳುವ ಅಭ್ಯಾಸ ಇಟ್ಟುಕೊಳ್ಳುವುದು ಸಹಕಾರಿ. ನಮ್ಮ ಬದುಕಿನ ಬಗೆಗೆ ನಮಗಿರುವ ಧೋರಣೆ, ನಮ್ಮ ದೇಹ-ಮನಸ್ಸನ್ನು ನಾವು ಕಾಣುವ ಬಗೆ - ಇವುಗಳು ನಮ್ಮ ಆರೋಗ್ಯ-ಅನಾರೋಗ್ಯದ ಪರಿಕಲ್ಪನೆಯನ್ನು ರೂಪಿಸುತ್ತವೆ. ಈ ಸೂಕ್ಷ್ಮತೆಯ ಅರಿವಿಲ್ಲದೆ ಆಹಾರದ ಬಗ್ಗೆ, ವ್ಯಾಯಾಮದ ಬಗ್ಗೆ, ದೈಹಿಕ ಓರೆಕೋರೆಯ ಬಗ್ಗೆ, ದೇಹದ ತೂಕ ಇಳಿಸುವ ಬಗ್ಗೆ ತಮಗೆ ತೋಚಿದ್ದನ್ನು ನಮ್ಮ ಮೇಲೆ ಹೇರುವವರ ಟೀಕೆಯ ಮಾತನ್ನು ನಿರ್ಲಕ್ಷಿಸು ವುದು ಒಳಿತು. ಸಹಾನುಭೂತಿಯುಳ್ಳ, ಅನುಭವದಿಂದ ಮಾಗಿದ ಮಾತುಗಳಿಂದ ನಮ್ಮ ನಂಬಿಕೆ ಸ್ಥಿರಗೊಳಿಸುವ ವೈದ್ಯರ ಮಾತನ್ನು ಮಾತ್ರ ನೆಚ್ಚಿಕೊಳ್ಳುವುದು ಮೇಲು; ಏಕೆಂದರೆ ಅಂತಹ ವೈದ್ಯರಿಗೆ ಗೊತ್ತು, ಆರೋಗ್ಯದ ಕಡೆಗಿನ ಪಯಣಕ್ಕೆ ಕೇವಲ ಆರೋಗ್ಯವಿಜ್ಞಾನದ ಮಾಹಿತಿ ಸಾಕಾಗುವುದಿಲ್ಲ, ಅದಕ್ಕೆ ಅವಶ್ಯವಾಗಿ ಬೇಕಾದ್ದು ಸ್ನೇಹಪೂರ್ವಕ ಬೆಂಬಲ ಮತ್ತು ಅಂತಃಕರಣದ ಸ್ಪಂದನ ಎಂದು.

'ನೀಟ್' ದಿಕ್ಸೂಚಿ — ಎಸ್ಎಸ್ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ — 'ಸಿಇಟಿ' ಪರೀಕ್ಷೆ

BIOLOGY

58) Which of the following statements, support the view that elaborate sexual reproductive process appeared much later in the organic evolution?

i. Lower groups of organisms have simpler body design
ii. Asexual reproduction is common in lower groups
iii. Asexual reproduction is common in higher groups of organisms
iv. The high incidence of sexual reproduction in angiosperms and vertebrates

Choose the correct answer from the options given below:

a) i and ii   b) i and iii
c) i, ii and iv   d) ii and iii

Ans:- c

59) Consider the following :

A. The reductive division for the human female gametogenesis starts earlier than that of the male gametogenesis.
B. The gap between the first meiotic division and the second meiotic division is much shorter for males compared to females.
C. The first polar body is associated with the formation of the primary oocyte.
D. Luteinizing Hormone (LH) surge leads to disintegration of the endometrium and onset of menstrual bleeding.

Choose the correct answer from the options given below:

(a) B and C are true   (b) A and B are true
(c) A and C are true   (d) B and D are true

Ans:- (b)

Expln:- Statements A and B are true while statements C and D are false.

The first polar body is associated with the formation of the secondary oocyte LH surge leads to ovulation. Decreased levels of progesterone during late luteal phase leads to degeneration of the endometrium and onset of menstrual bleeding

60) Offspring formed by sexual reproduction exhibit more variation than those formed by Asexual reproduction because:

a) Sexual reproduction is a lengthy process
b) Gametes of parents have qualitatively different genetic composition
c) Genetic material comes from parents of two different species
d) Greater amount of DNA is involved in sexual reproduction.

Ans:- b

61) Choose the correct statement from amongst the following:

a) Dioecious (hermaphrodite) organisms are seen only in animals
b) Dioecious organisms are seen only in plants
c) Dioecious organisms are seen in both plants and animals
d) Dioecious organisms are seen only in vertebrates

Ans:- c

62) Given below are two statements: One is labelled as Assertion A and the other islabeled as Reason R

Assertion A: A flower is defined as modified shoot wherein the shoot apical meristem changes to floral meristem.


Reason R: Internode of the shoot gets condensed to produce different floral appendages laterally at successive nodes instead of leaves. In the light of the above statements,

choose the correct answer from the options given below:

a) A is false but R is true.
b) Both A and R are true and R is the correct explanation of A.
c) Both A and R are true but R is NOT the correct explanation of A.
d) A is true but R is false.

Ans:- (b) A flower is a modified shoot wherein the shoot apical meristem changes to floral meristem. Internodes do not elongate and the axis gets condensed. The apex produces different kinds of floral appendages laterally at successive nodes instead of leaves.

63) In the diagram of the portion of the TS of the helianthus leaf passing through the midrib given below, certain parts have been indicated by alphabets choose the answer in which these alphabets have been correctly matched with the parts which they indicate.



a) A = Epidermis, B = Palisade parenchyma, C = Spongy parenchyma, D = Stomata, E = Guard cells, F = Endodermis, G = Xylem, H = Phloem
b) A = Epidermis, B = Palisade parenchyma, C = Spongy parenchyma, D = Stomata, E = Guard cells, F= Phloem, G = Metaxylem, H = Protoxylem.
c) A = Epidermis, B = Spongy parenchyma, C = Palisade parenchyma, D = Stomata, E = Guard cells, F= Phloem, G = Metaxylem, H= Protoxylem.
d) A = Epidermis, B = Palisade parenchyma, C = Spongy parenchyma, D = Substomatal cavity, E = Guard cells, F = Phloem, G=Metaxylem, H = Protoxylem.

Ans:- d;

CHEMISTRY

MULTIPLE CHOICE QUESTIONS

61) 8.8 g of monohydric alcohol added to ethyl magnesium iodide in ether liberates 2240 cm^3 of ethane at STP. This monohydric alcohol when oxidised using pyridinium-chloromate, forms a carbonyl compound that answers silver mirror test (Tollen's test). The monohydric alcohol is

(a) butan-2-ol   (b) 2, 2-dimethyl propan-1-ol
(C) pentan-2-ol   (d) 2, 2-dimethyl ethan-1-ol

Ans:-b

Expln:-

8.8 g of monohydric alcohol $\leftarrow$ 2240 cm^3
88 g $\leftarrow$ 22400 cm^3

The carbonyl compound that can oxidise tollens reagent i.e., **Aldehyde** and which is oxidising product of Primary alcohol.

62) PCC is

(A) $K_2Cr_2O_7$ + Pyridine
(B) $CrO_3 + CHCl_3$
(C) $CrO_3 + H_2SO_4$
(D) A complex of chromium trioxide with pyridine + HCl

Ans:-D

Expln:- PCC is pyridinium chlorochromate

$$C_5H_5\overset{(+)}{N}HCrO_3Cl$$

40)


In the reaction

Aniline $\xrightarrow[\text{dil.HCl}]{NaNO_2}$ P $\xrightarrow[\text{NaOH}]{\text{Phenol}}$ Q .

(A) $C_6H_5N_2Cl$
(B) ortho-hydroxyazobenzene
(C) para-hydroxyazobenzene
(D) meta-hydroxyazobenzene

Ans:- C

Expln:-



(P)   para-hydroxyazobenzene (Q)

63) The sharp melting point of crystalline solids is due to ....

a) a regular arrangement of constituent particles observed over a short distance in the crystal lattice.
b) a regular arrangement of constituent particles observed over a long distance in the crystal lattice.
c) Same arrangement of constituent particles in different directions.
d) different arrangement of constituent particles in different directions.

Ans:- b

64) Which of the following is not the characteristic of ionic solids?

a) Very low value of electrical conductivity in the molten state.
b) Brittle nature.   c) Anisotropic nature.
d) very strong forces of interactions.

Ans:- a

65) The correct arrangement for the ions in the increasing order of their radii is

a) Na^+, Cl^-, Ca^{2+} b) Ca^{2+} , K^+, S^{2-}
c) Na^+, Al^{3+} , Be^{2+} d) Cl^-, F^-, S^{2-}

Ans:- b

Species	At No.	No. of e^-
Ca^{2+}	20	18
K^+	19	18
S^{2-}	16	18

The species Ca^{2+}, K^+ and S^{2-} are isoelectronic. For isoelectronic ions, the radius decreases as the nuclear charge increases. Hence, the increasing order of their radii is $Ca^{2+} < K^+ < S^{2-}$

66) The factors that influence the rate of a reaction are ....

a) Nature of the reactants
b) Concentration of the reactants
c) Temperature of the reaction   d) all of these

Ans:- d

67) Silicon doped with electron-rich impurity forms .... semiconductor.

a) p-type   b) n-type
c) intrinsic   d) insulator

Ans:- b

68) The statement that is not correct is

a) Aldose or ketose sugars in alkaline medium to not isomerise
b) Carbohydrates are optically active.
c) Pentaacetate of glucose does not react with hydroxylamine.
d) Lactose has glycosidic linkage between C_4 of glucose and C_1 of galactose unit.

Ans:- a

69) Incorrectly matched pair is:..............

a) XeF_6 – distorted octahedral
b) $XeOF_4$ – square pyramidal
c) XeO_3 – pyramidal
d). XeF_4 – tetrahedral

Ans: (d)

,Expln:- In XeF_6 there are 6 bond pairs and one lone pair. Thus the shape of XeF_6 is distorted octahedral.

In $XeOF_4$, Xe is sp^3d hybridized and the shape is square pyramidal.

In XeO_3, Xe is sp^3 hybridized and the shape is trigonal pyramidal.

In XeF_4, Xe is sp^3d^2 hybridized. It has 4 bond pairs and two lone pairs. Thus, the shape is square planar.

70) Which of the following is a network solid?

a) SO_2 (solid)   b) I_2
c) Diamond   d) H_2O (Ice)

Ans:-C

71) Which of the following solids is not an electrical conductor?

i) Mg (s)   ii) TiO (s)   ***(Contd...)***

ಮಂಗಳವಾರ, ಏಪ್ರಿಲ್ 14, 2026 | ₹ 7.00
prajavani.net prajavani
www.prajavani.net

ಪ್ರಜಾವಾಣಿ


ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಉತ್ಸವ...
ಪಶ್ಚಿಮ ಬಂಗಾಳದ ಪೂರ್ವ ವರ್ಧಮಾನ್ ಜಿಲ್ಲೆಯಲ್ಲಿ ನಡೆದ ‘ಗಜನ್’ ಉತ್ಸವದಲ್ಲಿ ವೇಷಧಾರಿಯೊಬ್ಬ ಕಾಣಿಸಿಕೊಂಡಿದ್ದು ಹೀಗೆ



ಗೌರವ ನಮನ...
ಜಲಿಯನ್‌ವಾಲಾಬಾಗ್ ಹತ್ಯಾಕಾಂಡದಲ್ಲಿ ಹುತಾತ್ಮರಾದವರ ಸ್ಮರಣಾರ್ಥ ಅಮೃತಸರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪೊಲೀಸ್ ಸಿಬ್ಬಂದಿಯೊಬ್ಬರು ಸ್ಮಾರಕಕ್ಕೆ ಗೌರವ ಸಲ್ಲಿಸಿದರು





















ಮೇ 15ರೊಳಗೆ ಪುನರ್ ರಚನೆಗೆ ಪಟ್ಟು

ಖರ್ಗೆ ಅವರನ್ನು ಭೇಟಿಯಾದ ಕಾಂಗ್ರೆಸ್ ಶಾಸಕರು

ಪ್ರಜಾವಾಣಿ ವಾರ್ತೆ

ನವದೆಹಲಿ: ಸಚಿವ ಸ್ಥಾನದ ಮೇಲೆ ಕಣ್ಣಿಟ್ಟು ರಾಷ್ಟ್ರ ರಾಜಧಾನಿಯಲ್ಲಿ ಬೀಡು ಬಿಟ್ಟಿರುವ ಕಾಂಗ್ರೆಸ್‌ನ ಹಿರಿಯ ಶಾಸಕರು, ಮೇ 15ರೊಳಗೆ ಪುನರ್ ರಚನೆ ಪ್ರಕ್ರಿಯೆ ನಡೆಸಬೇಕು ಎಂದು ಪಟ್ಟು ಹಿಡಿದಿದ್ದಾರೆ.

ವಿಧಾನಸಭೆಯ ಆಡಳಿತ ಪಕ್ಷದ ಮುಖ್ಯ ಸಚೇತಕ ಅಶೋಕ ಪಟ್ಟಣ ಮತ್ತು ಕರ್ನಾಟಕ ಸರ್ಕಾರದ ದೆಹಲಿ ಪ್ರತಿನಿಧಿ ಟಿ.ಬಿ. ಜಯಚಂದ್ರ ನೇತೃತ್ವದಲ್ಲಿ ದೆಹಲಿ ಯಾತ್ರೆ ಕೈಗೊಂಡಿರುವ 20ಕ್ಕೂ ಅಧಿಕ ಶಾಸಕರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸೋಮವಾರ ಸಂಜೆ ಭೇಟಿ ಮಾಡಿ ಸಮಾಲೋಚನೆ ನಡೆಸಿದರು. ಹೈಕಮಾಂಡ್ ನೀಡಿರುವ ವಾಗ್ದಾನದಂತೆ ಸಚಿವ ಸಂಪುಟ ಪುನರ್ ರಚನೆ ಮಾಡಬೇಕು ಎಂದು ಆಗ್ರಹಿಸಿದರು.

ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡುವ ಉದ್ದೇಶದಿಂದ ಇದೇ 16ರ ವರೆಗೆ ನವದೆಹಲಿಯಲ್ಲೇ ಇರಲು ಸಚಿವ ಸ್ಥಾನದ ಆಕಾಂಕ್ಷಿಗಳು ತೀರ್ಮಾನಿಸಿದ್ದಾರೆ. ರಾಹುಲ್ ಅವರು ಪಶ್ಚಿಮ ಬಂಗಾಳ ಚುನಾವಣಾ ರ‍್ಯಾಲಿಯಲ್ಲಿ ಮಂಗಳವಾರ ಭಾಗವಹಿಸಲಿದ್ದಾರೆ. ಹೀಗಾಗಿ, ಶಾಸಕರಿಗೆ ರಾಹುಲ್ ಸಿಗುವ ಸಾಧ್ಯತೆ ಕಡಿಮೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಅವರನ್ನು ಭೇಟಿ ಮಾಡಲು ಶಾಸಕರು ಕಾಲಾವಕಾಶ ಕೇಳಿದ್ದಾರೆ. ಮಂಗಳವಾರ ವಿಶ್ರಾಂತಿ ಪಡೆದು ಹೈಕಮಾಂಡ್ ನಾಯಕರನ್ನು ಬುಧವಾರ ಭೇಟಿ ಮಾಡಲು ಪ್ರಯತ್ನಿಸುವುದಾಗಿ ಶಾಸಕರು ತಿಳಿಸಿದ್ದಾರೆ.

ಖರ್ಗೆ ಅವರನ್ನು ಭೇಟಿ ಮಾಡುವ ಮುನ್ನ ಶಾಸಕರು ಕರ್ನಾಟಕ ಭವನದಲ್ಲಿ ಸಭೆ ನಡೆಸಿ ಸಹಿ ಸಂಗ್ರಹ ನಡೆಸಿದರು. 'ಸರ್ಕಾರಕ್ಕೆ ಮೇ ತಿಂಗಳಲ್ಲಿ ಮೂರು ವರ್ಷ ತುಂಬಲಿದೆ. ಎರಡೂವರೆ ವರ್ಷಗಳ ಬಳಿಕ ಹಾಲಿ ಸಚಿವರನ್ನು ಕೈಬಿಟ್ಟು ಹೊಸಬರಿಗೆ ಸ್ಥಾನ ಕಲ್ಪಿಸುವುದಾಗಿ ಹೈಕಮಾಂಡ್ ಭರವಸೆ ನೀಡಿತ್ತು. ಸಂಪುಟದಲ್ಲಿರುವ ಅನೇಕ ಸಚಿವರು ನಿಷ್ಕ್ರಿಯ-ಯರಾಗಿದ್ದಾರೆ. ಅವರಿಂದ ಪಕ್ಷ ಸಂಘಟನೆಗೆ ಲಾಭ ಆಗುತ್ತಿಲ್ಲ. ಅಂತಹವರನ್ನು ಸಂಪುಟದಿಂದ ಕೈಬಿಡಬೇಕು. 3–4 ಬಾರಿ ಶಾಸಕರಾದವರಿಗೆ ಆದ್ಯತೆ ನೀಡಬೇಕು' ಎಂದು ಹಿರಿಯ ಶಾಸಕರು ಮನವಿಯಲ್ಲಿ ಒತ್ತಾಯಿಸಿದ್ದಾರೆ.



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ ಕಾಂಗ್ರೆಸ್‌ನ ಶಾಸಕರು

ಕಾಂಗ್ರೆಸ್ ನಾಯಕರು ನನ್ನ ಸಂಪರ್ಕದಲ್ಲಿ ಇಲ್ಲ– ಎಚ್‌ಡಿಕೆ

ಬೆಂಗಳೂರು: 'ಜೆಡಿಎಸ್ ಬಿಟ್ಟು ಕಾಂಗ್ರೆಸ್ ಸೇರಿರುವ ಯಾವೊಬ್ಬ ಅಲ್ಪಸಂಖ್ಯಾತ ನಾಯಕನೂ ನನ್ನ ಸಂಪರ್ಕದಲ್ಲಿ ಇಲ್ಲ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಒಂದು ವೇಳೆ ನನ್ನ ಸಂಪರ್ಕಕ್ಕೆ ಬಂದರೆ ನಮ್ಮ ಪಕ್ಷದ ಹಿರಿಯ ನಾಯಕರ ಜೊತೆ ಚರ್ಚಿಸಿ, ಸಾಧಕ ಬಾಧಕಗಳನ್ನು ಪರಿಶೀಲಿಸಿದ ನಂತರ ನಿರ್ಧಾರ ಕೈಗೊಳ್ಳುತ್ತೇನೆ' ಎಂದರು.

ದಾವಣಗೆರೆ ದಕ್ಷಿಣ ವಿಧಾನಸಭೆ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಉಂಟಾಗಿರುವ ಗೊಂದಲಗಳ ಬಗ್ಗೆ ಕೇಳಿದ ಪ್ರಶ್ನೆಗೆ, 'ಈ ಬೆಳವಣಿಗೆಗಳನ್ನು ಮಾಧ್ಯಮಗಳಲ್ಲಿ ನಾನು ಗಮನಿಸಿದೆ. ಸಮಸ್ಯೆ ಸರಿ ಮಾಡಿಕೊಳ್ಳುವುದು ಅಥವಾ ಬಿಡುವುದು ಆ ಪಕ್ಷಕ್ಕೆ ಬಿಟ್ಟದ್ದು. ಆ ಪಕ್ಷದ ನಾಯಕರ ಹೊಡೆದಾಟದ ಬಗ್ಗೆ ನಾನು ಚರ್ಚೆ ಮಾಡಲು ಹೋಗುವುದಿಲ್ಲ' ಎಂದರು.

'ಈ ಕ್ಷೇತ್ರದಲ್ಲಿ ಜನ ಸಮುದಾಯ ಏನು ತೀರ್ಮಾನ ಮಾಡುತ್ತದೆ ಎಂದು ನೋಡೋಣ' ಎಂದೂ ಹೇಳಿದರು.

'ಶಿಸ್ತು ಮೀರಿದರೆ ಕ್ರಮ ಅನಿವಾರ್ಯ'

ಬೆಂಗಳೂರು: 'ಪಕ್ಷದ ಚೌಕಟ್ಟಿನ ಒಳಗೆ ಎಲ್ಲರೂ ಮಾತನಾಡಬೇಕು. ಶಿಸ್ತು ಮೀರಿದರೆ ಕ್ರಮ ಅನಿವಾರ್ಯ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಚಿವ ಸ್ಥಾನಕ್ಕೆ ಲಾಬಿ ನಡೆಸುತ್ತಿರುವ ಶಾಸಕರಿಗೆ ಎಚ್ಚರಿಕೆ ನೀಡಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸೋಮವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಶಿವಕುಮಾರ್, 'ವರಿಷ್ಠರನ್ನು ಶಾಸಕರು ಭೇಟಿ ಮಾಡುವುದರಲ್ಲಿ ತಪ್ಪೇನಿಲ್ಲ. ಆದರೆ, ಈಗ ಅದಕ್ಕೆ ಸೂಕ್ತ ಸಮಯವಲ್ಲ' ಎಂದರು.

'ನಾನು ಮಾಧ್ಯಮಗಳಲ್ಲಿ ಗಮನಿಸುತ್ತಿದ್ದೇನೆ, ಕೆಲವರು ಏನೇನೊ ಮಾತನಾಡುತ್ತಿದ್ದಾರೆ. ನೆನಪಿರಲಿ, ಮಾಧ್ಯಮಗಳು ನಿಮ್ಮ ಭವಿಷ್ಯವಲ್ಲ, ಪಕ್ಷವೇ ನಿಮ್ಮ ಭವಿಷ್ಯ. ಎಲ್ಲರ ಭವಿಷ್ಯ ಪಕ್ಷದಲ್ಲೇ ಅಡಗಿದೆ' ಎಂದೂ ಶಾಸಕರನ್ನು ಉದ್ದೇಶಿಸಿ ಹೇಳಿದರು.

'ದೆಹಲಿಗೆ ತೆರಳುವ ಮೊದಲು ಶಾಸಕರು ನಿಮ್ಮ ಬಳಿ ಚರ್ಚೆ ಮಾಡಿದ್ದಾರೆಯೇ' ಎಂಬ ಪ್ರಶ್ನೆಗೆ, 'ಒಂದಷ್ಟು ಜನ ಚರ್ಚೆ ಮಾಡಿದ್ದಾರೆ. ಹೈಕಮಾಂಡ್ ಬಳಿ ಸಚಿವ ಸ್ಥಾನ ಕೇಳುವುದರಲ್ಲಿ ತಪ್ಪೇನಿಲ್ಲ. ಮೊದಲ ಹಾಗೂ ಎರಡನೇ ಬಾರಿ ಗೆದ್ದಿರುವವರೂ ಮಂತ್ರಿಗಳಾಗಬಹುದು. ಈ ಹಿಂದೆ ಈ ರೀತಿ ನಡೆದಿದೆ. ಯಾರೂ ಮಂತ್ರಿಗಳಾಗಬಾರದು ಎಂದೇನೂ ಇಲ್ಲ. ಆದರೆ, ಈಗ ಸಂಪುಟ ಪುನರ್‌ರಚನೆ ಬಗ್ಗೆ ಚರ್ಚಿಸುವ ಅಗತ್ಯವಿಲ್ಲ. ಸದ್ಯದ ನಮ್ಮ ಗುರಿ ಚುನಾವಣೆ. ಮೊದಲು ಸಂಘಟಿತರಾಗಿ ಚುನಾವಣೆ ಎದುರಿಸೋಣ, ನಂತರ ಈ ಕುರಿತು ಚರ್ಚೆ ನಡೆಸೋಣ' ಎಂದರು.

ಶಾಸಕರ ಪ್ರತಿಕ್ರಿಯೆ

ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಖರ್ಗೆ ಅವರೊಂದಿಗೆ ಚರ್ಚಿಸಿದ್ದೇವೆ. ನಮ್ಮ ಬೇಡಿಕೆಯನ್ನು ಸಹಾನುಭೂತಿಯಿಂದ ಆಲಿಸಿದ್ದಾರೆ. ಹೈಕಮಾಂಡ್ ನಾಯಕರು ಸೂಕ್ತ ಸಮಯದಲ್ಲಿ ನಿರ್ಧಾರ ತೆಗೆದುಕೊಳ್ಳಲಿದ್ದಾರೆ. ಶೀಘ್ರ ಪುನರ್ ರಚನೆಯಾಗುವ ವಿಶ್ವಾಸ ಇದೆ.

ಟಿ.ಬಿ.ಜಯಚಂದ್ರ

ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಇಲ್ಲಿಗೆ ಬಂದಿದ್ದೇವೆ. ಸಚಿವ ಸಂಪುಟ ಪುನರ್ ರಚನೆ ಬಿಟ್ಟು ಬೇರೇನೂ ಕೇಳುತ್ತಿಲ್ಲ. ಪಕ್ಷಕ್ಕೆ ಮುಜುಗರ ಆಗುವ ಕೆಲಸ ಮಾಡಿಲ್ಲ.

ಎನ್.ಎಸ್.ನಾರಾಯಣಸ್ವಾಮಿ

ಕೆಪಿಸಿಸಿ ಅಧ್ಯಕ್ಷರು ಎಚ್ಚರಿಕೆ ನೀಡಿದ್ದಾರೆ. ನಾವು ಪಕ್ಷಕ್ಕೆ ಹಾನಿ ಮಾಡಿಲ್ಲ. ಈ ಹಿಂದೆ ನಾಲ್ಕೈದು ಸಲ ಸಚಿವರಾಗಿದ್ದವರೇ ಈಗಲೂ ಸಚಿವರಾಗಿದ್ದಾರೆ. ಹಾಗಿದ್ದರೆ, ನಾವೆಲ್ಲ ಏಕೆ ಇರಬೇಕು. ಸಂಪುಟದಲ್ಲಿ ಅವಕಾಶ ನೀಡುವುದಾಗಿ ಈ ಹಿಂದೆ ಭರವಸೆ ನೀಡಿದ್ದರು. ನಮಗೂ ಅವಕಾಶ ಕೊಡಿ ಎಂದು ಕೇಳುತ್ತಿದ್ದೇವೆ.

ಅಶೋಕ ಪಟ್ಟಣ

ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರನ್ನು ಹೊರತುಪಡಿಸಿ ಉಳಿದವರನ್ನು ಸಂಪುಟದಿಂದ ಕೈಬಿಟ್ಟು ಹಿರಿಯ ಶಾಸಕರನ್ನು ಸಚಿವರನ್ನಾಗಿ ಮಾಡಬೇಕು.

ಯಶವಂತರಾಯ ಗೌಡ ಪಾಟೀಲ

ಸುದ್ದಿ 2 ನಿಮಿಷ

ಮಹಿಳೆಯರಿಗೆ ಖರ್ಗೆ ಅಪಮಾನ: ವಿಜಯೇಂದ್ರ ಟೀಕೆ

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಕಾಂಗ್ರೆಸ್‌ನ ಇತರ ನಾಯಕರು ಮಹಿಳಾ ಮೀಸಲಾತಿ ಒಂದು ರಾಜಕೀಯ ಗಿಮಿಕ್ ಎಂದು ಟೀಕಿಸುವ ಮೂಲಕ ದೇಶದ ಮಹಿಳೆಯರಿಗೆ ಅಪಮಾನ ಮಾಡಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ತೀರ್ಮಾನ ಐತಿಹಾಸಿಕ. ಇದಕ್ಕೆ ಪ್ರಧಾನಿ ಮೋದಿ ಅವರ ದೃಢ ಸಂಕಲ್ಪವೇ ಕಾರಣ' ಎಂದರು.

ಭಾರತವು 2047ನೇ ಇಸವಿಗೆ ಅಭಿವೃದ್ಧಿಶೀಲ ರಾಷ್ಟ್ರವಾಗಿ ಪರಿವರ್ತನೆ ಹೊಂದಲು ದೇಶದ ಮಹಿಳೆಯರ ಪಾತ್ರ ಬಹಳ ಮಹತ್ವದ್ದು. ಹೀಗಾಗಿ ದೇಶದ ಮಹಿಳೆಯರ ಹಲವು ದಶಕಗಳ ಕನಸು ಈಗ ನನಸಾಗುತ್ತಿದೆ. ಮಹಿಳಾ ಮೀಸಲಾತಿ ಅನುಷ್ಠಾನದಲ್ಲಿ ಎಲ್ಲ ರಾಜಕೀಯ ಪಕ್ಷಗಳ ಪಾತ್ರವೂ ಇದೆ ಎಂದು ಪ್ರಧಾನಿ ವಿವರಿಸಿದ್ದಾರೆ ಎಂದು ಹೇಳಿದರು.

2 ಕ್ಷೇತ್ರ ಕಿತ್ತುಕೊಳ್ಳುತ್ತೇವೆ: 'ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರವನ್ನು ಕಾಂಗ್ರೆಸ್ ಪಕ್ಷದಿಂದ ಕಿತ್ತುಕೊಳ್ಳುವುದರಲ್ಲಿ ಯಶಸ್ವಿ ಆಗುತ್ತೇವೆ. ಎರಡೂ ಕಡೆ ಗೆಲ್ಲುವ ವಿಶ್ವಾಸವಿದೆ' ಎಂದು ವಿಜಯೇಂದ್ರ ಹೇಳಿದರು.

ದಾವಣಗೆರೆಯಲ್ಲಿ ಸೋಲಿನ ಮುನ್ಸೂಚನೆ ಲಭಿಸಿದ ಕಾರಣ ಕಾಂಗ್ರೆಸ್ ಹೈಕಮಾಂಡ್ ಮುಖ್ಯಮಂತ್ರಿಯವರ ರಾಜಕೀಯ ಸಲಹೆಗಾರರ ರಾಜೀನಾಮೆ ಪಡೆಯುವಂತೆ ಸೂಚನೆ ನೀಡಿದೆ ಎಂದರು.



ಸಚಿವ ಸಂಪುಟದ ವಿಸ್ತರಣೆಗೆ ಆಗ್ರಹಿಸಿ 38ಕ್ಕೂ ಹೆಚ್ಚು ಶಾಸಕರು ಈಗಾಗಲೇ ದೆಹಲಿಯಲ್ಲಿ ಬೀಡು ಬಿಟ್ಟಿದ್ದಾರೆ. ಡಿ.ಕೆ. ಶಿವಕುಮಾರ್ ಬೆಂಬಲಿಗರು ಸಹ ದೆಹಲಿ ಯಾತ್ರೆ ಆರಂಭ ಮಾಡಿದ್ದನ್ನು ಗಮನಿಸಿದರೆ, ಉಪಚುನಾವಣೆ ಫಲಿತಾಂಶದ ನಂತರ ಕಾಂಗ್ರೆಸ್‌ನಲ್ಲಿ ಅಲ್ಲೋಲ ಕಲ್ಲೋಲ ಆಗಲಿದೆ. ಅದರ ಸ್ಪಷ್ಟ ಮುನ್ಸೂಚನೆ ಕಾಣುತ್ತಿದೆ ಎಂದರು.

'ಬೆಂಗಳೂರು-ಮುಂಬೈ ವಂದೇ ಭಾರತ್ ರೈಲು ಸಂಚಾರಕ್ಕೆ ಅಸ್ತು'

ನವದೆಹಲಿ: ಬೆಂಗಳೂರು–ಮುಂಬೈ ನಡುವೆ 'ವಂದೇ ಭಾರತ್ ಸ್ಲೀಪರ್' ರೈಲು ಸಂಚಾರಕ್ಕೆ ರೈಲ್ವೆ ಸಚಿವಾಲಯ ಒಪ್ಪಿಗೆ ನೀಡಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ, ಕಲ್ಯಾಣ ಕರ್ನಾಟಕ ಸಂಪರ್ಕಕ್ಕೆ ಅನುಕೂಲವಾಗುವಂತೆ ನೂತನ ವಂದೇ ಭಾರತ್ ರೈಲು ಆರಂಭಿಸಲು ಪ್ರಧಾನಿ ನರೇಂದ್ರ ಮೋದಿ ಮತ್ತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಜೋಶಿ ಮನವಿ ಮಾಡಿದ್ದರು.

'ಬೆಂಗಳೂರಿನಿಂದ ಕರ್ನಾಟಕದ ಮಧ್ಯಭಾಗವಾದ ತುಮಕೂರು, ದಾವಣಗೆರೆ, ಹಾವೇರಿ, ಹುಬ್ಬಳ್ಳಿ-ಧಾರವಾಡ ಮತ್ತು ಬೆಳಗಾವಿ ಮಾರ್ಗದ ಮೂಲಕ ಮುಂಬೈಗೆ 'ಬೆಂಗಳೂರು-ಮುಂಬೈ ಸೂಪರ್ ಫಾಸ್ಟ್' ರೈಲು ಕಲ್ಪಿಸುವಂತೆ ಒತ್ತಾಯಿಸಲಾಗಿತ್ತು. ಈ ರೈಲು ಬೆಂಗಳೂರು ಕೆಎಸ್‌ಆರ್ ನಿಲ್ದಾಣದಿಂದ ಕಲ್ಯಾಣ ಕರ್ನಾಟಕದ ಮೂಲಕ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಲ್‌ಗೆ ಸಂಚರಿಸಲಿದೆ' ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಶೀಘ್ರವೇ ಸೂಪರ್ ಫಾಸ್ಟ್ ರೈಲು ಸಂಚಾರ ಪ್ರಾರಂಭಿಸಿ, ಭವಿಷ್ಯದಲ್ಲಿ ಅದನ್ನು 'ವಂದೇ ಭಾರತ್ ಸ್ಲೀಪರ್ ರೈಲು' ಆಗಿ ಬದಲಾಯಿಸಲಾಗುವುದು ಎಂದು ರೈಲ್ವೆ ಸಚಿವರು ಭರವಸೆ ನೀಡಿದ್ದಾರೆ' ಎಂದಿದ್ದಾರೆ.

ರೋಹಿಣಿ ವಿರುದ್ಧ ತನಿಖೆ: ಸುಪ್ರೀಂ ಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪರಿಸರ ಸ್ನೇಹಿ ಬಟ್ಟೆಯ ಕೈಚೀಲಗಳನ್ನು ಖರೀದಿಸುವ ಪ್ರಕ್ರಿಯೆಯಲ್ಲಿ ಕೋಟ್ಯಂತರ ರೂಪಾಯಿಗಳ ಅಕ್ರಮ ಎಸಗಿದ ಆರೋಪದಲ್ಲಿ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ತನಿಖೆ ನಡೆಸಲು ಪೂರ್ವಾನುಮತಿ ನೀಡಲು ಕರ್ನಾಟಕ ಸರ್ಕಾರಕ್ಕೆ ನಿರ್ದೇಶಿಸಿದ್ದ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ತಡೆಯಾಜ್ಞೆ ನೀಡಿದೆ.

ರೋಹಿಣಿ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ದೀಪಂಕರ ದತ್ತ ಹಾಗೂ ಸತೀಶ್ ಚಂದ್ರ ಶರ್ಮಾ ಪೀಠವು ಪ್ರತಿವಾದಿಗಳಾದ ರಾಜ್ಯ ಸರ್ಕಾರ ಹಾಗೂ ಎನ್.ಆರ್. ರವಿಚಂದ್ರೇಗೌಡ ಅವರಿಗೆ ನೋಟಿಸ್ ಜಾರಿ ಮಾಡಿದೆ.

ಎ, ಬಿ ವೃಂದದ ಹೊಣೆ ಸಚಿವರಿಗೆ ● ಇದೇ 15ರಿಂದ ಆರಂಭ

ನೌಕರರ ವರ್ಗಾವಣೆ ಪರ್ವ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಗೆ ಈ ಸಾಲಿನಲ್ಲಿ ಬುಧವಾರದಿಂದ (ಏಪ್ರಿಲ್ 15) ಮೇ 31ರವರೆಗೆ ಅವಕಾಶ ಕಲ್ಪಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸೋಮವಾರ ಮಾರ್ಗಸೂಚಿ ಹೊರಡಿಸಿದೆ.

ಎಲ್ಲ ವೃಂದಗಳಿಗೆ (ಗ್ರೂಪ್ 'ಎ', 'ಬಿ', 'ಸಿ', 'ಡಿ') ಅನ್ವಯವಾಗುವಂತೆ, ಆಯಾ ವೃಂದಗಳ ಕಾರ್ಯನಿರತ ವೃಂದ ಬಲದ ಶೇ 6ನ್ನು ಮೀರದಂತೆ ವರ್ಗಾವಣೆ ಕೈಗೊಳ್ಳಲು ಅವಕಾಶವಿದೆ. ಈ ಪೈಕಿ, ಗ್ರೂಪ್ 'ಎ' ಮತ್ತು 'ಬಿ' ವೃಂದದ ಅಧಿಕಾರಿಗಳ ವರ್ಗಾವಣೆ ಅಧಿಕಾರವನ್ನು ಆಯಾ ಇಲಾಖೆಗಳ ಸಚಿವರಿಗೆ, ಗ್ರೂಪ್ 'ಸಿ' ಮತ್ತು 'ಡಿ' ವೃಂದದ ನೌಕರರ ವರ್ಗಾವಣೆ ಅಧಿಕಾರವನ್ನು ಆಯಾ ನೇಮಕಾತಿ ಪ್ರಾಧಿಕಾರಗಳಿಗೆ ನೀಡಲಾಗಿದೆ.

ವರ್ಗಾವಣೆಗೆ ನಿಗದಿಪಡಿಸಿದ ಕನಿಷ್ಠ ಅವಧಿ

ವೃಂದ (ಹುದ್ದೆ)	ಸೇವಾವಧಿ (ವರ್ಷಗಳು)
ಗ್ರೂಪ್ 'ಎ'	2
ಗ್ರೂಪ್ 'ಬಿ'	2
ಗ್ರೂಪ್ 'ಸಿ'	4
ಗ್ರೂಪ್ 'ಡಿ'	7

ಅಲ್ಲದೆ, ಇಲಾಖೆಗಳ ಮುಖ್ಯಸ್ಥರು ಗ್ರೂಪ್ 'ಎ' ಮತ್ತು 'ಬಿ' ವೃಂದದ ಅಧಿಕಾರಿಗಳ ವರ್ಗಾವಣೆ ಪ್ರಸ್ತಾವಗಳನ್ನು ಸಚಿವಾಲಯದ ಆಡಳಿತ ಇಲಾಖೆಗಳ ಮೂಲಕವೇ ಸಚಿವರಿಗೆ ಸಲ್ಲಿಸಬೇಕು. ರಾಜ್ಯ ವಿಧಾನಸಭೆಯ ಉಪ ಚುನಾವಣೆಯಲ್ಲಿ ಭಾಗಿಯಾಗಿರುವ ಅಧಿಕಾರಿ, ಸಿಬ್ಬಂದಿಯನ್ನು ಚುನಾವಣಾ ಪ್ರಕ್ರಿಯೆ ಮುಕ್ತಾಯ ಆಗುವವರೆಗೂ ವರ್ಗಾವಣೆಯಿಂದ ಹೊರತುಪಡಿಸಬೇಕು ಎಂದೂ ತಿಳಿಸಲಾಗಿದೆ.

ಒಂದೇ ಕೇಂದ್ರ ಸ್ಥಾನದಲ್ಲಿರುವ ಒಂದು ಕಚೇರಿಯಿಂದ ಇನ್ನೊಂದು ಕಚೇರಿಗೆ ಮಾಡುವ ಸ್ಥಳ ನಿಯುಕ್ತಿಯನ್ನು (ಚಲನವಲನ) ವರ್ಗಾವಣೆ ಎಂದು ಪರಿಗಣಿಸಲಾಗುವುದಿಲ್ಲ. ಸಚಿವಾಲಯದಲ್ಲಿ ಕರ್ತವ್ಯಕ್ಕೆ ಸೇರಿದ ನೌಕರರನ್ನು ಸಚಿವಾಲಯದ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಮಾಡುವ ಸ್ಥಳ ನಿಯುಕ್ತಿಗೂ ಇದು ಅನ್ವಯವಾಗಲಿದೆ ಎಂದು ಮಾರ್ಗಸೂಚಿಯಲ್ಲಿ ವಿವರಿಸಲಾಗಿದೆ.

ಈ ಬಾರಿಯ ವರ್ಗಾವಣೆ ಪ್ರಕ್ರಿಯೆಯಲ್ಲಿ ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಳ್ಳಲು ನಿರ್ಧರಿಸಲಾಗಿದೆ, ಹೀಗಾಗಿ, ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ನೌಕರರು ತಮ್ಮ ಸೇವಾ ದಾಖಲೆಗಳನ್ನು ನಿಖರವಾಗಿ ಒದಗಿಸುವುದು ಕಡ್ಡಾಯ. ಕೇವಲ ವೈಯಕ್ತಿಕ ಬೇಡಿಕೆಗಳಲ್ಲದೆ, ಇಲಾಖೆಯ ಆಡಳಿತಾತ್ಮಕ ಅಗತ್ಯವನ್ನು ಪ್ರಮುಖ ಮಾನದಂಡವಾಗಿ ಪರಿಗಣಿಸಿ ವರ್ಗಾವಣೆ ಆದೇಶ ಹೊರಡಿಸಲಾಗುವುದು ಎಂದೂ ತಿಳಿಸಲಾಗಿದೆ.

'ಕೆಲವು ವಿಶೇಷ ಪ್ರಕರಣಗಳಲ್ಲಿ ಮಾನವೀಯ ನೆಲೆಯ ಮೇಲೆ ವರ್ಗಾವಣೆಯಲ್ಲಿ ಆದ್ಯತೆ ನೀಡಲು ಮಾರ್ಗಸೂಚಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವವರು ಹಾಗೂ ಗರ್ಭಿಣಿ ನೌಕರರ ವರ್ಗಾವಣೆ ಮನವಿಗಳನ್ನು ಆದ್ಯತೆಯ ಮೇಲೆ ಪರಿಗಣಿಸಲಾಗುವುದು. ಅಲ್ಲದೆ, ಕುಟುಂಬದ ಅನಿವಾರ್ಯ ಪರಿಸ್ಥಿತಿ ಅಥವಾ ಮಕ್ಕಳ ಶಿಕ್ಷಣದಂತಹ ಕಾರಣಗಳಿಗೂ ನಿಯಮಾನುಸಾರ ವಿನಾಯಿತಿ ನೀಡಲಾಗುವುದು' ಎಂದೂ ಮಾರ್ಗಸೂಚಿಯಲ್ಲಿದೆ.

ಬಿಜೆಪಿಯಿಂದ ಅಂಬೇಡ್ಕರ್ ಜಯಂತಿ

ಬೆಂಗಳೂರು: ಬಿ.ಆರ್.ಅಂಬೇಡ್ಕರ್ ಅವರ ಜಯಂತಿಯನ್ನು ಸೋಮವಾರ ಆರಂಭಿಸಿದ್ದು, ಇದೇ 20 ರವರೆಗೆ ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಸಂಸದ ಗೋವಿಂದ ಕಾರಜೋಳ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಂಬಂಧ 'ಭೀಮ ದೀಪೋತ್ಸವ' ಸೇರಿ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸಲು ತಾಲ್ಲೂಕು ಮತ್ತು ಜಿಲ್ಲಾ ಘಟಕಗಳಿಗೆ ಸೂಚಿಸಲಾಗಿದೆ ಎಂದು ಅವರು ಹೇಳಿದರು.

ಪಂಚಮಸಾಲಿ ಶ್ರೀ: ಆರೋಪಕ್ಕೆ ತಿರುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೂಡಲ ಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ವಿರುದ್ಧದ ಲೈಂಗಿಕ ದೌರ್ಜನ್ಯ ಮತ್ತು ಬ್ಲ್ಯಾಕ್ ಮೇಲ್ ಆರೋಪ ಪ್ರಕರಣ ಹೊಸ ತಿರುವು ಪಡೆದುಕೊಂಡಿದೆ.

ಸ್ವಾಮೀಜಿ ವಿರುದ್ಧ ದೂರು ನೀಡಿದ್ದ ಮಹಿಳೆ, 'ಸ್ವಾಮೀಜಿ ತನ್ನ ಮೇಲೆ ಯಾವುದೇ ಲೈಂಗಿಕ ದೌರ್ಜನ್ಯ ಎಸಗಿಲ್ಲ. ನನ್ನ ಮತ್ತು ಸ್ವಾಮೀಜಿ ವಿರುದ್ಧ ದುಷ್ಟಕೂಟಗಳು ಅಪಪ್ರಚಾರ ಮಾಡಿವೆ' ಎಂದು ಗೃಹ ಸಚಿವರು ಹಾಗೂ ಇತರರಿಗೆ ಇ-ಮೇಲ್ ಮೂಲಕ ಎರಡು ಪುಟಗಳ ಪತ್ರವನ್ನು ಕಳುಹಿಸಿದ್ದಾರೆ.

ಏಪ್ರಿಲ್ 7ರಂದು ಮಹಿಳೆ, ಗೃಹ ಇಲಾಖೆ, ನಗರ ಪೊಲೀಸ್ ಕಮಿಷನರ್, ಮಹಿಳಾ ಆಯೋಗ, ಮಾನವ ಹಕ್ಕುಗಳ ಆಯೋಗ ಹಾಗೂ ಬನಶಂಕರಿ ಪೊಲೀಸ್ ಠಾಣೆಗೆ ಸ್ವಾಮೀಜಿ ವಿರುದ್ಧ ದೂರು ನೀಡಿದ್ದರು.

ಆದರೆ, ಇದೀಗ ಹೇಳಿಕೆ ಬದಲಿಸಿರುವ ದೂರುದಾರೆ, 'ನಾನು ಯಾರಿಗೂ ದೂರು ಕೊಟ್ಟಿಲ್ಲ. ಆರೋಪಗಳು ಸತ್ಯಕ್ಕೆ ದೂರವಾದವು. ಸ್ವಾಮೀಜಿ ಅವರ ಮೇಲೆ ಅಪಾರವಾದ ಗೌರವವಿದೆ. ಸ್ವಾಮೀಜಿ ಯಾವುದೇ ಲೈಂಗಿಕ ದೌರ್ಜನ್ಯ ಎಸಗಿಲ್ಲ ಮತ್ತು ಅಸಭ್ಯವಾಗಿಯೂ ವರ್ತಿಸಿಲ್ಲ. ಅಲ್ಲದೆ ನಾನು ಹಣಕ್ಕಾಗಿ ಸ್ವಾಮೀಜಿಗೆ ಬ್ಲ್ಯಾಕ್‌ಮೇಲ್ ಮಾಡುತ್ತೇನೆಂಬ ಆರೋಪ ಕೇಳಿ ಮನಸ್ಸಿಗೆ ನೋವಾಗಿದೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ನಾನಾಗಲಿ, ನನ್ನ ಸಂಬಂಧಿಕರಾಗಲಿ ಸ್ವಾಮೀಜಿಗೆ ಕರೆ ಮಾಡಿ ಹಣಕ್ಕೆ ಬೇಡಿಕೆ ಇಟ್ಟಿಲ್ಲ. ಸ್ವಾಮೀಜಿಗೆ ದಾರಿ ತಪ್ಪಿಸಿ ನನ್ನ ಮತ್ತು ನನ್ನ ಮಗನ ವಿರುದ್ಧ ಹನಿಟ್ರ್ಯಾಪ್ ಆರೋಪದಡಿ ದೂರು ನೀಡಿದ್ದಾರೆ. ನಾವು ಹಣ ಕೇಳುವ ದುಃಸ್ಥಿತಿಗೆ ಬಂದಿಲ್ಲ. ಇದರ ಹಿಂದೆ ಯಾರಿದ್ದಾರೆ ಎಂಬುದೂ ಗೊತ್ತಿಲ್ಲ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

30 ಸೆಕೆಂಡ್ ವಿಡಿಯೊ

ಪತ್ರ ಬರೆದ ಮಹಿಳೆ 30 ಸೆಕೆಂಡ್‌ನ ವಿಡಿಯೊವನ್ನು ಬಿಡುಗಡೆ ಮಾಡಿದ್ದಾರೆ.

'ನನ್ನ ವಿರುದ್ಧ ಮಾಡಿರುವ ಆರೋಪ ಸುಳ್ಳು ಎಂಬುದನ್ನು ಗೃಹ ಇಲಾಖೆ, ಮುಖ್ಯಮಂತ್ರಿ ಕಚೇರಿ, ಮಹಿಳಾ ಆಯೋಗ, ಮಾಧ್ಯಮಗಳಿಗೆ, ವಿಜಯಪುರ ಪೊಲೀಸ್ ಠಾಣೆ, ಬನಶಂಕರಿ ಠಾಣೆಗೆ ಇ-ಮೇಲ್ ಮೂಲಕ ತಿಳಿಸಿದ್ದೇನೆ. ಅನಾರೋಗ್ಯ ಕಾರಣಕ್ಕೆ ಚಿಕಿತ್ಸೆ ಪಡೆಯುತ್ತಿದ್ದೇನೆ. ನಾಲ್ಕೈದು ದಿನಗಳಲ್ಲಿ ಆಸ್ಪತ್ರೆಯಿಂದ ಬಿಡುಗಡೆಯಾಗಿ ಬಂದು ಸ್ಪಷ್ಟನೆ ನೀಡುತ್ತೇನೆ' ಎಂದು ವಿಡಿಯೊದಲ್ಲಿ ತಿಳಿಸಿದ್ದಾರೆ.

ದೆಹಲಿ ಕರ್ನಾಟಕ ಸಂಘ ರೇಣುಕುಮಾರ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಕರ್ನಾಟಕ ಸಂಘಕ್ಕೆ 2026–28ರ ಅವಧಿಗೆ ಅಧ್ಯಕ್ಷರಾಗಿ ಆರ್.ರೇಣುಕುಮಾರ್ ಆಯ್ಕೆಯಾಗಿದ್ದಾರೆ.

ಸಂಘದಲ್ಲಿ ಭಾನುವಾರ ನಡೆದ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಸಿ.ಎಂ. ನಾಗರಾಜ ಅವರನ್ನು 103 ಮತಗಳ ಅಂತರದಿಂದ ಮಣಿಸಿದರು. ರೇಣುಕುಮಾರ್ ಬಣವು 13 ಸ್ಥಾನಗಳಲ್ಲಿ ಗೆಲುವು ಸಾಧಿಸಿದರೆ, ನಾಗರಾಜ ಬಣವು 2 ಸ್ಥಾನಗಳಿಗೆ ತೃಪ್ತಿಪಟ್ಟುಕೊಂಡಿತು. ಕಳೆದ ಚುನಾವಣೆಯಲ್ಲಿ ನಾಗರಾಜ ಅವರು ರೇಣುಕುಮಾರ್ ಅವರನ್ನು ಆರು ಮತಗಳಿಂದ ಸೋಲಿಸಿದ್ದರು.



ರೇಣು ಕುಮಾರ್

ಪದಾಧಿಕಾರಿಗಳು: ಉಪಾಧ್ಯಕ್ಷರು; ವಸಂತ ಶೆಟ್ಟಿ ಬೆಳ್ಳಾರೆ, ಶೋಭಾ ಗೌಡ, ಪ್ರಧಾನ ಕಾರ್ಯದರ್ಶಿ; ರಾಧಾಕೃಷ್ಣ, ಖಜಾಂಚಿ; ಆಶಾಲತಾ ಎಂ., ಜಂಟಿ ಕಾರ್ಯದರ್ಶಿಗಳು; ಸಂತೋಷ ಜೆ., ಅಶ್ವಿನಿ ಬಿ.ಎಸ್., ಕಾರ್ಯಕಾರಿ ಸಮಿತಿ ಸದಸ್ಯರು: ವೆಂಕಟಾಚಲ ಹೆಗಡೆ, ಪೂಜಾ ರಾವ್, ಶಿವಪ್ಪ ಎಂ., ಡಾ.ಎಂ.ಎಸ್.ಶಶಿಕುಮಾರ್, ನಾರಾಯಣ ಬಿ., ಕೃಷ್ಣಪ್ಪ ಎಂ., ಜಯಶ್ರೀ ಬಸವರಾಜು, ಶುಭಾ ದೇವಿಪ್ರಸಾದ್.

ಸರ್ಕಾರಿ ಸಭೆ: ಪೌಷ್ಟಿಕ ಆಹಾರ

ಸಿರಿಧಾನ್ಯ ಆಧಾರಿತ ಉಪಾಹಾರ ನೀಡಲು ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸಭೆ, ಸಮಾರಂಭಗಳಲ್ಲಿ ಪೌಷ್ಟಿಕ ಆಹಾರ ನೀಡಲು ಸೂಚಿಸಿರುವ ಆರೋಗ್ಯ ಇಲಾಖೆ, ಸಿರಿಧಾನ್ಯ ಆಧಾರಿತ ಲಘು ಉಪಾಹಾರ, ಹಣ್ಣು–ತರಕಾರಿಗಳ ಸಲಾಡ್ ವಿತರಣೆಗೆ ಶಿಫಾರಸು ಮಾಡಿದೆ.

ಈ ಬಗ್ಗೆ ಇಲಾಖೆ ಆಯುಕ್ತ ಗುರುದತ್ತ ಹೆಗಡೆ ಅವರು ಸುತ್ತೋಲೆ ಹೊರಡಿಸಿದ್ದಾರೆ. 'ಸರ್ಕಾರಿ ಕಚೇರಿ ಹಾಗೂ ಸಂಬಂಧಿತ ಸ್ಥಳಗಳಲ್ಲಿ ಪೌಷ್ಟಿಕ ಆಹಾರ ಮತ್ತು ಪಾನೀಯಗಳನ್ನು ನೀಡದಿರುವುದು ಗಮನಕ್ಕೆ ಬಂದಿದೆ. ಆದ್ದರಿಂದ ಸರ್ಕಾರಿ ಸಭೆಗಳಲ್ಲಿ ಇವುಗಳನ್ನೇ ನೀಡಬೇಕಿದೆ' ಎಂದು ತಿಳಿಸಿರುವ ಅವರು, ಸರ್ಕಾರಿ ಕಚೇರಿ ಆವರಣದಲ್ಲಿರುವ ಎಲ್ಲ ಖಾನಾವಳಿ, ಹೋಟೆಲ್ ಹಾಗೂ ಕ್ಯಾಂಟೀನ್‌ಗಳಲ್ಲಿಯೂ ಪೌಷ್ಟಿಕ ಆಹಾರ ವಿತರಣೆಗೆ ಶಿಫಾರಸು ಮಾಡಿದ್ದಾರೆ.

ಏನೆಲ್ಲ ವಿತರಣೆಗೆ ಶಿಫಾರಸು?

- ಸಿರಿಧಾನ್ಯವುಳ್ಳ ಲಘು ಉಪಾಹಾರ
- ಕಡಿಮೆ ಕೊಬ್ಬು, ಕಡಿಮೆ ಸಕ್ಕರೆ, ಹೆಚ್ಚು ನಾರು ಇರುವ ಹಾಗೂ ಅಜಿನೊಮೋಟೊ ಬಳಸದ ಲಘು ಉಪಾಹಾರ
- ಕತ್ತರಿಸಿದ ತಾಜಾ ಹಣ್ಣು ಹಾಗೂ ತರಕಾರಿಯಿಂದ ಸಿದ್ಧಪಡಿಸಿದ ಸಲಾಡ್ ಅಥವಾ ಮೊಳಕೆ ಕಟ್ಟಿದ ಕಾಳುಗಳು
- ಬೇಯಿಸಿದ ಹುರಳಿಕಾಳು, ಬಟಾಣಿ, ಜೋಳ
- ಉಪ್ಪು ರಹಿತ ಹುರಿದ ಬೀಜಧಾನ್ಯಗಳಾದ ಬಾದಾಮಿ, ವಾಲ್ನಟ್, ನೆಲಗಡಲೆ
- ಕುಂಬಳಕಾಯಿ, ಸೂರ್ಯಕಾಂತಿ, ಕುಸುಬೆ, ಅಗಸೆ ಮುಂತಾದ ಹುರಿದ ಬೀಜಗಳು
- ಕಡಿಮೆ ಕೊಬ್ಬು ಹಾಗೂ ಕಡಿಮೆ ಸಕ್ಕರೆಯುಳ್ಳ ಲಘು ಪಾನೀಯ
- ಗ್ರೀನ್ ಟೀ ಅಥವಾ ಕಡಿಮೆ ಕೊಬ್ಬುಳ್ಳ ಮಜ್ಜಿಗೆ
- ಸ್ಥಳೀಯವಾಗಿ ಸಂಸ್ಕರಿಸಿದ ಅಥವಾ ಕುದಿಸಿದ ನೀರನ್ನು ಗಾಜಿನ ಬಾಟಲ್‌ನಲ್ಲಿ ನೀಡುವುದು

ಏನೆಲ್ಲ ನೀಡದಂತೆ ಸೂಚನೆ?

- ಮೈಕ್ರೋವೇವ್‌ನಲ್ಲಿ ತಯಾರಿಸಿರುವ, ಬಿಸಿ ಮಾಡಿರುವ ಆಹಾರ
- ಕೈಗಾರಿಕೆಗಳಿಂದ ಸಂಸ್ಕರಿಸಲ್ಪಟ್ಟ ಆಹಾರ
- ಅಧಿಕ ಕೊಬ್ಬು, ಎಣ್ಣೆ, ಮಸಾಲೆಯುಕ್ತ ಆಹಾರ
- ಎಣ್ಣೆಯಲ್ಲಿ ಕರಿದ ತಿಂಡಿಗಳು
- ಕಾರ್ಬೋನೆಟೆಡ್ ಪಾನೀಯಗಳು
- ಅಧಿಕ ಸಕ್ಕರೆ ಸೇರಿಸಿರುವ ಹಣ್ಣಿನ ರಸಗಳು
- ಆಲ್ಕೋಹಾಲ್ ಆಧರಿತ ಪಾನೀಯಗಳು
- ಹಾಲು, ಕಾಫಿ, ಚಹಾ
- ಪ್ಲಾಸ್ಟಿಕ್ ಬಾಟಲಿಯಲ್ಲಿನ ನೀರು

ಭೈರವೈಕ್ಯ ಮಂದಿರ: ಲೋಕಾರ್ಪಣೆ ನಾಳೆ

ಆದಿಚುಂಚನಗಿರಿ ಕ್ಷೇತ್ರ: ಮೋದಿ ಅವರಿಂದ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): 'ಆದಿಚುಂಚನಗಿರಿ ಮಠದ 71ನೇ ಪೀಠಾಧಿಪತಿ ಬಾಲಗಂಗಾಧರನಾಥ ಸ್ವಾಮೀಜಿಯವರ ಗದ್ದುಗೆಯುಳ್ಳ 'ಗುರು ಭೈರವೈಕ್ಯ ಮಂದಿರ'ವನ್ನು ಪ್ರಧಾನಿ ನರೇಂದ್ರ ಮೋದಿ ಏ.15ರಂದು ಲೋಕಾರ್ಪಣೆ ಗೊಳಿಸಲಿದ್ದಾರೆ' ಎಂದು ಮಠದ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು.

ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ, 'ಪ್ರಧಾನಿ ಅವರು ಅಂದು ಹೆಲಿಕಾಪ್ಟರ್‌ನಲ್ಲಿ ಬೆಳಿಗ್ಗೆ 10ಕ್ಕೆ ಕ್ಷೇತ್ರದ ತಪೋವನಕ್ಕೆ ಬರುವರು. ಗುರು ಗೋರಖ್‌ನಾಥರು ತಪಸ್ಸು ಮಾಡಿದ್ದ ಜ್ವಾಲಾಪೀಠ (ಉರಿಗದ್ದುಗೆ) ದರ್ಶನ ಮಾಡಿ, ಕಾಲಭೈರವನಿಗೆ ಮಂಗಳಾರತಿ ಸಲ್ಲಿಸಿ ಮಂದಿರ ಉದ್ಘಾಟಿಸುತ್ತಾರೆ' ಎಂದರು.

'ನಂತರ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, 'ಸೌಂದರ್ಯಲಹರೀ ಮತ್ತು ಶಿವಮಹಿಮ್ನಃ ಸ್ತೋತ್ರಮ್' ಗ್ರಂಥವನ್ನು ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡರೊಂದಿಗೆ ಪ್ರಧಾನಿ ಬಿಡುಗಡೆ ಮಾಡಲಿದ್ದಾರೆ. ಪವಿತ್ರ ಧಾರ್ಮಿಕ ಕಾರ್ಯಕ್ಕೆ ಬರುತ್ತಿರುವುದರಿಂದ ಯಾವುದೇ ಬೇಡಿಕೆ ಸಲ್ಲಿಸುವುದಿಲ್ಲ' ಎಂದರು.

ಪ್ರವೇಶ ನಿರ್ಬಂಧ: 'ಅಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 1ರವರೆಗೆ ಸಾರ್ವಜನಿಕರ ಪ್ರವೇಶಕ್ಕೆ ಕ್ಷೇತ್ರದಲ್ಲಿ ನಿರ್ಬಂಧವಿರುತ್ತದೆ. ಬಿಜಿಎಸ್ ಕ್ರೀಡಾಂಗಣದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಭಕ್ತರು ಬೆಳಿಗ್ಗೆ 9 ಗಂಟೆಯೊಳಗೆ ಬರಬೇಕು. ಮೋದಿಯವರ ನಿರ್ಗಮನದ ನಂತರ ದೇವಾಲಯ ಹಾಗೂ ಮಂದಿರಕ್ಕೆ ಪ್ರವೇಶ ಕಲ್ಪಿಸಲಾಗುತ್ತದೆ' ಎಂದರು.

'1.5 ಲಕ್ಷಕ್ಕೂ ಹೆಚ್ಚು ಭಕ್ತರು ಸೇರುವ ನಿರೀಕ್ಷೆ ಇದೆ. ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಪಾಲ್ಗೊಳ್ಳಲಿದ್ದಾರೆ' ಎಂದರು. ಪ್ರಸನ್ನನಾಥ ಸ್ವಾಮೀಜಿ ಇದ್ದರು.

'₹80 ಕೋಟಿ ಮೌಲ್ಯದ ಭವ್ಯ ಮಂದಿರ'

'ಮಂದಿರಕ್ಕೆ ಅಂದಾಜು ₹80 ಕೋಟಿ ವೆಚ್ಚವಾಗಿದೆ. ದೇವಾಲಯ ನಿರ್ಮಾಣಕ್ಕೆ ಮೂರು ಬಗೆಯ ಕಲ್ಲುಗಳನ್ನು ಬಳಸಲಾಗಿದೆ. ವಿಧಾನಸೌಧ ನಿರ್ಮಾಣಕ್ಕೆ ಬಳಸಲಾಗಿರುವ ಮಾದರಿಯ ಕಲ್ಲನ್ನು ಹೊರಭಾಗದಲ್ಲಿ, ಇಳಕಲ್‌ನಿಂದ ತರಿಸಿರುವ ಕಲ್ಲನ್ನು ಗರ್ಭಗುಡಿಗೆ ಬಳಸಲಾಗಿದೆ. ಉಳಿದೆಡೆ ಸಂತೆಕಲ್‌ನಿಂದ ತರಿಸಿದ ಕಲ್ಲನ್ನು ಬಳಸಲಾಗಿದೆ' ಎಂದು ಸ್ವಾಮೀಜಿ ತಿಳಿಸಿದರು.



ಲೋಕಾರ್ಪಣೆಗೆ ಸಿದ್ಧವಾಗಿರುವ ಶ್ರೀಗುರು ಭೈರವೈಕ್ಯ ಮಂದಿರ

ವಿಧಾನಸೌಧದಲ್ಲಿ ಎಂ.ಬಿ. ಪಾಟೀಲ ಜತೆ ಎಚ್‌ಡಿಕೆ ಸಭೆ

ಮಂಡ್ಯಕ್ಕೆ ಎಆರ್‌ಎಐ ಕೇಂದ್ರ, ಕೈಗಾರಿಕಾ ಹಬ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಬೃಹತ್ ಕೈಗಾರಿಕೆ ಇಲಾಖೆಯ ಅಧೀನದಲ್ಲಿ ಬರುವ 'ಆಟೊಮೋಟೋವ್ ರೀಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ' (ಎಆರ್‌ಎಐ) ಕೇಂದ್ರವನ್ನು ಮಂಡ್ಯ ಜಿಲ್ಲೆಯಲ್ಲಿ ಸ್ಥಾಪಿಸುವ ಕುರಿತಂತೆ ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ. ಕುಮಾರಸ್ವಾಮಿ ಮತ್ತು ರಾಜ್ಯ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಸೋಮವಾರ ಸಮಾಲೋಚನೆ ನಡೆಸಿದರು.

ಕೇಂದ್ರದಲ್ಲಿ ಸಚಿವರಾಗಿ ಅಧಿಕಾರ ವಹಿಸಿಕೊಂಡ ಎರಡು ವರ್ಷಗಳ ನಂತರ ಇದೇ ಮೊದಲ ಬಾರಿಗೆ ಕುಮಾರಸ್ವಾಮಿ, ವಿಧಾನಸೌಧದಲ್ಲಿ ನಡೆದ ಸಭೆಯಲ್ಲಿ ಭಾಗಿಯಾಗಿ ರಾಜ್ಯದಲ್ಲಿ ಕೈಗಾರಿಕೆ ಅಭಿವೃದ್ಧಿ ಕುರಿತು ಮಹತ್ವದ ಚರ್ಚೆ ನಡೆಸಿದರು.

ನಂತರ ಮಾತನಾಡಿದ ಕುಮಾರಸ್ವಾಮಿ, 'ಇಂತಹ ಪರೀಕ್ಷಾ ಕೇಂದ್ರ ಇಡೀ ರಾಷ್ಟ್ರದಲ್ಲಿ ನಾಲ್ಕು ಕಡೆ ಮಾತ್ರ ಇದೆ. ಐದನೇ ಕೇಂದ್ರವನ್ನು ಕರ್ನಾಟಕಕ್ಕೆ ತರಬೇಕು ಎನ್ನುವುದು ನನ್ನ ಉದ್ದೇಶ. ಆಟೋಮೊಬೈಲ್ ಕ್ಷೇತ್ರಕ್ಕೆ ಅದರಲ್ಲೂ ಮುಖ್ಯವಾಗಿ ಎಲೆಕ್ಟ್ರಿಕ್ ವಾಹನ ಉದ್ಯಮಕ್ಕೆ ಈ ಪರೀಕ್ಷಾ ಕೇಂದ್ರದಿಂದ ಹೆಚ್ಚಿನ ಉತ್ತೇಜನ ಸಿಗಲಿದೆ. ಈ ಬಗ್ಗೆ ಸಚಿವರ ಜೊತೆ ವಿಸ್ತೃತವಾಗಿ ಸಮಾಲೋಚನೆ ನಡೆಸಿದ್ದೇನೆ. ಅವರು ಸಕಾರಾತ್ಮಕವಾಗಿ ಸ್ಪಂದಿಸಿದರು' ಎಂದರು.

'ಎಆರ್‌ಎಐ ಕೇಂದ್ರ ಸ್ಥಾಪನೆಯೂ ಸೇರಿದಂತೆ ಪೂರಕ ವ್ಯವಸ್ಥೆಗಳಿಗೆ ಸುಮಾರು 500 ರಿಂದ 600 ಎಕರೆ ಭೂಮಿ ಅಗತ್ಯವಿದೆ. ನನ್ನ ಲೋಕಸಭಾ ಕ್ಷೇತ್ರ ಮಂಡ್ಯದಲ್ಲೇ ಈ ಕೇಂದ್ರ ಆಗಬೇಕೆಂದು ನಿರ್ಧರಿಸಿದ್ದೇನೆ. ಯಾರ‍್ಯಾರ ಹೃದಯದಲ್ಲಿ ಏನೇನಿದೆಯೊ. ನಾನು ಮಂಡ್ಯದ ಜನತೆಯ ಋಣ ತೀರಿಸಬೇಕಿದೆ. ಅಲ್ಲದೆ, ಎಂ.ಬಿ. ಪಾಟೀಲರು ಭರವಸೆ ನೀಡಿದಂತೆ ಸಹಕಾರ ನೀಡಿದರೆ ರಾಜ್ಯಕ್ಕೆ ಇನ್ನಷ್ಟು ಕೈಗಾರಿಕೆಗಳನ್ನು ತರಬಹುದು' ಎಂದರು.

'ಎಆರ್‌ಎಐ ಕೇಂದ್ರಕ್ಕೆ ಎರಡು ಮೂರು ಜಾಗ ನೋಡಿದ್ದೇವೆ. ಅಲ್ಲಿ ಲಭ್ಯವಿರುವ ಜಾಗ ಬಹಳ ಸೀಮಿತವಾಗಿದೆ. ಕೈಗಾರಿಕಾಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿ ಸಮಾನಾಂತರವಾಗಿ ನಡೆಯಬೇಕು ಎನ್ನುವುದು ನನ್ನ ಆಶಯ. ಇದೇ 30ರ ಒಳಗೆ ಜಾಗ ಸಿಕ್ಕಿದರೆ ಮೇ ತಿಂಗಳಲ್ಲಿ ಭೂಮಿ ಪೂಜೆ ನೆರವೇರಿಸುವ ನನ್ನ ಸಚಿವಾಲಯ ಉದ್ದೇಶಿಸಿದೆ' ಎಂದರು.




ಮಂಡ್ಯ ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪನೆ ಕುರಿತಂತೆ ಎಚ್‌ಡಿ. ಕುಮಾರಸ್ವಾಮಿ ಹಾಗೂ ಎಂ.ಬಿ. ಪಾಟೀಲ ಅವರು ಸೋಮವಾರ ಸಭೆ ನಡೆಸಿದರು. ಮಾಜಿ ಸಚಿವ ಡಿ.ಸಿ. ತಮ್ಮಣ್ಣ, ಶಾಸಕ ರವಿಕುಮಾರ್, ಕೈಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಹಾಗೂ ಶಾಸಕ ಎಚ್‌ಡಿ. ರೇವಣ್ಣ ಉಪಸ್ಥಿತರಿದ್ದರು

'100 ಅಲ್ಲ, 500 ಎಕರೆ ಗುರುತಿಸಿ'

'ಮಂಡ್ಯದಲ್ಲಿ 100 ಎಕರೆಯಲ್ಲಿ ಎಆರ್‌ಎಐ ಕೇಂದ್ರ ಸ್ಥಾಪಿಸುವ ಬದಲು, ಕನಿಷ್ಠ 500 ಎಕರೆಯಲ್ಲಿ ಕೈಗಾರಿಕಾ ಹಬ್ ಅಭಿವೃದ್ಧಿಪಡಿಸುವುದು ಸೂಕ್ತ, ಅದಕ್ಕೆ ಕುಮಾರಸ್ವಾಮಿ ಕೂಡ ಒಪ್ಪಿದ್ದಾರೆ. ಈ ಉದ್ದೇಶಕ್ಕೆ ಜಿಲ್ಲೆಯಲ್ಲಿ ಸರ್ಕಾರಿ, ಖಾಸಗಿ ಜಮೀನು ಗುರುತಿಸುವಂತೆ ವಿಶೇಷ ಜಿಲ್ಲಾಧಿಕಾರಿಗೆ ಸೂಚಿಸಲಾಗಿದೆ' ಎಂ.ಬಿ. ಪಾಟೀಲ ಹೇಳಿದರು.

'ವಾಹನಗಳ ಪರೀಕ್ಷೆ ನಡೆಸಿ, ಪ್ರಮಾಣಪತ್ರ ಕೊಡುವ ಎಆರ್‌ಎಐ ಕೇಂದ್ರ ಸ್ಥಾಪನೆಗೆ ಮಂಡ್ಯ ಜಿಲ್ಲೆಯ ಬಸರಾಳು ಬಳಿ 105 ಎಕರೆ ಜಾಗವನ್ನು ನಾವು ತೋರಿಸಿದ್ದೇವೆ. ಬೆಂಗಳೂರು- ಮಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರು ಬೆಳ್ಳೂರು ಬಳಿ 2021ರಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ 425 ಎಕರೆ ಸ್ವಾಧೀನಪಡಿಸಿಕೊಳ್ಳಲಾಗಿದ್ದು, ಅದಕ್ಕೆ ಪರಿಹಾರ ವಿತರಣೆ ಮಾತ್ರ ಬಾಕಿ ಇದೆ. ಈ ಜಾಗವನ್ನೂ ನೋಡುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ' ಎಂದರು.

prajavani.net prajavani | ಮಂಗಳವಾರ, ಏಪ್ರಿಲ್ 14, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 103 | ಪುಟ 16 | www.prajavani.net



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 76,847 | ನಿಫ್ಟಿ 23,842 | $/₹ 93.35 | ಚಿನ್ನ (Std. 10g) ₹1,57,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,51,300 (ಬೆಂಗಳೂರು)

ಇರಾನ್ ಬಂದರುಗಳಿಗೆ ದಿಗ್ಬಂಧನ

ಹೊರ್ಮುಜ್ ದಾಟಲು ಇರಾನ್ ಹಡಗುಗಳಿಗೆ ಅಮೆರಿಕ ತಡೆ
ಬೆದರಿಕೆಗೆ ಬಗ್ಗದ ಇರಾನ್‌ನಿಂದ ಪ್ರತಿ ಎಚ್ಚರಿಕೆ

ಟೆಹರಾನ್/ಕೈರೊ (ಎಎಫ್‌ಪಿ): ಇರಾನ್‌ನ ಎಲ್ಲ ಬಂದರುಗಳಿಗೆ ಸೋಮವಾರದಿಂದ ಅಮೆರಿಕ ದಿಗ್ಬಂಧನ ವಿಧಿಸಿದೆ. ದಿಗ್ಬಂಧನ ಜಾರಿಯಾಗುತ್ತಿದ್ದಂತೆಯೇ, 'ಇರಾನ್‌ನ ಯಾವುದೇ ಹಡಗು ಹೊರ್ಮುಜ್ ಜಲಸಂಧಿ ಮೂಲಕ ಸಾಗುವಂತಿಲ್ಲ. ನಾವು ವಿಧಿಸಿರುವ ದಿಗ್ಬಂಧನದ ಪ್ರದೇಶ ಪ್ರವೇಶಿಸಲು ಇರಾನ್‌ನ ಯುದ್ಧನೌಕೆಗಳು ಯತ್ನಿಸಿದರೆ, ಅವನ್ನು ನಾಶಪಡಿಸಲಾಗುವುದು' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಅಮೆರಿಕದ ಅಧ್ಯಕ್ಷರ ಬೆದರಿಕೆಗೆ ಬಗ್ಗದ ಇರಾನ್ ಕೂಡ ತಿರುಗೇಟು ನೀಡಿದೆ.


'ನಮ್ಮ ಬಂದರುಗಳಿಗೆ ದಿಗ್ಬಂಧನ ವಿಧಿಸುವ ಅಮೆರಿಕದ ಕ್ರಮವನ್ನು ಕಡಲ್ಗಳ್ಳತನ ಎಂದು ಭಾವಿಸಲಾಗುವುದು ಮತ್ತು ಇದಕ್ಕೆ ಪ್ರತಿಯಾಗಿ ಕೊಲ್ಲಿ ದೇಶಗಳ ಯಾವ ಬಂದರುಗಳನ್ನೂ ಸುರಕ್ಷಿತವಾಗಿ ಇರಲು ಬಿಡುವುದಿಲ್ಲ' ಎಂದು ಇರಾನ್ ಎಚ್ಚರಿಕೆ ನೀಡಿದೆ.

8

'ಯುದ್ಧ ಬೇಕು'

ಸಮೀಕ್ಷೆಯಲ್ಲಿ ಪಾಲ್ಗೊಂಡವರ ಪೈಕಿ ಮೂರನೇ ಎರಡರಷ್ಟು ಜನರು ಇರಾನ್‌ನೊಂದಿಗೆ ಕದನ ವಿರಾಮ ಮಾಡಿಕೊಳ್ಳುವುದನ್ನು ವಿರೋಧಿಸಿದ್ದಾರೆ. ಆದರೆ, ಕದನ ವಿರಾಮವನ್ನು ಇಸ್ರೇಲ್ ಗೌರವಿಸಬೇಕು ಅಥವಾ ಬೇಡ ಎನ್ನುವ ಬಗ್ಗೆ ಜನರ ಅಭಿಪ್ರಾಯ ಭಿನ್ನವಿದೆ. ಕದನ ವಿರಾಮ ಪ್ರಸ್ತಾವದಲ್ಲಿ ಲೆಬನಾನ್ ಅನ್ನು ಸೇರಿಸುವುದಕ್ಕೆ ಶೇ 61ರಷ್ಟು ಜನರು ವಿರೋಧ ವ್ಯಕ್ತಪಡಿಸಿದ್ದಾರೆ. ಶೇ 39ರಷ್ಟು ಜನರು ಇರಾನ್ ವಿರುದ್ಧ ಇಸ್ರೇಲ್ ಯುದ್ಧ ನಡೆಸಬೇಕು ಎಂದಿದ್ದಾರೆ. ಶೇ 41ರಷ್ಟು ಜನರು ಕದನ ವಿರಾಮವನ್ನು ಇಸ್ರೇಲ್ ಗೌರವಿಸಬೇಕು ಎಂದಿದ್ದಾರೆ.

ನೆತನ್ಯಾಹು ಜನಪ್ರಿಯತೆ ಕುಸಿತ



- ಇದೇ ಅಕ್ಟೋಬರ್‌ನಲ್ಲಿ ಇಸ್ರೇಲ್‌ನಲ್ಲಿ ಚುನಾವಣೆ ನಡೆಯಲಿದೆ

ಆಧಾರ: ಜೆರುಸಲೇಂನಲ್ಲಿರುವ ಹೀಬ್ರೂ ವಿಶ್ವವಿದ್ಯಾಲಯ ನಡೆಸಿದ ಸಮೀಕ್ಷೆ

ಟ್ರಂಪ್ –ಪೋಪ್ ಜಟಾಪಟಿ ತೀವ್ರ

ವಾಷಿಂಗ್ಟನ್/ರೋಮ್ (ಎಎಫ್‌ಪಿ): ಯುದ್ಧವನ್ನು ಕೊನೆಗೊಳಿಸಬೇಕು ಎಂದು ಹೇಳಿರುವ ಪೋಪ್ 14ನೇ ಲಿಯೊ ವಿರುದ್ಧ ಮಾತನಾಡಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 'ನಾನು ಲಿಯೊ ಅವರ ದೊಡ್ಡ ಅಭಿಮಾನಿಯೇನಲ್ಲ' ಎಂದು ಹೇಳಿದ್ದಾರೆ.

ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಪೋಪ್ 'ಟ್ರಂಪ್ ಆಡಳಿತದ ಬಗ್ಗೆ ಮಾತನಾಡಲು ನನಗೆ ಯಾವುದೇ ಭಯವಿಲ್ಲ' ಎಂದಿದ್ದಾರೆ. ಈ ಮೂಲಕ ಇಬ್ಬರ ನಡುವಿನ ಜಟಾಪಟಿ ಮುಂದುವರಿದಿದೆ.


ಟ್ರಂಪ್ ತಮ್ಮನ್ನು ತಾವು ಯೇಸುವಿನಂತೆ ಬಿಂಬಿಸಿರುವ ಎಐ ಚಿತ್ರ

ಕ್ಯಾಥೊಲಿಕರ ಜಾಗತಿಕ ನಾಯಕ ಪೋಪ್ ಲಿಯೊ ಅವರು ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸಬೇಕು ಮತ್ತು ಶಾಂತಿ ಸ್ಥಾಪನೆಯಾಗಬೇಕು ಎಂದು ಹೇಳಿದ್ದರು. 'ಹಣದ ಮತ್ತು ಸ್ವಯಂ ಆರಾಧನೆ ಸಾಕು. ಶಕ್ತಿ ಪ್ರದರ್ಶನ ಮತ್ತು ಯುದ್ಧವೂ ಸಾಕು' ಎಂದಿದ್ದರು. ಟ್ರಂಪ್ ಆಡಳಿತದ ವಲಸೆ ನೀತಿಯನ್ನೂ ಟೀಕಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿರುವ ಟ್ರಂಪ್, 'ಪೋಪ್ ತುಂಬಾ ಉದಾರ ವ್ಯಕ್ತಿ. ಅಪರಾಧ ಕೊನೆಗೊಳ್ಳಬೇಕು ಎಂಬ ನಂಬಿಕೆ ಅವರಿಗಿಲ್ಲ' ಎಂದು ಸುದ್ದಿಗಾರರಿಗೆ ತಿಳಿಸಿದರು. ಬಳಿಕ ಟ್ರಂಪ್, ಸಾಮಾಜಿಕ ಜಾಲತಾಣ 'ಟ್ರೂತ್ ಸೋಷಿಯಲ್'ನಲ್ಲಿಯೂ ಈ ಬಗ್ಗೆ ಬರೆದುಕೊಂಡಿದ್ದಾರೆ.

'ಕೇಂದ್ರಕ್ಕಿಂತ ರಾಜ್ಯದ ಆರ್ಥಿಕತೆ ಸದೃಢ'

ಚಿಕ್ಕಮಗಳೂರು: 'ನರೇಂದ್ರ ಮೋದಿ ಅವರು 12 ವರ್ಷದಿಂದ ಪ್ರಧಾನಿಯಾಗಿ ದ್ದಾರೆ, ಆದರೆ ಆರ್ಥಿಕವಾಗಿ ಕೇಂದ್ರ ಸರ್ಕಾರಕ್ಕಿಂತ ರಾಜ್ಯ ಸರ್ಕಾರ ಸದೃಢವಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

5

ಚಿನಕುರುಳಿ ಪ್ರಕಾಶ್ ಶೆಟ್ಟಿ



ಅರ್ಜಿ ಪರಿಗಣಿಸಲು 'ಸುಪ್ರೀಂ' ನಕಾರ

ಮತದಾರರ ಹೆಸರು ಅಳಿಸಿರುವುದರ ವಿರುದ್ಧ ಸಲ್ಲಿಸಿದ ಅರ್ಜಿಗಳು ಅಕಾಲಿಕ

ಪ್ರಜಾವಾಣಿ ವಾರ್ತೆ/ಪಿಟಿಐ

ಪಶ್ಚಿಮ ಬಂಗಾಳ ಎಸ್‌ಐಆರ್

ನವದೆಹಲಿ: ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ ಹೆಸರುಗಳನ್ನು ಅಳಿಸಿರುವುದರ ವಿರುದ್ಧ ತುರ್ತಾಗಿ ಮಧ್ಯಪ್ರವೇಶಿಸುವಂತೆ ಕೋರಿ 13 ಜನರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ. ಅಲ್ಲದೆ, ಈ ಹಂತದಲ್ಲಿ ಚುನಾವಣಾ ಪ್ರಕ್ರಿಯೆಗೆ ಅಡ್ಡಿಪಡಿಸುವುದಿಲ್ಲ ಎಂದೂ ಹೇಳಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರಿದ್ದ ಪೀಠವು, ಈ ಅರ್ಜಿಯನ್ನು 'ಅಕಾಲಿಕ' ಎಂದು ಕರೆದಿದ್ದು, ಬಾಧಿತರು ಮೇಲ್ಮನವಿ ನ್ಯಾಯ ಮಂಡಳಿಗಳನ್ನು ಸಂಪರ್ಕಿಸಬೇಕು ಎಂದು ನಿರ್ದೇಶಿಸಿದೆ.

4

ಪೀಠ ಹೇಳಿದ ಪ್ರಮುಖಾಂಶಗಳು...

ಮಾಹಿತಿ ಹೊಂದಾಣಿಕೆ ಆಗದವರ ಹೆಸರುಗಳನ್ನು ಕೈಬಿಟ್ಟಿರುವ ಪಟ್ಟಿಯ ಬಗ್ಗೆ ಪ್ರಶ್ನಿಸಿದ ಪೀಠವು, ಈ ರೀತಿ ಇತರ ರಾಜ್ಯಗಳಲ್ಲಿ ವರ್ಗೀಕರಿಸಿರುವುದು ಗಮನಕ್ಕೆ ಬಂದಿಲ್ಲ. ನಾವು ಬಿಹಾರದ ಎಸ್‌ಐಆರ್ ಅನ್ನು ಪರಿಶೀಲಿಸಿದ್ದೇವೆ. ಅಲ್ಲಿ ಈ ರೀತಿಯ ವರ್ಗದಡಿ ಒಬ್ಬರನ್ನೂ ಗುರುತಿಸಿಲ್ಲ



- ಮತದಾನದ ಹಕ್ಕು ಸಾಂವಿಧಾನಿಕ ಮಾತ್ರವೇ ಅಲ್ಲ, ಅದು ಭಾವನಾತ್ಮಕವೂ ಆಗಿದೆ. ಇದು ಪ್ರಜಾಪ್ರಭುತ್ವದ ಭಾಗ
- ಇದು ರಾಜ್ಯ ಮತ್ತು ಚುನಾವಣಾ ಆಯೋಗದ ನಡುವಿನ ಹೋರಾಟವಲ್ಲ. ಹಾಗೆಯೇ ಒಬ್ಬರನ್ನೊಬ್ಬರು ದೂಷಿಸುವ ಆಟವೂ ಅಲ್ಲ. ಆದರೆ, ಮತದಾರರನ್ನು ಬೇರೆ ಬೇರೆ ಸಾಂವಿಧಾನಿಕ ಅಧಿಕಾರಿಗಳ ನಡುವೆ ಸಿಲುಕಿಸಲಾಗಿದೆ. ಇದು ಸರಿಯಲ್ಲ

4

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಸಾಧ್ಯತೆ

ವಿದ್ಯಾರ್ಥಿಗಳ ಸಾಧನೆ

ನಾರಾಯಣ ಪಿಯು ಕಾಲೇಜು

ಕೆ.ಆರ್.ಪುರ: ಕಗ್ಗದಾಸಪುರದ ನಾರಾಯಣ ಪಿಯು ಕಾಲೇಜಿನ ವಿದ್ಯಾರ್ಥಿನಿ ವೆಂಕಟ ದೀಕ್ಷಿತಾ ಮಲಪಾಡು ಅವರು ಪಿಯು ಪರೀಕ್ಷೆಯ ವಿಜ್ಞಾನ ವಿಭಾಗದಲ್ಲಿ ಅತಿಹೆಚ್ಚು 596 (ಶೇ 99.3) ಅಂಕ ಪಡೆದು ಕಾಲೇಜಿಗೆ ಪ್ರಥಮ ಹಾಗೂ ರಾಜ್ಯಕ್ಕೆ ಮೂರನೇ ಸ್ಥಾನ ಪಡೆದಿದ್ದಾರೆ.

ಅನನ್ಯ ಮಂಜುನಾಥ್ 585 (ಶೇ 97.5), ಬನಾಲ ಸಹರ್ಷ 583 (ಶೇ 97.16) ಫಾತಿಮಾ ಹನ್ನಿದಾ 581 (ಶೇ 96.83), ಕಾಸಿ ಇಂದು ಪ್ರಿಯ 580 (ಶೇ 96.66) ಅಂಕಗಳನ್ನು ಗಳಿಸಿದ್ದಾರೆ.

ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಬೆಂಗಳೂರು ಸೆಂಟ್ರಲ್ ಜೋನ್ ಕೋರ್ ಡೀನ್ ಈದಾರ ಉಮಾ ಮಹೇಶ್ವರರಾವ್ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಅಸೋಸಿಯೇಟ್ ಡೀನ್ ಶೇಖ್ ನಾಗೂರವಲಿ, ಪ್ರಾಂಶುಪಾಲ ಡಾ.ರಾಮಕೋಟೇಶ್ವರರಾವ್, ಡಿಜಿಎಂ ಶ್ರೀನಿವಾಸ್ ರಾವ್, ಎಜಿಎಂ ಶೇಖರ್ ಬಾಬು, ಸಿಬ್ಬಂದಿ ಉಪಸ್ಥಿತರಿದ್ದರು.



ವೆಂಕಟ ದೀಕ್ಷಿತಾ ಮಲಪಾಡು



ಅನನ್ಯ ಮಂಜುನಾಥ್



ಬನಾಲ ಸಹರ್ಷ



ಫಾತಿಮಾ ಹನ್ನಿದಾ



ಕಾಸಿ ಇಂದು ಪ್ರಿಯ

ಅರುಣೋದಯ ಐಎನ್‌ಡಿ ಪಿಯು ಕಾಲೇಜು



ಮಹಾಲಕ್ಷ್ಮೀ ಎಚ್ ರಾವ್ ಶೇ 98 (ವಾಣಿಜ್ಯ)



ಮೆಹನಾಜ್ ಶೇ 96 (ವಾಣಿಜ್ಯ)

‘ಟೆಲಿ ಮನಸ್’ಗೆ ದಾಖಲೆ ಸಂಖ್ಯೆಯಲ್ಲಿ ಕರೆ

ಮಾನಸಿಕ ಅನಾರೋಗ್ಯ ಸಮಸ್ಯೆಗಳಿಗೆ ನಿತ್ಯ 8 ಸಾವಿರಕ್ಕೂ ಅಧಿಕ ಮಂದಿ ಸಂಪರ್ಕ

● ವರುಣ ಹೆಗಡೆ

ಬೆಂಗಳೂರು: ಆರ್ಥಿಕ ಸಂಕಷ್ಟ, ಡಿಜಿಟಲ್ ವ್ಯಸನ ಸೇರಿದಂತೆ ನಾನಾ ಕಾರಣಗಳಿಂದ ಮನೋವ್ಯಾಧಿಗೆ ಒಳಪಡುವವರ ಸಂಖ್ಯೆ ಹೆಚ್ಚುತ್ತಿದೆ. ಇದರಿಂದಾಗಿ ಮಾನಸಿಕ ಅನಾರೋಗ್ಯ ಸಮಸ್ಯೆಗಳ ನಿರ್ವಹಣೆಗೆ ಮೀಸಲಾದ ‘ಟೆಲಿ ಮನಸ್’ ಸಹಾಯವಾಣಿಗೆ ದಾಖಲೆ ಸಂಖ್ಯೆಯಲ್ಲಿ ದೂರವಾಣಿ ಕರೆಗಳು ಬರುತ್ತಿವೆ.

ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಈ ಸಹಾಯವಾಣಿಯನ್ನು ನಿರ್ವಹಣೆ ಮಾಡುತ್ತಿದೆ. ವಿವಿಧ ರೀತಿಯ ಮಾನಸಿಕ ಅನಾರೋಗ್ಯ ಸಮಸ್ಯೆಗಳಿಗೆ ಉಚಿತವಾಗಿ 20 ಭಾಷೆಗಳಲ್ಲಿ ಸಮಾಲೋಚನೆ ನಡೆಸಲಾಗುತ್ತಿದೆ. ಸಮಾಲೋಚಕರು ದಿನವೊಂದಕ್ಕೆ ಸ್ವೀಕರಿಸುತ್ತಿದ್ದ ಕರೆಗಳ ಸಂಖ್ಯೆ ಈಗ 8 ಸಾವಿರದ ಗಡಿ ದಾಟಿದೆ. ಕಳೆದ ವರ್ಷ ಈ ಸಂಖ್ಯೆ ಸರಾಸರಿ 3.5 ಸಾವಿರದಷ್ಟಿತ್ತು. ಈಗ ಆ ಸಂಖ್ಯೆ ದುಪ್ಪಟ್ಟಾಗಿದೆ.



> **ಮಾನಸಿಕ ಅನಾರೋಗ್ಯ ಸಮಸ್ಯೆಗಳ ನಿವಾರಣೆಗೆ ‘ಟೆಲಿ ಮನಸ್’ ಸಹಾಯವಾಣಿ ನೆರವಾಗುತ್ತಿದ್ದು, ದೂರವಾಣಿ ಕರೆಗಳ ಸಂಖ್ಯೆ ಹೆಚ್ಚುತ್ತಿದೆ. ಮಕ್ಕಳೂ ಕರೆ ಮಾಡುತ್ತಿದ್ದಾರೆ**
>
> **ಪ್ರೊ.ಟಿ.ಕೆ.ಶ್ರೀಕಾಂತ್,** ಐಐಐಟಿ–ಬಿ ಇ-ಆರೋಗ್ಯ ಸಂಶೋಧನಾ ವಿಭಾಗದ ಮುಖ್ಯಸ್ಥ

14416 ಸಹಾಯವಾಣಿ ಸಂಖ್ಯೆಗೆ ದೇಶದ ವಿವಿಧ ಭಾಗಗಳಿಂದ ಕರೆಗಳು ಬರುತ್ತಿದ್ದು, ಇತ್ತೀಚಿನ ದಿನಗಳಲ್ಲಿ ಡಿಜಿಟಲ್ ವ್ಯಸನಕ್ಕೆ ಸಂಬಂಧಿಸಿದಂತೆಯೂ ಅಧಿಕ ಕರೆಗಳು ಬರುತ್ತಿವೆ. ಮಕ್ಕಳ ಪರವಾಗಿ ಅವರ ಪಾಲಕರೂ ಕರೆ ಮಾಡಿ, ಸಮಸ್ಯೆಯ ತೀವ್ರತೆ ಹಾಗೂ ಲಕ್ಷಣಗಳ ಬಗ್ಗೆ ಮಾಹಿತಿ ಹಂಚಿಕೊಳ್ಳುತ್ತಿದ್ದಾರೆ. ಅವರಿಗೆ ಸಮಾಲೋಚಕರು ಸೂಕ್ತ ಮಾರ್ಗದರ್ಶನ ಒದಗಿಸುವ ಮೂಲಕ ಮಕ್ಕಳನ್ನು ಡಿಜಿಟಲ್ ವ್ಯಸನದಿಂದ ಹೊರತರಲು ನೆರವಾಗುತ್ತಿದ್ದಾರೆ.



ಶಾಲಾ–ಕಾಲೇಜುಗಳಲ್ಲಿ ಕೂಡ ಮಾನಸಿಕ ಆರೋಗ್ಯ ಹಾಗೂ ಟೆಲಿ ಮನಸ್ ಸಹಾಯವಾಣಿ ಬಗ್ಗೆ ನಿಮ್ಹಾನ್ಸ್ ಜಾಗೃತಿ ಮೂಡಿಸುತ್ತಿದೆ. ಇದರಿಂದಾಗಿ ಮಕ್ಕಳು ಕೂಡ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ, ಪರೀಕ್ಷಾ ಒತ್ತಡ, ಏಕಾಗ್ರತೆಯ ಕೊರತೆ, ಜ್ಞಾಪಕ ಶಕ್ತಿ ತೊಂದರೆ ಸೇರಿ ತಾವು ಎದುರಿಸುತ್ತಿರುವ ವಿವಿಧ ಮಾನಸಿಕ ಅನಾರೋಗ್ಯ ಸಮಸ್ಯೆಗಳನ್ನು ಸಮಾಲೋಚಕರ ಜತೆಗೆ ಹಂಚಿಕೊಳ್ಳಲಾರಂಭಿಸಿದ್ದಾರೆ. ಸಹಾಯವಾಣಿಗೆ ಕರೆ ಮಾಡುತ್ತಿರುವವರಲ್ಲಿ ಶೇ 9ರಷ್ಟು ಮಂದಿ ಮಕ್ಕಳಾಗಿದ್ದಾರೆ.

35 ಲಕ್ಷ ಕರೆ: ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯು (ಐಐಐಟಿ–ಬಿ) ಈ ಸಹಾಯವಾಣಿಗೆ ತಾಂತ್ರಿಕ ನೆರವು ಒದಗಿಸುತ್ತಿದೆ. ಮಾನಸಿಕ ಅನಾರೋಗ್ಯ ಸಮಸ್ಯೆ ಹಾಗೂ ಒತ್ತಡಕ್ಕೆ ಒಳಗಾದವರಿಗೆ ಉಚಿತ ಸಲಹೆ ಮತ್ತು ಸಮಾಲೋಚನೆ ನಡೆಸಲು 2022ರ ಅಕ್ಟೋಬರ್‌ನಲ್ಲಿ ಈ ಸಹಾಯವಾಣಿ ಪ್ರಾರಂಭಿಸಲಾಗಿತ್ತು. ಇದಕ್ಕೆ ದೇಶದ ವಿವಿಧೆಡೆಯಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಈವರೆಗೆ 35 ಲಕ್ಷಕ್ಕೂ ಅಧಿಕ ದೂರವಾಣಿ ಕರೆಗಳನ್ನು ಸ್ವೀಕರಿಸಲಾಗಿದೆ.

‘ಟೆಲಿ ಮನಸ್ ಬಗ್ಗೆ ಜನರಲ್ಲಿ ಜಾಗೃತಿ ಮೂಡುತ್ತಿರುವ ಜತೆಗೆ, ಈ ಸಹಾಯವಾಣಿ ನೆರವಿಗೆ ಬರುತ್ತದೆ ಎಂಬ ವಿಶ್ವಾಸ ಮೂಡುತ್ತಿದೆ. ಇದರಿಂದಾಗಿ ಸಹಾಯವಾಣಿ ಸಂಖ್ಯೆಗೆ ಹೆಚ್ಚಿನ ಕರೆಗಳು ಬರುತ್ತಿವೆ. ಇತ್ತೀಚಿನ ದಿನಗಳಲ್ಲಿ ಡಿಜಿಟಲ್ ಸಾಧನ ಹಾಗೂ ಸಾಮಾಜಿಕ ಜಾಲತಾಣಗಳ ಬಳಕೆಯು ವ್ಯಸನವಾಗಿ ಮಾರ್ಪಟ್ಟಿದ್ದು, ಆ ಬಗ್ಗೆಯೂ ಹಲವು ಕರೆಗಳು ಬರುತ್ತಿವೆ. ಉಚಿತವಾಗಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಲಾಗುತ್ತಿದೆ. ಅಗತ್ಯವಿದ್ದರೆ ವಿಡಿಯೊ ಸಮಾಲೋಚನೆಯನ್ನೂ ನಡೆಸಲಾಗುತ್ತದೆ’ ಎಂದು ‘ಟೆಲಿ ಮನಸ್’ನ ಸಮಾಲೋಚಕರೊಬ್ಬರು ತಿಳಿಸಿದರು.

450ಕ್ಕೂ ಅಧಿಕ ಕರೆ ವರ್ಗಾವಣೆ

ಮಾನಸಿಕ ಅನಾರೋಗ್ಯ ಸಮಸ್ಯೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ನಿಮ್ಹಾನ್ಸ್ ಜತೆಗೆ ಬೆಂಗಳೂರು ನಗರ ಪೊಲೀಸ್ ಕಳೆದ ಫೆಬ್ರುವರಿಯಲ್ಲಿ ಒಡಂಬಡಿಕೆ ಮಾಡಿಕೊಂಡಿತ್ತು. ಇದರ ಅನುಸಾರ ಪೊಲೀಸ್ ಇಲಾಖೆಯ ತುರ್ತು ಸಹಾಯವಾಣಿ 112 ಅನ್ನು ‘ಟೆಲಿ ಮನಸ್’ ಜತೆಗೆ ಸಂಯೋಜಿಸಲಾಗಿದೆ. ಮಾನಸಿಕ ಒತ್ತಡ, ಖಿನ್ನತೆ ಸೇರಿ ವಿವಿಧ ಮಾನಸಿಕ ಅನಾರೋಗ್ಯ ಸಮಸ್ಯೆಗಳ ಕುರಿತು 112ಕ್ಕೆ ಬರುವ ಕರೆಗಳನ್ನು ಟೆಲಿ ಮನಸ್‌ಗೆ ವರ್ಗಾವಣೆ ಮಾಡಲಾಗುತ್ತಿದೆ. ಈ ಸಂಯೋಜನೆ ಬಳಿಕ ಈವರೆಗೆ 450ಕ್ಕೂ ಅಧಿಕ ದೂರವಾಣಿ ಕರೆಗಳು 112ರಿಂದ ‘ಟೆಲಿ ಮನಸ್’ ಸಹಾಯವಾಣಿಗೆ ವರ್ಗಾವಣೆಯಾಗಿದೆ.

ಆತ್ಮಹತ್ಯೆಯ ಯೋಚನೆ ಮಾಡುತ್ತಿರುವವರು, ನಿದ್ರಾಹೀನತೆ, ಖಿನ್ನತೆ, ಕೆಲಸದ ಒತ್ತಡ ಸೇರಿ ವಿವಿಧ ಮಾನಸಿಕ ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವವರು 112ಕ್ಕೆ ಕರೆ ಮಾಡುತ್ತಿದ್ದು, ಆ ಕರೆಗಳನ್ನು ‘ಟೆಲಿ ಮನಸ್’ಗೆ ಸಂಪರ್ಕಿಸಲಾಗುತ್ತಿದೆ.

‘ನಾರಿ ಶಕ್ತಿ ವಂದನ ಕಾಯ್ದೆ: ದಿಟ್ಟ ಹೆಜ್ಜೆ’

ಬೆಂಗಳೂರು: ಮಹಿಳೆಯರಿಗೆ ಸಂಸತ್ತು ಮತ್ತು ಶಾಸನ ಸಭೆಗಳಲ್ಲಿ ಶೇ 33ರಷ್ಟು ರಾಜಕೀಯ ಪ್ರಾತಿನಿಧ್ಯ ನೀಡುವ ‘ನಾರಿ ಶಕ್ತಿ ವಂದನ ಕಾಯ್ದೆ’ ಜಾರಿಗೆ ಮುಂದಾಗುವ ಮೂಲಕ ಕೇಂದ್ರ ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿದೆ ಎಂದು ಸುಮಂಗಲಿ ಸೇವಾಶ್ರಮದ ಸಂಸ್ಥಾಪಕಿ ಎಸ್.ಜಿ. ಸುಶೀಲಮ್ಮ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮಹಿಳೆಯರ ಕಲ್ಯಾಣಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಜಾರಿ ಮಾಡಿದ ಯೋಜನೆಗಳು ಸಾಕಷ್ಟು ಇವೆ. ‘ಬೇಟಿ ಬಚಾವೋ ಬೇಟಿ ಪಢಾವೋ’ ಮುಂತಾದ ಅಭಿಯಾನದ ಮೂಲಕ ಮಹಿಳೆಯರಿಗೆ ಶಕ್ತಿ ನೀಡಿದ್ದಾರೆ’ ಎಂದರು.

ಮಗುವಿನ ಶ್ವಾಸಕೋಶ ಸೇರಿದ್ದ ಗೊಂಬೆ ಕಣ್ಣು

ಬೆಂಗಳೂರು: ವರ್ತೂರಿನ ಒಂಬತ್ತು ತಿಂಗಳ ಮಗುವೊಂದರ ಶ್ವಾಸಕೋಶ ಸೇರಿದ್ದ ಗೊಂಬೆಯ ಕಣ್ಣನ್ನು ಮಣಿಪಾಲ್ ಆಸ್ಪತ್ರೆಯ ವೈದ್ಯರು ‘ಹೈಬ್ರಿಡ್ ಬ್ರಾಂಕೋಸ್ಕೋಪಿ’ ವಿಧಾನದ ಮೂಲಕ ಹೊರತೆಗೆದಿದ್ದಾರೆ.

ಮಗು ಆಟವಾಡುತ್ತಿರುವ ವೇಳೆ ಗೊಂಬೆಯ ಕಣ್ಣು ಮೂಗಿನ ಮೂಲಕ ಶ್ವಾಸಕೋಶ ಸೇರಿತ್ತು. ಪಾಲಕರು ಇದನ್ನು ಗಮನಿಸಿರಲಿಲ್ಲ. ಬಳಿಕ ಮಗುವಿಗೆ ಉಸಿರಾಟದ ತೊಂದರೆ ಸೇರಿ ವಿವಿಧ ಅನಾರೋಗ್ಯ ಸಮಸ್ಯೆ ಕಾಣಿಸಿಕೊಂಡ ಪರಿಣಾಮ, ವರ್ತೂರಿನಲ್ಲಿರುವ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಿದರು. ವೈದ್ಯಕೀಯ ಪರೀಕ್ಷೆ ನಡೆಸಿ, ಎಕ್ಸ್–ರೆ ಮಾಡಿದಾಗ ಚಿಕ್ಕ ವಸ್ತುವೊಂದು ಶ್ವಾಸಕೋಶ ಸೇರಿರುವುದು ದೃಢಪಟ್ಟಿತು. ಸುಮಾರು 2 ಗಂಟೆಗಳ ಅವಧಿಯಲ್ಲಿ ಶಸ್ತ್ರ ಚಿಕಿತ್ಸೆ ನಡೆಸದೆ ‘ಹೈಬ್ರಿಡ್ ಬ್ರಾಂಕೋಸ್ಕೋಪಿ’ ವಿಧಾನದ ಮೂಲಕ ವಸ್ತುವನ್ನು ತೆಗೆಯಲಾಯಿತು ಎಂದು ವೈದ್ಯರು ತಿಳಿಸಿದರು.



ಶ್ವಾಸಕೋಶ ಸೇರಿದ್ದ ಗೊಂಬೆ ಕಣ್ಣು

‘ಸಾಮಾನ್ಯವಾಗಿ ಇಂತಹ ಪ್ರಕ್ರಿಯೆಗಳು 15ರಿಂದ 30 ನಿಮಿಷಗಳಲ್ಲಿ ಮುಗಿಯುತ್ತವೆ. ಆದರೆ, ಈ ಪ್ರಕರಣದಲ್ಲಿ ವಸ್ತುವಿನ ಸ್ಥಾನ ಮತ್ತು ಮಗುವಿನ ವಯಸ್ಸಿನ ಕಾರಣ ಹೆಚ್ಚು ಸಮಯ ಬೇಕಾಯಿತು. ಚಿಕಿತ್ಸೆಯ ಬಳಿಕ ಮಗು ವೇಗವಾಗಿ ಚೇತರಿಸಿದೆ. 36 ಗಂಟೆಗಳಲ್ಲೇ ಮಗುವನ್ನು ಮನೆಗೆ ಕಳುಹಿಸಲಾಯಿತು’ ಎಂದು ಡಾ. ತೇಜಸ್ವಿ ವಿವರಿಸಿದರು.

ಬಿಬಿಎ: ಜಾಹೀರಾತು ನೀತಿಗೆ ತಿದ್ದುಪಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಜನವರಿಯಿಂದ ಜಾರಿಗೆ ತಂದಿದ್ದ ಜಾಹೀರಾತು ನಿಯಮಗಳಿಗೆ ತಿದ್ದುಪಡಿ ಮಾಡಿ, ಕರಡು ಅಧಿಸೂಚನೆ ಹೊರಡಿಸಲಾಗಿದೆ.

ಗ್ರೇಟರ್ ಬೆಂಗಳೂರು ಪ್ರದೇಶ ಜಾಹೀರಾತು ನಿಯಮಗಳು–2025 ಮತ್ತು ಬಿಬಿಎಂಪಿ ಜಾಹೀರಾತು ಉಪ ವಿಧಿಗಳು–2024ರ ಅನ್ವಯ ಟೆಂಡರ್ ಕರೆಯಲಾಗಿತ್ತು. ಮೂರು ಬಾರಿಯೂ ಬಿಡ್‌ನಲ್ಲಿ ಯಾರೂ ಭಾಗವಹಿಸಿರಲಿಲ್ಲ. ಹೀಗಾಗಿ, ನಿಯಮಗಳಲ್ಲಿ ಬದಲಾವಣೆ ಮಾಡಿ, ಕೆಲವೊಂದು ಅಂಶಗಳನ್ನು ಸೇರಿಸಿ ನಗರಾಭಿವೃದ್ಧಿ ಇಲಾಖೆ ಏಪ್ರಿಲ್ 13ರಂದು ಕರಡು ಅಧಿಸೂಚನೆ ಹೊರಡಿಸಿದೆ. ಆಕ್ಷೇಪಣೆ ಸಲ್ಲಿಸಲು 30 ದಿನ ಅವಕಾಶ ನೀಡಲಾಗಿದೆ.

‘ಜಾಹೀರಾತು ನಿಯಮಗಳಂತೆ, ಟೆಂಡರ್ ನಂತರ ಯಾವುದೇ ಬಿಡ್ ಅನ್ನು ಆಕರ್ಷಿಸಲು ವಿಫಲವಾದರೆ, ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮುಂದಿನ ಟೆಂಡರ್‌ನಲ್ಲಿ ಜಾಹೀರಾತು ಸ್ಥಳದ ಬಾಡಿಗೆಯನ್ನು ಶೇ 40ರಷ್ಟು ಇಳಿಸಬಹುದು. ಬಿಡ್ ಪಡೆದವರು ಒಪ್ಪಂದಕ್ಕೆ ಸಹಿ ಹಾಕಿ 12 ತಿಂಗಳ ನಂತರವೂ ಜಾಹೀರಾತು ಸ್ಥಳದ ಪಾವತಿಯನ್ನು ಪ್ರಾರಂಭಿಸಲು ವಿಫಲವಾದರೆ, ಆ ಭಾಗದ ಟೆಂಡರ್ ಅನ್ನು ರದ್ದು ಮಾಡಲಾಗುತ್ತದೆ. ಬಿಡ್ ವಿಜೇತರು ನೀಡಿರುವ ಬಿಡ್ ಭದ್ರತೆಯನ್ನು ಮರುಪಾವತಿಸಲಾಗುವುದಿಲ್ಲ’ ಎಂಬ ಅಂಶಗಳನ್ನು ಸೇರಿಸಲಾಗಿದೆ.

‘ಪಂಚಾಯತ್ ಚುನಾವಣೆ ನಡೆಸದೇ ಅಪಪ್ರಚಾರ’

ಬೆಂಗಳೂರು: ರಾಜ್ಯ ಸರ್ಕಾರ ಆರು ವರ್ಷಗಳಿಂದ ಪಂಚಾಯತ್ ಚುನಾವಣೆ ನಡೆಸದೇ ಇರುವ ಕಾರಣಕ್ಕೆ 15ನೇ ಹಣಕಾಸು ಯೋಜನೆ ಅಡಿ ಅನುದಾನ ಬಿಡುಗಡೆ ಆಗಿಲ್ಲ. ಆದರೆ, ರಾಜ್ಯ ಸರ್ಕಾರ ತನ್ನ ತಪ್ಪು ಮುಚ್ಚಿಕೊಳ್ಳಲು ಕೇಂದ್ರ ವಿರುದ್ಧ ಅಪಪ್ರಚಾರ ನಡೆಸುತ್ತಿದೆ ಎಂದು ಬಿಜೆಪಿ ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ.

15ನೇ ಹಣಕಾಸು ಅನುದಾನ ಬಿಡುಗಡೆಗೆ ಚುನಾವಣೆ ಮಾಡಬೇಕು ಎಂಬ ಷರತ್ತು ಪೂರೈಸದೇ ಇರುವುದು ಕಾರಣವೇ ಹೊರತು, ತಾರತಮ್ಯ ಕಾರಣವಲ್ಲ. ಆದರೆ ಕಾಂಗ್ರೆಸ್ ನಿರಾಧಾರ ಆರೋಪಗಳನ್ನು ಮಾಡುತ್ತಿದೆ ಎಂದು ಅವರು ದೂರಿದರು.

ಭ್ರಷ್ಟಾಚಾರ ನಿಯಂತ್ರಣ ಮತ್ತು ಪಾರದರ್ಶಕತೆ ತರಲು ಉದ್ಯೋಗ ಖಾತ್ರಿ ಯೋಜನೆಗೆ ಒಂದಿಷ್ಟು ಪರಿಷ್ಕರಣೆ ಮಾಡುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಿದೆ. ಆದರೆ, ಇದರ ಬಗ್ಗೆ ಜನಸಾಮಾನ್ಯರಲ್ಲಿ ತಪ್ಪು ಕಲ್ಪನೆ ಮೂಡುವಂತೆ ರಾಜ್ಯ ಗ್ರಾಮೀಣಾಭಿವೃದ್ಧಿ ಇಲಾಖೆ ವರ್ತಿಸುತ್ತಿರುವುದು ದುರದೃಷ್ಟಕರ ಎಂದು ಅವರು ಹೇಳಿದರು.


ಮನೆ ಮನೆಗೂ ಸಿಹಿ: ‘ಸೋಲೂರು ಸಂಭ್ರಮ’ ಆಚರಣೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ಸೋಲೂರು ಹೋಬಳಿಯನ್ನು ಅಧಿಕೃತವಾಗಿ ನೆಲಮಂಗಲ ತಾಲ್ಲೂಕಿಗೆ ಸೇರಿಸುವುದಾಗಿ ಕೊಟ್ಟಿದ್ದ ಮಾತನ್ನು ಉಳಿಸಿಕೊಂಡಿದ್ದೇನೆ. ಸೋಲೂರು ಹೋಬಳಿಯಲ್ಲಿ 10 ಸಾವಿರದಿಂದ 12 ಸಾವಿರ ಮನೆಗಳಿದ್ದು, ಮನೆ ಮನೆಗೂ ಸಿಹಿ ಹಂಚಿ ‘ಸೋಲೂರು ಸಂಭ್ರಮ’ ಆಚರಿಸಲಾಗುವುದು’ ಎಂದು ಶಾಸಕ ಎನ್.ಶ್ರೀನಿವಾಸ್ ತಿಳಿಸಿದರು.

ಸೋಲೂರು ಹೋಬಳಿಯನ್ನು ಅಧಿಕೃತವಾಗಿ ನೆಲಮಂಗಲ ತಾಲ್ಲೂಕಿಗೆ ಹಸ್ತಾಂತರಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಚುನಾವಣಾ ಪೂರ್ವದಲ್ಲಿ ಜನರ ಸಮಸ್ಯೆಗಳನ್ನು ಆಲಿಸುವ ಸಂದರ್ಭದಲ್ಲಿ ನೆಲಮಂಗಲ ವಿಧಾನಸಭಾ ಕ್ಷೇತ್ರ, ಮಾಗಡಿ ತಾಲ್ಲೂಕಿಗೆ ಸೇರಿದ್ದ ಸೋಲೂರಿನ ಜನತೆ ಆಡಳಿತಾತ್ಮಕವಾಗಿ ಸಮಸ್ಯೆ ಎದುರಿಸುತ್ತಿರುವ ಬಗ್ಗೆ ತಮ್ಮ ಅಳಲು ತೋಡಿಕೊಂಡಿದ್ದರು. ಅಂದು ನಾಗರಿಕರಿಗೆ ನೀಡಿದ್ದ ಮಾತನ್ನು ಇಂದು ಉಳಿಸಿಕೊಳ್ಳಲಾಗಿದೆ’ ಎಂದರು.



ನೆಲಮಂಗಲ ತಾಲ್ಲೂಕಿಗೆ ಸೋಲೂರು ಅಧಿಕೃತ ಸೇರ್ಪಡೆ ಕಾರ್ಯಕ್ರಮದಲ್ಲಿ ರಾಮಲಿಂಗಾರೆಡ್ಡಿ, ಕೆ.ಎಚ್ ಮುನಿಯಪ್ಪ, ಎನ್ ಶ್ರೀನಿವಾಸ್ ದುರ್ಗಾ, ಅನುರಾಧಾ, ಮಲ್ಲೇಶ್ ಹನುಮಂತರಾಜು, ಎನ್ ಗಣೇಶ್ ಉಪಸ್ಥಿತರಿದ್ದರು

‘ಸಚಿವ ರಾಮಲಿಂಗಾರೆಡ್ಡಿ ಅವರು, ಶಾಸಕ ಎನ್. ಶ್ರೀನಿವಾಸ್ ಅವರಿಂದ ಪ್ರಸ್ತಾವ ಸ್ವೀಕರಿಸಿ ಸಚಿವ ಸಂಪುಟದಲ್ಲಿ ಮಂಡಿಸಿ ಸೋಲೂರನ್ನು ನೆಲಮಂಗಲಕ್ಕೆ ಸೇರಿಸಿದ್ದಾರೆ’ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ರಾಮಲಿಂಗಾರೆಡ್ಡಿ ಮಾತನಾಡಿ, ‘ಸೋಲೂರಿನಲ್ಲಿ ಜನಸ್ಪಂದನ ಕಾರ್ಯಕ್ರಮದಲ್ಲಿ ಜನತೆ ಸೋಲೂರನ್ನು ನೆಲಮಂಗಲಕ್ಕೆ ಸೇರಿಸುವ ಬಗ್ಗೆ ಕೇಳಿಕೊಂಡಿದ್ದರು. ಅದರಂತೆ ಶಾಸಕರು ವೇಗವಾಗಿ ಎಲ್ಲ ಇಲಾಖೆಗಳಲ್ಲೂ ಪ್ರಕ್ರಿಯೆ ನಡೆಯುವಂತೆ ನೋಡಿಕೊಂಡು, ಕಾರ್ಯಸಾಧುವಾಗಿಸಿಕೊಂಡಿದ್ದಾರೆ. ನೆಲಮಂಗಲದಲ್ಲಿ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಾಣವಾಗುತ್ತಿದೆ, ದಾಬಸ್‌ಪೇಟೆಯಲ್ಲೂ ಮುಕ್ಕಾಲು ಎಕರೆ ಜಾಗ ಗುರುತಿಸಿದ್ದು, ಶೀಘ್ರ ಬಸ್ ನಿಲ್ದಾಣ ಕಾಮಗಾರಿ ಪ್ರಾರಂಭ ಆಗಲಿದೆ. ನಮ್ಮ ಮೆಟ್ರೊ ಸಹ ಬರಲಿದೆ’ ಎಂದರು.

ಜಿಲ್ಲಾಧಿಕಾರಿ ಅನುರಾಧಾ ಮಾತನಾಡಿ, ‘ಸೋಲೂರು ಹೋಬಳಿಯಲ್ಲಿ 62 ಸಾವಿರ ಜನಸಂಖ್ಯೆ ಇದ್ದು, 68 ಕಂದಾಯ ಗ್ರಾಮ, 152 ಗ್ರಾಮಗಳು ಇದ್ದು, 15 ಸಾವಿರ ರೈತರಿದ್ದಾರೆ. ಒಂದು ವಾರದಲ್ಲಿ ಪಹಣಿ ಸೇರಿದಂತೆ ಎಲ್ಲ ದಾಖಲೆಗಳು ನೆಲಮಂಗಲ ತಾಲ್ಲೂಕಿನ ಹೆಸರಿನಲ್ಲಿ ಬರಲಿವೆ, ಡಿಜಿಟಲೀಕರಣವಾಗಲಿವೆ’ ಎಂದರು.

ಉಪ ವಿಭಾಗಾಧಿಕಾರಿ ದುರ್ಗಾ, ತಹಶೀಲ್ದಾರ್ ಮಲ್ಲೇಶ್, ನಗರಸಭೆ ಅಧ್ಯಕ್ಷ ಗಣೇಶ್, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಂ.ಕೆ.ನಾಗರಾಜು, ಮಾಜಿ ಅಧ್ಯಕ್ಷ ಎಂ.ನಾರಾಯಣಗೌಡ, ಟಿಎಪಿಸಿಎಂಎಸ್ ಅಧ್ಯಕ್ಷ ಹನುಮಂತರಾಜು, ಮಾಜಿ ಅಧ್ಯಕ್ಷ ನರಸಿಂಹಮೂರ್ತಿ ಉಪಸ್ಥಿತರಿದ್ದರು.

16ರಿಂದ ಸುಚಿತ್ರಾ ಹಿರಣ್ಣಯ್ಯ ನಾಟಕೋತ್ಸವ



ಮಾಸ್ಟರ್ ಹಿರಣ್ಣಯ್ಯ

ಬೆಂಗಳೂರು: ರಂಗಕರ್ಮಿ, ನಟ ಮಾಸ್ಟರ್ ಹಿರಣ್ಣಯ್ಯ ಅವರ ಸ್ಮರಣಾರ್ಥ ಬನಶಂಕರಿಯಲ್ಲಿರುವ ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿಯು ತನ್ನ ಕೇಂದ್ರದಲ್ಲಿ ಇದೇ 16ರಿಂದ 19ರವರೆಗೆ ‘ಸುಚಿತ್ರಾ ಹಿರಣ್ಣಯ್ಯ ನಾಟಕೋತ್ಸವ’ ಹಮ್ಮಿಕೊಂಡಿದೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಕಾಡೆಮಿ ಅಧ್ಯಕ್ಷ ಆನಂದ ಸಭಾಪತಿ, ‘ಮಾಸ್ಟರ್ ಹಿರಣ್ಣಯ್ಯ ಅವರ ಕುಟುಂಬದವರ ಬೆಂಬಲದಿಂದ ಈ ನಾಟಕೋತ್ಸವ ಮಾಡಲಾಗುತ್ತಿದೆ. ನಾಟಕಗಳ ಪ್ರದರ್ಶನದ ಜತೆಗೆ, ರಂಗಭೂಮಿಗೆ ಸಂಬಂಧಿಸಿದ ಕಾರ್ಯಾಗಾರ, ಮಾಸ್ಟರ್ ಕ್ಲಾಸ್, ಜನಪದ ನೃತ್ಯವನ್ನು ಈ ನಾಟಕೋತ್ಸವ ಒಳಗೊಂಡಿದೆ. ಹಿರಣ್ಣಯ್ಯ ಅವರು ಕನ್ನಡ ರಂಗಭೂಮಿಗೆ ಅಪಾರ ಕೊಡುಗೆ ನೀಡಿದ್ದು, ಅವರು ಇಂದಿನ ತಲೆಮಾರಿಗೆ ಸ್ಫೂರ್ತಿಯಾಗಿದ್ದಾರೆ. ಈ ಉತ್ಸವವು ರಂಗಭೂಮಿ, ಸಂಪ್ರದಾಯ ಮತ್ತು ಸಮಕಾಲೀನ ಕಲಾತ್ಮಕ ಅಭಿವ್ಯಕ್ತಿಗಳ ಅದ್ಭುತ ಸಂಗಮವಾಗಲಿದೆ. ಯುವ ಪ್ರತಿಭೆಗಳು, ಅನುಭವಿ ಕಲಾವಿದರು ಹಾಗೂ ರಂಗಾಸಕ್ತರನ್ನು ಒಂದೇ ವೇದಿಕೆಯಡಿ ತರುವ ಉದ್ದೇಶ ಹೊಂದಿದೆ’ ಎಂದರು.

‘ನಾಲ್ಕೂ ದಿನ ಬೆಳಿಗ್ಗೆ 10 ಗಂಟೆಯಿಂದ ಕಾರ್ಯಾಗಾರ ಪ್ರಾರಂಭವಾಗಲಿದೆ. ರಂಗ ಕಲೆಯಲ್ಲಿ ಆಸಕ್ತಿ ಇರುವವರು ಹೆಸರು ನೋಂದಾಯಿಸಿಕೊಂಡು ಪಾಲ್ಗೊಳ್ಳಬಹುದಾಗಿದೆ. ಸಂಜೆ 4.30ರಿಂದ ಮಾಸ್ಟರ್ ಕ್ಲಾಸ್‌ಗಳು ನಡೆಯಲಿದ್ದು, ಸಿಂಧು ಶ್ರೀನಿವಾಸಮೂರ್ತಿ, ಬಾಬು ಹಿರಣ್ಣಯ್ಯ, ಪವನ್ ಕುಮಾರ್, ಬಾಲಾಜಿ ಮನೋಹರ್ ಭಾಗವಹಿಸುತ್ತಾರೆ. ಉತ್ಸವದ ಮೊದಲ ದಿನ ಸಂಜೆ 6.15ರಿಂದ ಜನಪದ ನೃತ್ಯ ಹಮ್ಮಿಕೊಳ್ಳಲಾಗಿದ್ದು, ಉಳಿದ ದಿನ ಬೀದಿ ನಾಟಕಗಳು ನಡೆಯಲಿವೆ’ ಎಂದು ಹೇಳಿದರು.

‘ಈ ಉತ್ಸವದಲ್ಲಿ ಕಾಲೇಜು ವಿದ್ಯಾರ್ಥಿಗಳು ನಾಟಕ ಪ್ರದರ್ಶಿಸಲಿದ್ದಾರೆ. ದಕ್ಷತರಂಗ ತಂಡದಿಂದ ‘ಜ್ಞಾನಪರ್ವ’, ರಂಗ ಚೈತನ್ಯ ತಂಡದಿಂದ ‘ಸೇವಂತಿ ಪ್ರಸಂಗ’, ರಂಗ ಸಾಂಗತ್ಯ ತಂಡದಿಂದ ‘ಅಭಿಯಾನ’ ಹಾಗೂ ಚಿಗುರು ಕಲಾ ತಂಡದಿಂದ ‘ಮಹೋರ್ಣ’ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಸಂಜೆ 7 ಗಂಟೆಯಿಂದ ನಾಟಕಗಳ ಪ್ರದರ್ಶನ ನಡೆಯಲಿದ್ದು, ಟಿಕೆಟ್‌ಗಳು ಸ್ಥಳದಲ್ಲಿಯೇ ದೊರೆಯಲಿವೆ. ದೂರವಾಣಿ ಸಂಖ್ಯೆಗೆ ಕರೆ ಮಾಡಿಯೂ ಪಡೆಯಬಹುದು’ ಎಂದು ವಿವರಿಸಿದರು.

ಅಕಾಡೆಮಿಯ ಟ್ರಸ್ಟಿಗಳಾದ ಕೃಷ್ಣ ಹೆಬ್ಬಾಳೆ, ಶಶಿಧರ್, ಕೃಷ್ಣನ್ ರಂಗರಾಜು, ಖಜಾಂಚಿ ಅಭಿಷೇಕ್ ಅಯ್ಯಂಗಾರ ಹಾಗೂ ಮಾಸ್ಟರ್ ಹಿರಣ್ಣಯ್ಯ ಅವರ ಪುತ್ರರೂ ಆಗಿರುವ ಕಲಾವಿದ ಬಾಬು ಹಿರಣ್ಣಯ್ಯ ಉಪಸ್ಥಿತರಿದ್ದರು.

ಸಂಪರ್ಕಕ್ಕೆ: 88842 01072 ಅಥವಾ 95353 22196

ಅಂತರರಾಷ್ಟ್ರೀಯ ಮಟ್ಟದ ಟೌನ್‌ಶಿಪ್ ನಿರ್ಮಾಣ

ಬಿ.ಎಂ.ಕಾವಲ್ ಬಳಿ 500 ಎಕರೆ ಭೂ ಸ್ವಾಧೀನಕ್ಕೆ ಚಾಲನೆ

• ಎ.ಎಂ.ಸುರೇಶ

ಬೆಂಗಳೂರು: ಕೆಂಗೇರಿ ಹೋಬಳಿಯ ಬಿ.ಎಂ. ಕಾವಲ್ ಸಮೀಪದ 500 ಎಕರೆ ಪ್ರದೇಶದಲ್ಲಿ ಅಂತರರಾಷ್ಟ್ರೀಯ ಮಟ್ಟದ ಟೌನ್‌ಶಿಪ್ ನಿರ್ಮಾಣ ಮಾಡಲು ಮುಂದಾಗಿರುವ ಕರ್ನಾಟಕ ಗೃಹ ಮಂಡಳಿ, ಭೂ ಸ್ವಾಧೀನ ಪ್ರಕ್ರಿಯೆಗೆ ಚಾಲನೆ ನೀಡಿದೆ.

ವಾಣಿಜ್ಯ ಕೇಂದ್ರ, ಅತಿ ಎತ್ತರದ ವಸತಿ ಸಮುಚ್ಚಯ, ಐ.ಟಿ ಕೇಂದ್ರ, ಮನೋರಂಜನಾ ವಲಯ, ಕ್ಲಬ್‌ಹೌಸ್, ಈಜುಕೊಳ ಹಾಗೂ ಹೊಸ ಆವಿಷ್ಕಾರಗಳನ್ನು ಒಳಗೊಂಡ ಟೌನ್‌ಶಿಪ್ ಹಾಗೂ ವಸತಿ ಯೋಜನೆ ಇದಾಗಿದೆ. ಈಗಾಗಲೇ ರಾಜ್ಯ ಸರ್ಕಾರದ ಕಡೆಯಿಂದ ಅನುಮೋದನೆ ದೊರೆತಿದೆ ಎಂದು ಗೃಹಮಂಡಳಿಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಮುಖ್ಯಾಂಶಗಳು
- 50:50 ಪಾಲುದಾರಿಕೆ ಅಡಿ ಭೂ ಸ್ವಾಧೀನ
- ರೈತರ ಜಮೀನಿನ ದಾಖಲೆಗಳ ಪರಿಶೀಲನೆ ಆರಂಭ
- ರೈತರಿಗೆ ಪ್ರತಿ ಎಕರೆಗೆ ₹30 ಲಕ್ಷ ಮುಂಗಡ ಹಣ

ಈ ಯೋಜನೆಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ವಾಸ್ತುಶಿಲ್ಪಿಗಳನ್ನು ನೇಮಕ ಮಾಡಿದ್ದು, ನಕ್ಷೆ ಹಾಗೂ ಡಿಪಿಆರ್ ತಯಾರಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಎರಡು ತಿಂಗಳಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳುವ ಸಾಧ್ಯತೆ ಇದೆ ಎಂದು ಅವರು ವಿವರಿಸಿದರು.


ಎಐ ಚಿತ್ರ

ಕೆಂಗೇರಿ ಹೋಬಳಿಯ ಬಿ.ಎಂ.ಕಾವಲ್, ಚಿನ್ನಕುರುಚಿ, ವಸಂತನಹಳ್ಳಿ, ದೇವಗೆರೆ, ಕೆ.ಗೊಲ್ಲಹಳ್ಳಿ ಹಾಗೂ ಬಿಡದಿ ಹೋಬಳಿಯ ಕೋಡಿಯಾಲ, ಕರೇನಹಳ್ಳಿ ಗ್ರಾಮಗಳ 500 ಎಕರೆ ಜಮೀನನ್ನು 50:50 ಪಾಲುದಾರಿಕೆಯಡಿ ಪಡೆದು ಟೌನ್‌ಶಿಪ್ ನಿರ್ಮಾಣ ಮಾಡಲಾಗುತ್ತದೆ. ಒಪ್ಪಂದದಂತೆ ಅಭಿವೃದ್ಧಿಪಡಿಸಿದ ಜಾಗದಲ್ಲಿ ರೈತರಿಗೆ ಅವರ ಪಾಲಿನ ಶೇ 50ರಷ್ಟು ನಿವೇಶನಗಳನ್ನು ನೀಡಲಾಗುತ್ತದೆ.

ವಸತಿ ಯೋಜನೆಗೆ ಭೂಮಿ ನೀಡುವಂತೆ ಉತ್ತೇಜಿಸಲು ಪ್ರತಿ ಎಕರೆಗೆ 30 ಲಕ್ಷ ಹಣವನ್ನು ರೈತರಿಗೆ ಮುಂಗಡವಾಗಿ ನೀಡಲಾಗುತ್ತದೆ. ಜಮೀನಿಗೆ ಸಂಬಂಧಿಸಿದಂತೆ ರೈತರಿಂದ ಪಡೆದಿರುವ ದಾಖಲೆಗಳನ್ನು ಪರಿಶೀಲಿಸುತ್ತಿದ್ದು, ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ರೈತರ ಖಾತೆಗಳಿಗೆ ಹಣ ವರ್ಗಾವಣೆ ಮಾಡಲಾಗುತ್ತದೆ ಎಂದು ಮಂಡಳಿಯ ಮೂಲಗಳು ತಿಳಿಸಿವೆ.

ಈ ಯೋಜನೆಗೆ ಒಟ್ಟು ₹1,066.50 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಇದನ್ನು ಸಂಪೂರ್ಣವಾಗಿ ಗೃಹ ಮಂಡಳಿಯೇ ಭರಿಸಲಿದೆ. ಸರ್ಕಾರದಿಂದ ಯಾವುದೇ ರೀತಿಯ ಆರ್ಥಿಕ ನೆರವನ್ನು ನಿರೀಕ್ಷೆ ಮಾಡುವಂತಿಲ್ಲ ಎಂಬ ಷರತ್ತು ವಿಧಿಸಿ ಅನುಮೋದನೆ ನೀಡಲಾಗಿದೆ. ಈ ಯೋಜನೆಗೆ ಹೆಚ್ಚುವರಿ ಜಮೀನು ಲಭ್ಯವಾದರೆ, ವಿಸ್ತೀರ್ಣ ಮತ್ತು ಯೋಜನಾ ವೆಚ್ಚ ಹೆಚ್ಚಾದರೆ, ಅದಕ್ಕೆ ಸಂಪುಟದ ಅನುಮೋದನೆ ಪಡೆಯಬೇಕು ಎಂದು ಷರತ್ತು ವಿಧಿಸಲಾಗಿದೆ.

'ಗೃಹಮಂಡಳಿಯಿಂದ ನಿರ್ಮಿಸುತ್ತಿರುವ ಮೊದಲ ಟೌನ್‌ಶಿಪ್ ಇದು. ನಿರ್ಮಾಣ ಪ್ರಕ್ರಿಯೆ ಪೂರ್ಣಗೊಂಡ ನಂತರ ಸಾರ್ವಜನಿಕರಿಗೆ ನಿವೇಶನ, ಪ್ಲ್ಯಾಟ್‌ಗಳನ್ನು ಹಂಚಿಕೆ ಮಾಡಲಾಗುತ್ತದೆ. ಯೋಜನೆ ಪ್ರಾಥಮಿಕ ಹಂತದಲ್ಲಿ ಇರುವುದರಿಂದ ಇನ್ನೂ ದರ ನಿಗದಿ ಮಾಡಿಲ್ಲ. ಎಲ್ಲ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ದರ ನಿಗದಿ ಮಾಡಿ, ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ' ಎಂದು ಅಧಿಕಾರಿಯೊಬ್ಬರು ವಿವರಿಸಿದರು.

2 ಬಿಎಚ್‌ಕೆ, 3 ಬಿಎಚ್‌ಕೆ ಫ್ಲ್ಯಾಟ್‌ಗಳನ್ನು ಸಾರ್ವಜನಿಕರಿಗಾಗಿ ನಿರ್ಮಿಸಲಾಗುತ್ತದೆ. ಇದಲ್ಲದೆ, ಐ.ಟಿ ಕೇಂದ್ರ, ವಾಣಿಜ್ಯ ಕೇಂದ್ರವನ್ನು ನಿರ್ಮಿಸಲಾಗುತ್ತದೆ. ಕಂಪನಿಗಳು ಇಲ್ಲೇ ಕಚೇರಿಗಳನ್ನು ಆರಂಭಿಸಬಹುದು. ಉದ್ಯೋಗಿಗಳು ಫ್ಲ್ಯಾಟ್‌ಗಳನ್ನು ಖರೀದಿಸಿ ವಾಸ ಮಾಡಬಹುದು. ಕಚೇರಿ, ಮನೆ ಒಂದೇ ಕಡೆ ಇರುವುದರಿಂದ ಉದ್ಯೋಗಿಗಳಿಗೆ ಅನುಕೂಲವಾಗಲಿದೆ. ಅಲ್ಲದೆ ಅವರಿಗೆ ಬೇಕಾದ ಕ್ಲಬ್‌ಹೌಸ್, ಈಜುಕೊಳ ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುತ್ತದೆ.

ಐ.ಟಿ ಕೇಂದ್ರ, ವಾಣಿಜ್ಯ ಕೇಂದ್ರ ಇತ್ಯಾದಿ ಗೃಹಮಂಡಳಿಯ ಅಧೀನದಲ್ಲೇ ಇರುತ್ತವೆ. ಇವುಗಳಿಂದ ಮಂಡಳಿಗೆ ನಿಗದಿತ ಆದಾಯ ಬರಲಿದೆ ಎಂದು ನಿರೀಕ್ಷಿಸಲಾಗಿದೆ. ಟೌನ್‌ಶಿಪ್‌ಗೆ ಎಷ್ಟರ ಮಟ್ಟಿಗೆ ಬೇಡಿಕೆ ಇದೆ ಹಾಗೂ ಇದರ ಸಾಧಕ–ಬಾಧಕಗಳು ಏನು ಎಂಬ ಬಗ್ಗೆ ಚರ್ಚೆ ನಡೆಯುತ್ತಿದೆ. ಆದಷ್ಟು ಬೇಗ ಇದಕ್ಕೆ ಅಂತಿಮ ರೂಪ ನೀಡಲಾಗುವುದು ಎಂದು ತಿಳಿಸಿದರು.

ಪೊಲೀಸ್‌ಗೆ ಧಮ್ಕಿ: ಸವಾರನ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಕಮುಖ ಸಂಚಾರ ರಸ್ತೆಯ ವಿರುದ್ಧ ದಿಕ್ಕಿನಲ್ಲಿ ಬಂದಿದ್ದನ್ನು ಪ್ರಶ್ನಿಸಿದ ಸಂಚಾರ ಪೊಲೀಸರಿಗೆ ಧಮ್ಕಿ ಹಾಕಿದ ಬೈಕ್ ಸವಾರನ ವಿರುದ್ಧ ಜಯನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಬ್ದುಲ್ ಮನನ್ ಖಾನ್(22) ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಬೈಕ್ ಜಪ್ತಿ ಮಾಡಲಾಗಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ಆರೋಪಿ ಅಬ್ದುಲ್ ಮನನ್ ಖಾನ್, ಏಪ್ರಿಲ್ 10ರಂದು ತನ್ನ ತಂದೆ ಸೋಹೆಬ್ ಅಹಮ್ಮದ್ ಖಾನ್ ಅವರನ್ನು ಕೂರಿಸಿಕೊಂಡು ಹೆಲ್ಮೆಟ್ ಧರಿಸದೆ ಜಯನಗರ 4ನೇ ಬ್ಲಾಕ್‌ನ 11ನೇ ಮುಖ್ಯರಸ್ತೆಯಲ್ಲಿ ಪೈ ಜಂಕ್ಷನ್ ಕಡೆಯ ಏಕಮುಖ ಸಂಚಾರ ರಸ್ತೆಯಲ್ಲಿ ಬರುತ್ತಿದ್ದರು. ಕರ್ತವ್ಯದಲ್ಲಿದ್ದ ಹೆಡ್‌ಕಾನ್‌ಸ್ಟೆಬಲ್ ರವಿಕುಮಾರ್ ಬೈಕ್ ತಡೆದು ಪ್ರಶ್ನಿಸಿದ್ದಾರೆ. ಆರೋಪಿ, ಏರು ಧ್ವನಿಯಲ್ಲಿ 'ನೀನು ಏನು ಮಾಡಿಕೊಳ್ಳುತ್ತಿಯೋ? ಮಾಡಿಕೋ? ನಾನು ಇದೇ ರೀತಿ ಬರುವುದು, ನಿನಗೆ ಯಾರು ನನ್ನನ್ನು ತಡೆಯಲು ಅಧಿಕಾರ ಕೊಟ್ಟಿದ್ದು?' ಎಂದು ಜೋರಾಗಿ ಮಾತನಾಡಿ, ಅನುಚಿತವಾಗಿ ವರ್ತಿಸಿದ್ದಾನೆ ಎಂದು ಪೊಲೀಸರು ತಿಳಿಸಿದರು.

ವಾಹನದ ವಿರುದ್ಧ ದಾಖಲಾಗಿದ್ದ ಸಂಚಾರ ನಿಯಮ ಉಲ್ಲಂಘನೆಗಳ ಕುರಿತು ದಾಖಲೆ ಸಮೇತ ನ್ಯಾಯಾಲಯಕ್ಕೆ ಮಾಹಿತಿ ನೀಡಲಾಗಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ವ್ಯಕ್ತಿ ಮೇಲೆ ಹಲ್ಲೆ: ಇಬ್ಬರ ಬಂಧನ

ಬೆಂಗಳೂರು: ವೇಗವಾಗಿ ಸ್ಕೂಟರ್ ಚಾಲನೆ ಮಾಡಿದ್ದನ್ನು ಪ್ರಶ್ನಿಸಿದ ವ್ಯಕ್ತಿಯ ಮೇಲೆ ಹಲ್ಲೆ ನಡೆಸಿ, ಬೆದರಿಕೆ ಹಾಕಿದ ಆರೋಪದ ಮೇಲೆ ಕೊಡಿಗೇಹಳ್ಳಿ ಠಾಣೆ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ.

ಕೊಡಿಗೇಹಳ್ಳಿ ನಿವಾಸಿಗಳಾದ ಮಣಿಕಂಠ (23) ಮತ್ತು ಅಭಿಷೇಕ್ (21) ಬಂಧಿತರು. ಆರೋಪಿಗಳು ಏಪ್ರಿಲ್ 8ರಂದು ಅಪಾರ್ಟ್‌ಮೆಂಟ್ ನಿವಾಸಿ ಅಜಿತ್ ಸಿಂಗ್ ಎಂಬುವರ ಮೇಲೆ ಹಲ್ಲೆ ನಡೆಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಅಜಿತ್ ಸಿಂಗ್ ಅವರು ತಮ್ಮ ಅಪಾರ್ಟ್‌ಮೆಂಟ್ ಬೇಸ್‌ಮೆಂಟ್‌ನಿಂದ ರಸ್ತೆಗೆ ಬಂದಿದ್ದು, ಈ ವೇಳೆ ಆರೋಪಿಗಳು ವೇಗವಾಗಿ ಸ್ಕೂಟರ್‌ನಲ್ಲಿ ಬಂದಿದ್ದಾರೆ. ಅದಕ್ಕೆ ಅಜಿತ್ ಅವರು, 'ವೇಗವಾಗಿ ಏಕೆ ಹೋಗುತ್ತಿದ್ದೀರಾ' ಎಂದು ಪ್ರಶ್ನಿಸಿದ್ದಾರೆ.

ಇದರಿಂದ ಕೋಪಗೊಂಡ ಆರೋಪಿಗಳು ಫೋನ್ ಮಾಡಿ, ತಮ್ಮ ಬಡಾವಣೆಯ ಹುಡುಗರನ್ನು ಕರೆಸಿಕೊಂಡಿದ್ದಾರೆ. ಬಳಿಕ ಅವರ ಮನೆಗೆ ನುಗ್ಗಿ ಹಲ್ಲೆ ಮಾಡಿ, ಧಮ್ಕಿ ಹಾಕಿದ್ದಾರೆ. ಬಳಿಕ ಸ್ಥಳಕ್ಕೆ ಬಂದ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ.

ಮದ್ಯ ಸೇವಿಸಿ ಚಾಲನೆ: 747 ಪ್ರಕರಣ ದಾಖಲು

ಬೆಂಗಳೂರು: ಸಂಚಾರಿ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ, ಮದ್ಯ ಸೇವಿಸಿ ವಾಹನ ಚಲಾಯಿಸುತ್ತಿದ್ದ ಚಾಲಕರ ವಿರುದ್ಧ 747 ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ.

ರಸ್ತೆ ಸುರಕ್ಷತೆಗಾಗಿ ಏಪ್ರಿಲ್ 6ರಿಂದ 12ರವರೆಗೆ ವಿಶೇಷ ಕಾರ್ಯಾಚರಣೆಯನ್ನು 53 ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿತ್ತು. ಈ ಸಂದರ್ಭದಲ್ಲಿ 5091 ವಿವಿಧ ಮಾದರಿಯ ವಾಹನಗಳನ್ನು ಪರಿಶೀಲಿಸಿ, ಮದ್ಯ ಸೇವಿಸಿ ಚಾಲನೆ ಮಾಡಿದ ಸವಾರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅದೇ ರೀತಿ ಅತಿ ವೇಗವಾಗಿ ವಾಹನ ಚಲಾಯಿಸಿದವರ ವಿರುದ್ಧ 232 ಪ್ರಕರಣಗಳನ್ನು ದಾಖಲಿಸಿಕೊಂಡು, ₹2.33 ಲಕ್ಷ ದಂಡ ಸಂಗ್ರಹಿಸಲಾಗಿದೆ.

ಈ ಕಾರ್ಯಾಚರಣೆಯನ್ನು ಮುಂದಿನ ದಿನಗಳಲ್ಲೂ ಹಮ್ಮಿಕೊಳ್ಳಲಾಗುವುದು ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ.

ನಾಲ್ವರು ಡ್ರಗ್ ಪೆಡ್ಲರ್‌ಗಳ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ₹9.13 ಕೋಟಿ ಮೌಲ್ಯದ 26.15 ಕೆ.ಜಿ. ಹೈಡ್ರೋಪೋನಿಕ್ ಗಾಂಜಾವನ್ನು ಕಸ್ಟಮ್ಸ್ ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

ಬ್ಯಾಂಕಾಕ್‌ನಿಂದ ಬೆಂಗಳೂರಿಗೆ ಪ್ರತ್ಯೇಕ ವಿಮಾನಗಳಲ್ಲಿ ಬಂದಿಳಿದ ನಾಲ್ವರು ಪ್ರಯಾಣಿಕರ ಬ್ಯಾಗ್‌ಗಳ ತಪಾಸಣೆ ನಡೆಸಿದಾಗ, ಕೋಟ್ಯಂತರ ರೂಪಾಯಿ ಮೌಲ್ಯದ ಗಾಂಜಾ ಪತ್ತೆಯಾಗಿದೆ.

ನಾಲ್ವರು ಪೆಡ್ಲರ್‌ಗಳನ್ನು ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿ ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಕೆಲವು ದಿನಗಳ ಹಿಂದೆ ₹5.79 ಕೋಟಿ ಮೌಲ್ಯದ ಮಾದಕ ವಸ್ತುಗಳು ಪತ್ತೆಯಾಗಿದ್ದವು. ಅದರ ಬೆನ್ನಲ್ಲೇ ಈಗ ಮತ್ತೆ ಅಪಾರ ಪ್ರಮಾಣದ ಡ್ರಗ್ಸ್ ಅನ್ನು ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ಬ್ಯಾಂಕಾಕ್‌ನಲ್ಲಿ ಕಡಿಮೆ ಬೆಲೆಗೆ ದೊರೆಯುವ ಡ್ರಗ್ಸ್ ಅನ್ನು ಕಳ್ಳಸಾಗಣೆ ಮೂಲಕ ನಗರಕ್ಕೆ ಪೂರೈಕೆ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಕಸ್ಟಮ್ಸ್ ಅಧಿಕಾರಿಗಳು ಮಾರ್ಚ್ ತಿಂಗಳಲ್ಲಿ ವಶಕ್ಕೆ ಪಡೆದಿದ್ದ 524.31 ಕೆ.ಜಿ ಕೆಟಮೈನ್, 4.59 ಕೆ.ಜಿ. ಗಾಂಜಾ ಹಾಗೂ 287.5 ಕೆ.ಜಿ. ಹೈಡ್ರೋಪೋನಿಕ್, 1.17 ಕೆ.ಜಿ ಕೊಕೇನ್ ಅನ್ನು ನಾಶಪಡಿಸಿದ್ದರು.

ಪತ್ನಿ ನೋಡಿ ಬೊಗಳಿದ ನಾಯಿಗೆ ಥಳಿಸಿದ ಪತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಪಕ್ಕದ ಮನೆಯ ನಾಯಿ ತನ್ನ ಪತ್ನಿಯನ್ನು ನೋಡಿ ಬೊಗಳಿದೆ ಎಂಬ ಕಾರಣಕ್ಕೆ ಆಕ್ರೋಶಗೊಂಡ ಪತಿ, ನಾಯಿಗೆ ದೊಣ್ಣೆಯಿಂದ ಹೊಡೆದು ಸಾಯಿಸಲು ಯತ್ನಿಸಿದ ಘಟನೆ ಮಾದನಾಯಕನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಅಂಜನಪ್ಪ ಎಂಬುವರು ನೀಡಿದ ದೂರಿನ ಮೇಲೆ ಗೋಪಿ ಎಂಬುವರ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಂಜನಪ್ಪ ಅವರು ಸ್ಕೂಬಿ ಹೆಸರಿನ ನಾಯಿ ಸಾಕಿದ್ದಾರೆ. ಏಪ್ರಿಲ್ 9ರ ರಾತ್ರಿ ಪಕ್ಕದ ಮನೆಯ ಮಹಿಳೆಯನ್ನು ನೋಡಿ ಬೊಗಳಿದೆ. ಅದರಿಂದ ಕೋಪಗೊಂಡ ಮಹಿಳೆಯ ಪತಿ ಗೋಪಿ, ಅವರ ಮನೆಗೆ ತೆರಳಿ ಗೇಟಿನಲ್ಲಿ ಕಟ್ಟಿದ್ದ ನಾಯಿಗೆ ದೊಣ್ಣೆಯಿಂದ ಹೊಡೆದಿದ್ದಾರೆ. ನಾಯಿಗೆ ಬಾಯಿ ಮತ್ತು ಮೂಗಿನಲ್ಲಿ ರಕ್ತ ಬಂದಿದ್ದು, ಅದು ಪ್ರಜ್ಞೆ ತಪ್ಪಿತ್ತು.

ಕೂಡಲೇ ಮಾಲೀಕರು ಅದನ್ನು ಪೆಟ್ ಕ್ಲಿನಿಕ್‌ಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದು, ಚೇತರಿಸಿಕೊಳ್ಳುತ್ತಿದೆ. ನಾಯಿಗೆ ಹೊಡೆದಿರುವ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಜಾಲತಾಣದಲ್ಲಿ ಹರಿದಾಡುತ್ತಿದೆ.

ನಾಯಿ ಮಾಲೀಕ ಈ ಸಂಬಂಧ ನೀಡಿದ ದೂರಿನ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಿದ್ದಾರೆ.

ಬೆಕ್ಕುಗಳ ತುಂಟಾಟ: ಮಾಲೀಕರ ಕಿತ್ತಾಟ

ಬೆಂಗಳೂರು: ಬೆಕ್ಕಿನ ಮರಿಗಳ ವಿಚಾರವಾಗಿ ಎರಡು ಕುಟುಂಬಗಳ ನಡುವೆ ಜಗಳ ನಡೆದಿದ್ದು, ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದ್ದಾರೆ.

ಶೇಷಾದ್ರಿಪುರದ ಜಯಭೀಮನಗರದಲ್ಲಿರುವ ಅಕ್ಕ-ಪಕ್ಕದ ಮನೆಗಳ ಮಾಲೀಕರು ಎರಡು ಬೆಕ್ಕುಗಳನ್ನು ಸಾಕಿದ್ದಾರೆ. ಹೆಣ್ಣು ಬೆಕ್ಕು ಭಾನುವಾರ ನಾಲ್ಕು ಮರಿಗಳಿಗೆ ಜನ್ಮ ನೀಡಿದೆ. ಮರಿಗಳು ಹುಟ್ಟಿದ ಕೂಡಲೇ ಕೋಪಗೊಂಡ ಹೆಣ್ಣು ಬೆಕ್ಕಿನ ಮಾಲೀಕರು, ಗಂಡು ಬೆಕ್ಕಿನ ಮಾಲೀಕರ ಜತೆ ವಾಗ್ವಾದ ಮಾಡಿದ್ದಾರೆ.

'ನಮ್ಮ ಬೆಕ್ಕು ಮರಿಗಳನ್ನು ಹಾಕಿರುವುದಕ್ಕೆ ನಿಮ್ಮ ಬೆಕ್ಕೇ ಕಾರಣ. ಹಾಗಾಗಿ ನೀವೇ ಸಾಕಿ' ಎಂದು ಮರಿಗಳನ್ನು ತಂದು ಪಕ್ಕದ ಮನೆಗೆ ಬಿಟ್ಟಿದ್ದಾರೆ. ಇದೇ ವಿಚಾರವಾಗಿ ಶುರುವಾದ ಜಗಳ ವಿಕೋಪಕ್ಕೆ ಹೋಗಿದ್ದು, ನಡು ರಸ್ತೆಯಲ್ಲಿ ಪರಸ್ಪರ ಕೈ-ಕೈ ಮಿಲಾಯಿಸುವ ಹಂತಕ್ಕೆ ತಲುಪಿದೆ. ಅಲ್ಲದೇ ಹೆಣ್ಣು ಬೆಕ್ಕಿನ ಮನೆಯವರು, 'ನಿಮ್ಮ ಮಕ್ಕಳಿಗೆ ಆ್ಯಸಿಡ್ ಹಾಕುತ್ತೇವೆ' ಎಂದು ಹೆದರಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಪೊಲೀಸ್ ಸಹಾಯವಾಣಿ 112ಕ್ಕೆ ಕರೆ ಮಾಡಿ ಹೊಯ್ಸಳ ಪೊಲೀಸರನ್ನು ಸ್ಥಳಕ್ಕೆ ಕರೆಸಿದ್ದಾರೆ. ಪೊಲೀಸರು ಎರಡೂ ಕಡೆಯವರ ಜಗಳವನ್ನು ಬಿಡಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದ್ದಾರೆ. ಬಳಿಕ ನಾಲ್ಕು ಬೆಕ್ಕಿನ ಮರಿಗಳಲ್ಲಿ ತಲಾ ಎರಡನ್ನು ಎರಡೂ ಮನೆಯವರಿಗೆ ಹಂಚಿ ಪ್ರಕರಣವನ್ನು ಇತ್ಯರ್ಥಪಡಿಸಿದ್ದಾರೆ.

ಮೊಬೈಲ್ ಕಳ್ಳನ ಬಂಧನ

ಬೆಂಗಳೂರು: ಮೊಬೈಲ್‌ಗಳನ್ನು ಕಳ್ಳತನ ಮಾಡಿದ್ದ ಆರೋಪಿಯನ್ನು ಬಂಧಿಸಿರುವ ಚಿಕ್ಕಜಾಲ ಠಾಣೆ ಪೊಲೀಸರು, ₹2.45 ಲಕ್ಷ ಮೌಲ್ಯದ ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಮಂಡಿ ಮೊಹಲ್ಲಾ ನಿವಾಸಿ, ಸೈಯದ್ ಸಲೀಂ ಅಹ್ಮದ್ (49) ಬಂಧಿತ. ಈತನಿಂದ ಐಫೋನ್ 12 ಪ್ರೊಮ್ಯಾಕ್ಸ್, ಐಫೋನ್ 15, ವಿವೊ ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಲಕ್ಷ್ಮೀ ನಾರಾಯಣ್ ಅವರು ಸ್ನೇಹಿತರ ಜತೆ ಚಪ್ಪರಕಲ್ಲು ರಸ್ತೆ ಟೆರ್ರಾ ಫಾರ್ಮ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವೇಳೆ ಮೊಬೈಲ್ ಕಳವಾಗಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಪೊಲೀಸರು, ಆರೋಪಿಯನ್ನು ಪತ್ತೆ ಮಾಡಿ, ಮಾಲು ವಶಪಡಿಸಿಕೊಂಡಿದ್ದಾರೆ.

ವೈಯಕ್ತಿಕ ಖಾತೆಗೆ ಟಿಕೆಟ್ ಹಣ: ಐವರು ನಿರ್ವಾಹಕರ ಅಮಾನತು

ಬೆಂಗಳೂರು: ಪುರುಷರಿಗೆ 'ಶಕ್ತಿ' ಯೋಜನೆಯ ಉಚಿತ ಪ್ರಯಾಣದ ಟಿಕೆಟ್ ನೀಡಿ, ಪ್ರಯಾಣ ದರದ ಹಣವನ್ನು ತಮ್ಮ ವೈಯಕ್ತಿಕ ಖಾತೆಗೆ ಹಾಕಿಸಿಕೊಂಡು ವಂಚಿಸಿದ ಪ್ರಕರಣದಲ್ಲಿ ಬಿಎಂಟಿಸಿಯ ಐವರು ನಿರ್ವಾಹಕರನ್ನು ಅಮಾನತು ಮಾಡಲಾಗಿದೆ.

ಎನ್. ಪ್ರಕಾಶ್, ಬ್ರಿಜೇಶ್ ಬಾಬು, ಬೊಮ್ಮಲಿಂಗೇಶ್ ಪಿ., ಮೋಹನ್ ಕೆ., ಸೂರ್ಯನಾರಾಯಣ ಟಿ. ಅಮಾನತುಗೊಂಡವರು. ಬಿಎಂಟಿಸಿಯ ಅಧಿಕೃತ ಯುಪಿಐ ಕ್ಯೂಆರ್ ಕೋಡ್ ಬದಲಾಗಿ ಈ ನಿರ್ವಾಹಕರು ತಮ್ಮ ವೈಯಕ್ತಿಕ ಯುಪಿಐ ಮೂಲಕ ಟಿಕೆಟ್ ದರವನ್ನು ಸಂಗ್ರಹಿಸಿದ್ದು ತಪಾಸಣಾ ತಂಡವು ಪರಿಶೀಲಿಸಿದಾಗ ಕಂಡುಬಂದಿತ್ತು. ಮುಂದಿನ ವಿಚಾರಣೆ ಪೂರ್ಣಗೊಳ್ಳುವವರೆಗೆ ಈ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.


ಗಾಂಧಿನಗರದ ಸನ್‌ರೈಸ್ ಸರ್ಕಲ್ ಬಳಿ ಇರುವ ಅಂಬೇಡ್ಕರ್ ಪ್ರತಿಮೆಗೆ ಬಿ.ವೈ. ವಿಜಯೇಂದ್ರ, ಗೋವಿಂದ ಕಾರಜೋಳ, ಬಿಜೆಪಿ ಮುಖಂಡರು ಮಾಲಾರ್ಪಣೆ ಮಾಡಿದರು

'ಅಂಬೇಡ್ಕರ್‌ಗೆ ಬಿಜೆಪಿಯಿಂದ ಗೌರವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ಬಂದ ನಂತರ ಸಂವಿಧಾನ ಶಿಲ್ಪಿ ಡಾ. ಬಿಆರ್ ಅಂಬೇಡ್ಕರ್ ಅವರಿಗೆ ಗೌರವ ನೀಡಿದ್ದು ಭಾರತೀಯ ಜನತಾ ಪಕ್ಷ. ಅವರಿಗೆ ಅವಮಾನ ಮಾಡಿದ್ದು ಕಾಂಗ್ರೆಸ್ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮ ಜಯಂತಿಯ ಪ್ರಯುಕ್ತ ಗಾಂಧಿನಗರದ ಸನ್‌ರೈಸ್ ಸರ್ಕಲ್ ಬಳಿ ಇರುವ ಅಂಬೇಡ್ಕರ್ ಪ್ರತಿಮೆ ಬಳಿ ದೀಪೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಅಂಬೇಡ್ಕರ್ ಅವರ ಜನ್ಮಭೂಮಿ, ಕರ್ಮಭೂಮಿ ಸೇರಿದಂತೆ ಅವರಿಗೆ ಸಂಬಂಧಿಸಿದ ಐದು ಸ್ಥಳಗಳನ್ನು ಪ್ರಧಾನಿ ನರೇಂದ್ರ ಮೋದಿ ಅಭಿವೃದ್ಧಿಪಡಿಸುತ್ತಿದ್ದಾರೆ. ದಲಿತರನ್ನು, ಶೋಷಿತರನ್ನು ಕೇವಲ ಮತಬ್ಯಾಂಕ್ ಆಗಿ ಕಾಂಗ್ರೆಸ್ ದುರ್ಬಳಕೆ ಮಾಡುತ್ತಾ ಬಂದಿದೆ ಎಂದು ಟೀಕಿಸಿದರು.

ಸಂಸದ ಗೋವಿಂದ ಕಾರಜೋಳ, ಡಾ. ಬಿ.ಆರ್. ಅಂಬೇಡ್ಕರ್ ಜನ್ಮ ಜಯಂತ್ಯುತ್ಸವ ರಾಷ್ಟ್ರೀಯ ಸಮಿತಿ ಸದಸ್ಯ ಜಗದೀಶ್ ಹಿರೇಮನಿ, ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಕೆ. ರಾಮಮೂರ್ತಿ, ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್. ಹರೀಶ್, ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಸಪ್ತಗಿರಿ ಗೌಡ ಉಪಸ್ಥಿತರಿದ್ದರು.

ಜೈಲು ಸಿಬ್ಬಂದಿ ಮೇಲೆ ಹಲ್ಲೆಗೆ ಯತ್ನ

ಪ್ರಜಾವಾಣಿ ವಾತ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾ ಕೈದಿಗಳ ಬ್ಯಾರಕ್ ತಪಾಸಣೆ ವೇಳೆ ಜೈಲು ಅಧಿಕಾರಿ ಮತ್ತು ಸಿಬ್ಬಂದಿ ಮೇಲೆ ಹಲ್ಲೆಗೆ ಯತ್ನ ನಡೆದಿದೆ.

ಜೈಲು ಅಧೀಕ್ಷಕ ಕರ್ಣ ಕ್ಷತ್ರಿ ನೇತೃತ್ವದಲ್ಲಿ ಮಾರ್ಚ್ 29ರ ರಾತ್ರಿ 11.45ರ ಸುಮಾರಿಗೆ ಜೈಲಿನ ಟವರ್-1 ವಿಚಾರಣಾ ಬಂಧಿಗಳ ವಿಭಾಗದ 5ನೇ ಕೊಠಡಿಯಲ್ಲಿನ ಕೈದಿಗಳನ್ನು ಹೆಸರುಗಳ ಇಂಗ್ಲಿಷ್ ಅಕ್ಷರಗಳಿಗೆ ಅನುಗುಣವಾಗಿ ವರ್ಗೀಕರಿಸಲು ಮುಂದಾಗಿದ್ದರು. ಇದೇ ವೇಳೆ ಬ್ಯಾರಕ್ ತಪಾಸಣೆ ನಡೆಸಿದಾಗ 10 ಮೊಬೈಲ್ ಫೋನ್, ಐದು ಸಿಮ್, ನಾಲ್ಕು ಇಯರ್ ಫೋನ್, ಚಾರ್ಜರ್‌ಗಳು ಪತ್ತೆಯಾಗಿತ್ತು.

ಈ ವೇಳೆ ಜೈಲು ಅಧಿಕಾರಿಗಳು ಹಾಗೂ ಸಿಬ್ಬಂದಿ ಮೇಲೆ ಕೈದಿಗಳು ಹಲ್ಲೆಗೆ ಮುಂದಾಗಿದ್ದರು. ಗಲಾಟೆ ತೀವ್ರಗೊಳ್ಳುತ್ತಿದ್ದಂತೆ ಜೈಲು ಸಿಬ್ಬಂದಿ ಕೈದಿಗಳ ಮೇಲೆ ಲಘು ಲಾಠಿ ಪ್ರಹಾರ ಮಾಡಿ ಚದುರಿಸಿದ್ದಾರೆ.

ವಿಚಾರಣಾ ಕೈದಿಗಳಾದ ಇಸಾಕ್ ಜಾಯ್, ವೋಕು ಅರೆಂಜಿ ಪ್ಯಾಟ್ರಿಕ್, ಕೋರಿಲ್ ಡೆನಿಯಲ್, ಥಾಮಸ್ ಅವರ ವಿರುದ್ಧ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಜೈಲಿನಲ್ಲಿ ಪುಂಡಾಟ ಮೆರೆಯುತ್ತಿದ್ದ ಕೈದಿಗಳ ಬ್ಯಾರಕ್ ಮೇಲೆ ಎರಡು ಬಾರಿ ನಡೆಸಿದ ದಾಳಿಯಲ್ಲೂ 11 ಮೊಬೈಲ್, ಚಾರ್ಜರ್ ಸೇರಿ ನಿಷೇಧಿತ ಇತರೆ ವಸ್ತುಗಳು ಪತ್ತೆಯಾಗಿವೆ.

ವಿಚಾರಣಾಧೀನ ಹಾಗೂ ಸಜಾಬಂಧಿ ಸೇರಿ ಒಟ್ಟು 5 ಸಾವಿರಕ್ಕೂ ಹೆಚ್ಚು ಮಂದಿ ಜೈಲಿನಲ್ಲಿದ್ದಾರೆ.

ಮೂರನೇ ಮದುವೆಗೆ ಸಜ್ಜಾಗಿದ್ದ ಟೆಕ್ಕಿ

ಆನೇಕಲ್: ಮೂರನೇ ಮದುವೆ ನಿಶ್ಚಿತಾರ್ಥಕ್ಕೆ ಸಜ್ಜಾಗಿದ್ದ ಟೆಕ್ಕಿಯೊಬ್ಬನ ವಿರುದ್ಧ ತಾಲ್ಲೂಕಿನ ಜಿಗಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತುಮಕೂರು ಚಿಕ್ಕನಾಯಕನಹಳ್ಳಿ ಮೂಲದ ರವಿ ಹಾಗೂ ಅವರ ಕುಟುಂಬದ ಒಂಬತ್ತು ಮಂದಿ ವಿರುದ್ಧ ಮಹಿಳೆಯರಿಗೆ ವಂಚನೆ ಮತ್ತು ವರದಕ್ಷಿಣೆ ಕಿರುಕುಳ ಪ್ರಕರಣ ದಾಖಲಾಗಿದೆ. ಎಚ್‌ಸಿಎಲ್ ಕಂಪನಿ ಉದ್ಯೋಗಿಯಾಗಿರುವ ಆರೋಪಿ ತಲೆಮರೆಸಿಕೊಂಡಿದ್ದಾನೆ.


ರವಿ

ಜಿಗಣಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಂಜೆತನ ತಪಾಸಣೆ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಣಶೀಲ ಫರ್ಟಿಲಿಟಿ ಕೇಂದ್ರವು ಕೋರಮಂಗಲದ 3ನೇ ಬ್ಲಾಕ್‌ನಲ್ಲಿರುವ ಶಾಖೆಯಲ್ಲಿ ಬಂಜೆತನ ಮತ್ತು ಸ್ತ್ರೀರೋಗದ ಉಚಿತ ತಪಾಸಣೆ ಶಿಬಿರವನ್ನು ಏ.18ರಂದು ಹಮ್ಮಿಕೊಂಡಿದೆ.

ಶಿಬಿರದಲ್ಲಿ ಐ.ವಿ.ಎಫ್. ವಿಫಲತೆ, ಗರ್ಭಪಾತ, ವಯಸ್ಸಿನ ಕಾರಣದಿಂದ ಎದುರಾಗುವ ಸಂತಾನಹೀನತೆ, ಎಂಡೊಮೆಟ್ರಿಯೋಸಿಸ್, ಗರ್ಭಾಶಯದ ಇತರೆ ತೊಂದರೆಗಳು, ಅಧಿಕ ರಕ್ತಸ್ರಾವ, ಮುಟ್ಟಿನ ನೋವು ಹಾಗೂ ಗರ್ಭಾಶಯದಲ್ಲಿನ ಸಮಸ್ಯೆ, ಪುರುಷರಲ್ಲಿನ ಸಂತಾನಹೀನತೆ ಸಮಸ್ಯೆ ಕುರಿತು ತಪಾಸಣೆಗೆ ಅವಕಾಶವಿದೆ.

ಡಾ. ದೇವಿಕಾ ಗುಣಶೀಲ ನೇತೃತ್ವದ ತಜ್ಞರ ತಂಡವು ಬೆಳಿಗ್ಗೆ 8.30ರಿಂದ ಮಧ್ಯಾಹ್ನ 3 ರವರೆಗೆ ತಪಾಸಣೆ ನಡೆಸಲಿದ್ದು, ದಂಪತಿ ಮೊದಲೇ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ಮಾಹಿತಿಗೆ 8867685096 ಅಥವಾ 080-4646260 ಸಂಪರ್ಕಿಸಬಹುದು.

ಚಿತ್ರಾವಳಿ


ವಿಶ್ವ ಆರೋಗ್ಯ ದಿನದ ಅಂಗವಾಗಿ ವಿಜಯನಗರದಲ್ಲಿರುವ ವಿ.ಸಿ.ಎಸ್ ಡಾಕ್ಟರ್ಸ್ ವೆಲ್‌ಫೇರ್ ಅಸೋಸಿಯೇಷನ್ ಹಮ್ಮಿಕೊಂಡಿದ್ದ ವಾಕಥಾನ್‌ನಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲಾಯಿತು


ಉದಯಭಾನು ಕಲಾಸಂಘದ ವಜ್ರ ಮಹೋತ್ಸವ ಆಚರಣೆ ಸಂಭ್ರಮದಲ್ಲಿ ಏರ್ಪಡಿಸಿದ್ದ ಒಂದು ವಾರದ ಕನ್ನಡ ನಾಟಕೋತ್ಸವದ ಸಮಾರೋಪದಲ್ಲಿ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ಬಿ.ವಿ. ರಾಜಾರಾಮ್, ಹನುಮಂತ ನಗರ ಕೋಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಚ್.ಎಸ್. ಮಂಜುನಾಥ್, ಬಿಬಿಎಂಪಿ ಮಾಜಿ ಸದಸ್ಯ ತಿಮ್ಮೇಗೌಡ, ಸಂಘದ ಅಧ್ಯಕ್ಷ ಶ್ರೀರಾಮೇಗೌಡ, ಸಾಂಸ್ಕೃತಿಕ ಉಪಸಮಿತಿಯ ಸಂಚಾಲಕ ಎಲ್. ವೆಂಕಟಪ್ಪ, ನಾಟಕ ತಂಡಗಳ ನಿರ್ದೇಶಕರು, ಸಂಘದ ಸದಸ್ಯರು ಉಪಸ್ಥಿತರಿದ್ದರು

1,33,803 ಅರ್ಜಿಗಳ ವಿಲೇವಾರಿ • ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ

ಇ–ಸ್ವತ್ತು 2.0 ತಂತ್ರಾಂಶ: ಹಲವು ಸಮಸ್ಯೆ ಇತ್ಯರ್ಥ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇ–ಸ್ವತ್ತು 2.0 ತಂತ್ರಾಂಶದಡಿ ಈವರೆಗೆ 1,52,863 ಅರ್ಜಿಗಳು ಸ್ವೀಕೃತಗೊಂಡಿದ್ದು, 1,33,803 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.


ಪ್ರಿಯಾಂಕ್ ಖರ್ಗೆ

ಸೋಮವಾರ ಅವರು ಇಲಾಖೆ ಅಧಿಕಾರಿಗಳ ಸಭೆ ನಡೆಸಿ, ಇ–ಸ್ವತ್ತು ತಂತ್ರಾಂಶದ ಕಾರ್ಯನಿರ್ವಹಣೆ ಮತ್ತು ಪ್ರಗತಿ ಪರಿಶೀಲಿಸಿದರು.

ಮುಖ್ಯಾಂಶಗಳು
- 1,52,863 ಅರ್ಜಿಗಳ ಸ್ವೀಕೃತ
- ಸಾರ್ವಜನಿಕರ ದೂರು ಆಧರಿಸಿ ಹಲವು ಸಮಸ್ಯೆಗಳಿಗೆ ಪರಿಹಾರ

ಅಲ್ಲದೇ, ಹೊಸ ನಮೂನೆ 11 ಬಿ ಗೆ ಸಂಬಂಧಿಸಿದಂತೆ ಈವರೆಗೆ 76,093 ಅರ್ಜಿಗಳು ಸ್ವೀಕೃತವಾಗಿವೆ. ಈ ಅರ್ಜಿಗಳು ವಿವಿಧ ಹಂತಗಳಲ್ಲಿ ಅನುಮೋದನೆಗೆ ಬಾಕಿ ಉಳಿದಿವೆ. ಈ ಅರ್ಜಿಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡುವಲ್ಲಿ ಕ್ರಮ ವಹಿಸಲಾಗುತ್ತಿದೆ ಎಂದೂ ಅವರು ಹೇಳಿದ್ದಾರೆ.

ಇ–ಸ್ವತ್ತು 2.0 ತಂತ್ರಾಂಶದ ಸಿಟಿಜನ್ ಇಂಟರ್‌ಫೇಸ್ ಮೂಲಕ ಅರ್ಜಿಗಳನ್ನು ಸಲ್ಲಿಸುವಲ್ಲಿ ಮತ್ತು ಬಳಕೆದಾರರ ಅರ್ಜಿಗಳನ್ನು ಅನುಮೋದನೆ ಮಾಡುವ ಸಂದರ್ಭದಲ್ಲಿ ತಾಂತ್ರಿಕ ಸಮಸ್ಯೆಗಳು ಉಂಟಾಗುತ್ತಿದೆ. ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿರುವ ಕಾರಣ ತಂತ್ರಾಂಶದಲ್ಲಿ ಬದಲಾವಣೆ ಮಾಡಿ ಸಮಸ್ಯೆಗಳನ್ನು ಬಗೆಹರಿಸಲಾಗಿದೆ ಎಂದು ತಿಳಿಸಿದ್ದಾರೆ.

ಬಗೆಹರಿದಿರುವ ಸಮಸ್ಯೆಗಳು:
- ನಮೂನೆ–11 ಬಿ ಖಾತೆಗಳನ್ನು ನಮೂನೆ–11ಎ ಗಳಾಗಿ ಪರಿವರ್ತನೆ ಮಾಡಿಕೊಳ್ಳಲು ಗ್ರಾಮ ಪಂಚಾಯತಿ ಹಂತದಲ್ಲಿ ಅವಕಾಶ ನೀಡಲಾಗಿದೆ
- ಹೊಸ ಬಹುಮಹಡಿ (ಅಪಾರ್ಟ್‌ಮೆಂಟ್) ಗಳಿಗೆ ಅರ್ಜಿಗಳನ್ನು ಸಲ್ಲಿಸಲು ಗ್ರಾಮ ಪಂಚಾಯತಿ ಹಂತದಲ್ಲಿ ಅವಕಾಶ ನೀಡಲಾಗಿದೆ
- ಇ-ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್‌ಫೇಸ್ ಮೂಲಕ ಅರ್ಜಿಗಳನ್ನು ಸಲ್ಲಿಸುವಲ್ಲಿ ಗುಂಟೆ ಮತ್ತು ಸೆಂಟ್ಸ್‌ನಲ್ಲಿರುವ ವಿಸ್ತೀರ್ಣವನ್ನು ಚ.ಮೀ ನಲ್ಲಿ ಪರಿವರ್ತಿಸಿ, ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ
- ಇ-ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್‌ಫೇಸ್ ಮೂಲಕ ಅರ್ಜಿಗಳನ್ನು ಋಣಭಾರ ಪ್ರಮಾಣಪತ್ರ (ಇಸಿ) ಗಳನ್ನು ಸಲ್ಲಿಸಲು ಉಂಟಾಗುತ್ತಿದ್ದ ತಾಂತ್ರಿಕ ಸಮಸ್ಯೆಗಳನ್ನು ಬರೆಹರಿಸಲಾಗಿದೆ
- ಇ-ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್‌ಫೇಸ್ ಮೂಲಕ ಅರ್ಜಿಗಳನ್ನು ಸೇವ್ ಮಾಡಲು ಉಂಟಾಗುತ್ತಿದ್ದ ತಾಂತ್ರಿಕ ಸಮಸ್ಯೆಗಳನ್ನು ಬರೆಹರಿಸಲಾಗಿದೆ
- ಇ-ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್‌ಫೇಸ್ ಮೂಲಕ ಇ-ಖಾತಾಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಇದ್ದ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲಾಗಿದೆ
- ಇ-ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್‌ಫೇಸ್ ಮೂಲಕ ಅರ್ಜಿಗಳನ್ನು ಸಲ್ಲಿಸುವಾಗ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಮಾಡಲಾಗಿದ್ದ ಸಂಯೋಜನೆಯಲ್ಲಿ ಉಂಟಾಗುತ್ತಿದ್ದ ತಾಂತ್ರಿಕ ಸಮಸ್ಯೆಗಳನ್ನು ಇತ್ಯರ್ಥಗೊಳಿಸಲಾಗಿದೆ
- ಇ-ಸ್ವತ್ತು ತಂತ್ರಾಂಶದ ಗ್ರಾಮ ಪಂಚಾಯತಿ ಬಳಕೆದಾರರುಗಳ ಲಾಗಿನ್ ನಲ್ಲಿ ಅರ್ಜಿಗಳ ಅನುಮೋದನೆಯಲ್ಲಿ ಉಂಟಾಗುತ್ತಿದ್ದ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲಾಗಿದೆ

ಹೊಸದಾಗಿ ಅನುಮೋದನೆಗೊಂಡ ಆಸ್ತಿಗಳಿಗೆ ತಿದ್ದುಪಡಿ ಮಾಡುವ ಅವಕಾಶವನ್ನು ಹಾಗೂ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಮಾರ್ಗಸೂಚಿ ದರವನ್ನು ಇ-ಸ್ವತ್ತು ತಂತ್ರಾಂಶದೊಂದಿಗೆ ಸಂಯೋಜನೆ ಮಾಡುವ ಕಾರ್ಯವನ್ನು ಮುಂದಿನ ದಿನದೊಳಗೆ ಕ್ರಮವಹಿಸಲಾಗುವುದು ಎಂದು ಪ್ರಿಯಾಂಕ್ ತಿಳಿಸಿದ್ದಾರೆ.

ವಿವರಗಳಿಗೆ– https://eswathu.karnataka.gov.in/Login.aspx ಮತ್ತು https://panchatantra.karnataka.gov.in ಸಹಾಯವಾಣಿ : 9483476000

‘ನ್ಯಾಯಮೂರ್ತಿಗೆ ಆರ್‌ಎಸ್‌ಎಸ್ ನಂಟು’

ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಸ್ವರ್ಣ ಕಾಂತ ಶರ್ಮಾ ವಿರುದ್ಧ ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅಸಮಾಧಾನ

ನವದೆಹಲಿ (ಪಿಟಿಐ): ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ ಸ್ವರ್ಣ ಕಾಂತ ಶರ್ಮಾ ಅವರು ಆರ್‌ಎಸ್‌ಎಸ್ ಅಂಗಸಂಸ್ಥೆಯಾದ ‘ಅಖಿಲ್ ಭಾರತೀಯ ಅಧಿವಕ್ತ ಪರಿಷತ್’ನಲ್ಲಿ ನಾಲ್ಕು ಬಾರಿ ಭಾಗವಹಿಸಿದ್ದಾರೆ. ಹೀಗಾಗಿ ನನ್ನ ಅರ್ಜಿಯನ್ನು ಅವರೇ ವಿಚಾರಣೆ ನಡೆಸುವುದು ಸೂಕ್ತವಲ್ಲ’ ಎಂದು ದೆಹಲಿ ಮಾಜಿ ಮುಖ್ಯಮಂತ್ರಿ ಹಾಗೂ ಆಮ್ ಆದ್ಮಿ ಪಕ್ಷದ (ಎಎಪಿ) ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರು ಹೇಳಿದ್ದಾರೆ.

ಅಬಕಾರಿ ನೀತಿ ಹಗರಣದಲ್ಲಿ ನ್ಯಾಯಮೂರ್ತಿ ಶರ್ಮಾ ಅವರು ಪ್ರಕರಣದಿಂದ ಹಿಂದೆ ಸರಿಯುವಂತೆ ಕೋರಿ ಕೇಜ್ರಿವಾಲ್ ಸೋಮವಾರ ಹೈಕೋರ್ಟ್‌ನಲ್ಲಿ ಸ್ವತಃ ವಾದ ಮಂಡಿಸಿ, ಆತಂಕವನ್ನು ಹೊರಹಾಕಿದ್ದಾರೆ.


ಕೇಜ್ರಿವಾಲ್

‘ಈ ಪ್ರಕರಣದಲ್ಲಿ ನ್ಯಾಯಾಲಯವು ಈಗಾಗಲೇ ನನ್ನನ್ನು ಖುಲಾಸೆಗೊಳಿಸಿದೆ. ಆದರೆ, ನ್ಯಾಯಮೂರ್ತಿ ಶರ್ಮಾ ಅವರು ಹಿಂದಿನ ತೀರ್ಪುಗಳಲ್ಲಿ ನನ್ನನ್ನು ಬಹುತೇಕ ತಪ್ಪಿತಸ್ಥ ಹಾಗೂ ಭ್ರಷ್ಟ ಎಂದು ಪರಿಗಣಿಸಿದ್ದಾರೆ. ಸಿಬಿಐ ಸಲ್ಲಿಸಿರುವ ಮೇಲ್ಮನವಿ ಅರ್ಜಿಯನ್ನು ಅವರೇ ವಿಚಾರಣೆ ನಡೆಸಿದರೆ, ನನಗೆ ನ್ಯಾಯ ಸಿಗುವುದಿಲ್ಲ. ಮರುಪರಿಶೀಲನೆ ಅರ್ಜಿ ಸಲ್ಲಿಸಿರುವುದು ನ್ಯಾಯಾಧೀಶರ ಸಮಗ್ರತೆ ಹಾಗೂ ಪ್ರಾಮಾಣಿಕತೆ ಪ್ರಶ್ನಿಸಿ ಅಲ್ಲ. ಬದಲಾಗಿ ಅವರ ನಿಲುವು ಪಕ್ಷಪಾತದಿಂದ ಕೂಡಿದೆ’ ಎಂದು ಹೇಳಿದ್ದಾರೆ.

‘ಸಿಬಿಐ ಸಲ್ಲಿಸಿದ ಅರ್ಜಿ ಹಾಗೂ ವಿರೋಧ ಪಕ್ಷ ಬಿಜೆಪಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಶರ್ಮಾ ಅವರು ವೇಗದಲ್ಲಿ ವಿಚಾರಣೆ ನಡೆಸಿದ್ದಾರೆ, ಬೇರೆ ಯಾವುದೇ ಪ್ರಕರಣಗಳನ್ನು ಅದೇ ವೇಗದಲ್ಲಿ ವಿಚಾರಣೆ ನಡೆಸಿಲ್ಲ’ ಎಂದು ಹೈಕೋರ್ಟ್‌ನ ಗಮನಸೆಳೆದರು.

ದೆಹಲಿ ಅಬಕಾರಿ ನೀತಿ ಪ್ರಕರಣದಲ್ಲಿ ಎಎಪಿ ಸಂಚಾಲಕ, ದೆಹಲಿ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಮತ್ತು ಇತರ 21 ಜನರನ್ನು ಖುಲಾಸೆಗೊಳಿಸಿ ದೆಹಲಿ ನ್ಯಾಯಾಲಯವು ಫೆ.27ರಂದು ಆದೇಶ ಹೊರಡಿಸಿತ್ತು. ಈ ಪ್ರಕರಣದಲ್ಲಿ ಕೇಜ್ರಿವಾಲ್ ಆರು ತಿಂಗಳು, ಸಿಸೋಡಿಯಾ ಎರಡು ವರ್ಷಗಳ ಕಾಲ ಜೈಲಿನಲ್ಲಿದ್ದರು.

ಕೇಂದ್ರ, ಚುನಾವಣಾ ಆಯೋಗಕ್ಕೆ ‘ಸುಪ್ರೀಂ’ ನೋಟಿಸ್

ನವದೆಹಲಿ (ಪಿಟಿಐ): ನಕಲಿ ಮತದಾನ ತಡೆಗೆ ಬೆರಳಚ್ಚು ಮತ್ತು ಕಣ್ಣಿನ ಪಾಪೆ (ಐರಿಸ್) ಬಯೊಮೆಟ್ರಿಕ್ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಕೋರಿ ಸಲ್ಲಿಸಿದ್ದ ಅರ್ಜಿಗೆ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗ ಹಾಗೂ ಇತರರಿಗೆ ಸುಪ್ರೀಂ ಕೋರ್ಟ್ ಸೂಚಿಸಿದೆ.

ಅರ್ಜಿ ವಿಚಾರಣೆಗೆ ಸಮ್ಮತಿಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್ ಮಾಲ್ಯಾ ಬಾಗ್ಚಿ ಅವರನ್ನು ಒಳಗೊಂಡ ನ್ಯಾಯಪೀಠವು, ‘ಸದ್ಯ ನಿಗದಿಯಾಗಿರುವ ವಿಧಾನಸಭಾ ಚುನಾವಣೆಗಳಿಗೆ ಈ ಕೋರಿಕೆಯನ್ನು ಅನ್ವಯಿಸಲು ಸಾಧ್ಯವಿಲ್ಲ’ ಎಂದು ಸ್ಪಷ್ಟಪಡಿಸಿತು.

‘ಆದರೆ ಮುಂದಿನ ಸಂಸತ್ ಅಥವಾ ರಾಜ್ಯ ವಿಧಾನಸಭೆ ಚುನಾವಣೆಗಳ ಸಂದರ್ಭದಲ್ಲಿ ಅನುಷ್ಠಾನಕ್ಕೆ ತರುವ ಬಗ್ಗೆ ಪರಿಶೀಲಿಸಬಹುದಾಗಿದೆ’ ಎಂದು ನೋಟಿಸ್ ರವಾನಿಸಿತು.

ಅರ್ಜಿದಾರರಾದ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು, ‘ಈ ಕ್ರಮದಿಂದ ನಕಲಿ ಮತದಾನ ಮತ್ತು ಭ್ರಷ್ಟಾಚಾರವನ್ನು ತಡೆಗಟ್ಟಬಹುದಾಗಿದೆ’ ಎಂದು ಕೋರ್ಟ್‌ಗೆ ತಿಳಿಸಿದರು.

‘ಇದಕ್ಕಾಗಿ ಅಸ್ತಿತ್ವದಲ್ಲಿರುವ ಕಾನೂನಿನಲ್ಲಿ ಅಪಾರ ಬದಲಾವಣೆ ಮಾಡುವ ಅಗತ್ಯವಿದೆ ಮತ್ತು ಆರ್ಥಿಕವಾಗಿಯೂ ಹೆಚ್ಚು ಹೊರೆ ಬೀಳಲಿದೆ’ ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಿತು.

ಸುದ್ದಿ 2 ನಿಮಿಷ

ಮುಂಗಾರು: ವಾಡಿಕೆಗಿಂತ ಕಡಿಮೆ

ನವದೆಹಲಿ (ಪಿಟಿಐ): ದೇಶದಲ್ಲಿ ಈ ವರ್ಷ ನೈರುತ್ಯ ಮುಂಗಾರು ಮಳೆ ವಾಡಿಕೆಗಿಂತ ಕಡಿಮೆ ಸುರಿಯಲಿದೆ ಎಂದು ಐಎಂಡಿ ತಿಳಿಸಿದೆ.

ನೈರುತ್ಯ ಮುಂಗಾರಿನ ಅವಧಿಯಲ್ಲಿ ದೇಶದ ವಾಡಿಕೆ ಮಳೆ 80 ಸೆಂ.ಮೀ. 1971ರಿಂದ 2020ರವರೆಗಿನ ದೀರ್ಘಾವಧಿಯ ಸರಾಸರಿ ತೆಗೆದುಕೊಂಡರೆ 87 ಸೆಂ.ಮೀ. ವರ್ಷಧಾರೆ ಆಗಿದೆ.

‘ಪ್ರಸಕ್ತ ವರ್ಷ ವಾಡಿಕೆಯ ಪ್ರಮಾಣದಲ್ಲಿ ಶೇ 92ರಷ್ಟು ವರ್ಷಧಾರೆ ಆಗಲಿದೆ. ಈ ಪ್ರಮಾಣದಲ್ಲಿ ಶೇ 5ರಷ್ಟು ವ್ಯತ್ಯಾಸವಾಗಬಹುದು’ ಎಂದು ಐಎಂಡಿಯ ಪ್ರಧಾನ ನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಆಂಧ್ರದ ಹಲವೆಡೆ ಉಷ್ಣಗಾಳಿ

ಅಮರಾವತಿ (ಪಿಟಿಐ): ಆಂಧ್ರಪ್ರದೇಶದ ಹಲವೆಡೆ ತೀವ್ರ ತಾಪಮಾನ ದಾಖಲಾಗಿದೆ. 51 ಮಂಡಲಗಳಲ್ಲಿ ಉಷ್ಣಗಾಳಿಯ ತೀವ್ರತೆ ಹೆಚ್ಚಿದ್ದರೆ, 49 ಮಂಡಲಗಳಲ್ಲಿ ತೀವ್ರತಾಪಮಾನ ದಾಖಲಾಗಿದೆ ಎಂದು ಆಂಧ್ರಪ್ರದೇಶ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಎಪಿಎಸ್‌ಡಿಎಂಎ ವ್ಯವಸ್ಥಾಪಕ ನಿರ್ದೇಶಕ ಪ್ರಖರ್ ಜೈನ್ ಸೋಮವಾರ ತಿಳಿಸಿದ್ದಾರೆ.



ಕಡಪ ಜಿಲ್ಲೆಯ ಪೊಟ್ಟಿಪಾಡಿನಲ್ಲಿ 43.8 ಡಿಗ್ರಿ ಸೆಲ್ಸಿಯಸ್, ತಿರುಪತಿ ಜಿಲ್ಲೆಯ ವರದಯ್ಯಪಾಳ್ಯದಲ್ಲಿ 43.1, ನಂದ್ಯಾಲದಲ್ಲಿ 42.9, ಅನಂತಪುರ ಜಿಲ್ಲೆಯ ತೇರಣಪಲ್ಲಿಯಲ್ಲಿ 42.3 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶವು ಭಾನುವಾರ ದಾಖಲಾಗಿದೆ ಎಂದು ಹೇಳಿದ್ದಾರೆ.

ಬಿಹಾರ: ನೂತನ ಸರ್ಕಾರ ರಚನೆಗೆ ಸಿದ್ಧತೆ

ಪಟ್ನಾ (ಪಿಟಿಐ): ಬಿಹಾರದಲ್ಲಿ ಬಿಜೆಪಿ ನೇತೃತ್ವದ ನೂತನ ಸರ್ಕಾರ ರಚನೆ ಸಂಬಂಧ ಎನ್‌ಡಿಎ ಮಂಗಳವಾರ ಸಭೆ ನಡೆಸಲಿದೆ. ಇಲ್ಲಿ ಶಾಸಕರು ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಲಿದ್ದಾರೆ.

‘ಪಕ್ಷದ ಕಚೇರಿಯಲ್ಲಿ ಮಂಗಳವಾರ ಮಧ್ಯಾಹ್ನ 2ಗಂಟೆಗೆ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ. ನಂತರ ವಿಧಾನಸಭೆಯ ಸೆಂಟ್ರಲ್ ಹಾಲ್‌ನಲ್ಲಿ 4 ಗಂಟೆಗೆ ಎನ್‌ಡಿಎ ಶಾಸಕರ ಸಭೆ ನಡೆಯಲಿದೆ’ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಸಂಜಯ್ ಸಾರವ್ಗಿ ತಿಳಿಸಿದರು.

ನಿತೀಶ್ ಕುಮಾರ್ ಅವರು ಮಂಗಳವಾರ 11 ಗಂಟೆಗೆ ಸಚಿವ ಸಂಪುಟ ಸಭೆಯಲ್ಲಿ ಭಾಗಿಯಾಗಲಿದ್ದು, ಲೋಕಭವನದಲ್ಲಿ ರಾಜೀನಾಮೆ ಸಲ್ಲಿಕೆಗೂ ಮುನ್ನ ಸಂಪುಟ ಸಭೆಯಲ್ಲಿಯೇ ರಾಜೀನಾಮೆ ಬಗ್ಗೆ ಔಪಚಾರಿಕವಾಗಿ ಘೋಷಣೆ ಮಾಡುವ ಸಾಧ್ಯತೆ ಇದೆ.

ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರೇ ಬಿಹಾರದ ಮುಖ್ಯಮಂತ್ರಿಯಾಗುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಆರ್‌ಜೆಡಿಯಿಂದ ತಮ್ಮ ರಾಜಕೀಯ ಜೀವನ ಆರಂಭಿಸಿದ್ದ ಸಾಮ್ರಾಟ್ ಚೌಧರಿ ಅವರು ಬಳಿಕ ಜೆಡಿಯು ಸೇರ್ಪಡೆಯಾಗಿದ್ದರು. ನಂತರ ಬಿಜೆಪಿ ಸೇರ್ಪಡೆಯಾಗಿದ್ದರು.

ಹೂವಿನ ಚೆಂಡಿಗೆ ಹೆದರಿದ ವಿಜಯ್?

ಪ್ರಜಾವಾಣಿ ವಾರ್ತೆ

ಚೆನ್ನೈ: ಕನ್ಯಾಕುಮಾರಿಯಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಚುನಾವಣಾ ಪ್ರಚಾರದ ರ‍್ಯಾಲಿ ವೇಳೆ ಅಭಿಮಾನಿಯೊಬ್ಬರು ಎಸೆದ ಹೂಚೆಂಡಿನಿಂದ ಆತಂಕಗೊಂಡ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಸಂಸ್ಥಾಪಕ, ನಟ ವಿಜಯ್ ಅವರು ಸೈಕಲ್‌ನಿಂದ ಇಳಿದು ತಮ್ಮ ವಾಹನ ಏರಿದ ಘಟನೆ ನಡೆದಿದೆ.

ಭಾರಿ ಸಂಖ್ಯೆಯಲ್ಲಿ ಸೇರಿದ್ದ ಜನ ಸಮೂಹದ ನಡುವೆ ವಿಜಯ್ ಅವರು ಸೈಕಲ್ ತುಳಿಯುತ್ತಾ ವೇಗವಾಗಿ ಸಾಗುತ್ತಿದ್ದರು. ಅವರ ಹಿಂದೆ ಭದ್ರತಾ ಸಿಬ್ಬಂದಿ ಹಾಗೂ ಪೊಲೀಸರು ಓಡಿಬರುತ್ತಿದ್ದರು. ಅಭಿಮಾನಿಗಳು, ಬೆಂಬಲಿಗರ ಹರ್ಷೋದ್ಗಾರದ ನಡುವೆ ವಿಜಯ್ ಅವರು ಉತ್ಸಾಹದಿಂದ ಸೈಕಲ್ ತುಳಿಯುತ್ತಿದ್ದರು. ಈ ವೇಳೆ ಅಭಿಮಾನಿಯೊಬ್ಬರು ಹೂವಿನ ಚೆಂಡು ಎಸೆದಿದ್ದು, ಅದರಲ್ಲಿದ್ದ ಹೂಗಳು ಚೆಲ್ಲಿದವು. ವಿಜಯ್ ಅವರು ಆತಂಕಗೊಂಡು ಕ್ಷಣ ಮಾತ್ರದಲ್ಲೇ ಸೈಕಲ್‌ನಿಂದ ಇಳಿದು ಹಿಂದೆ ಬರುತ್ತಿದ್ದ ವಾಹನವೇರಿದರು. ಭದ್ರತಾ ಸಿಬ್ಬಂದಿಯು ಅವರ ರಕ್ಷಣೆಗೆ ನಿಂತರು. ಈ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ.

ಮಹಿಳಾ ಮೀಸಲು ಜಾರಿಗಾಗಿ ಕಾಯ್ದೆಗೆ ತಿದ್ದುಪಡಿ– ಪ್ರಧಾನಿ

ದೊಡ್ಡ ನಿರ್ಣಯದ ಅಂಚಿನಲ್ಲಿದ್ದೇವೆ: ಮೋದಿ

ನವದೆಹಲಿ (ಪಿಟಿಐ): ‘ಮಹಿಳಾ ಮೀಸಲಾತಿ ಕಾಯ್ದೆ’ಗೆ ತಿದ್ದುಪಡಿ ತಂದು ಜಾರಿ ಮಾಡಲು ಹೆಜ್ಜೆ ಇಡಲಾಗಿದೆ. ಇದು 21ನೇ ಶತಮಾನದಲ್ಲಿ ಭಾರತವು ಕೈಗೊಳ್ಳಲಿರುವ ಮಹತ್ವಪೂರ್ಣ ನಿರ್ಧಾರ ಆಗಲಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ತಿಳಿಸಿದ್ದಾರೆ.


ಮೋದಿ

‘ದಶಕಗಳ ನಿರೀಕ್ಷೆ’ಯನ್ನು ನಿಜ ಮಾಡಲು ಮತ್ತು 2029ರಲ್ಲಿ ಮಹಿಳಾ ಮೀಸಲು ಕಾರ್ಯಗತಗೊಳಿಸಲು ಏಪ್ರಿಲ್ 16ರಿಂದ ಮೂರು ದಿನಗಳ ವಿಶೇಷ ಸಂಸತ್ ಅಧಿವೇಶನ ನಡೆಯುತ್ತಿದೆ’ ಎಂದು ಅವರು ಹೇಳಿದರು.

ವಿಶೇಷ ಅಧಿವೇಶನ ಕುರಿತು ಮಹಿಳಾ ಸಮ್ಮೇಳನವೊಂದರಲ್ಲಿ ಮಾತನಾಡಿದ ಅವರು, ‘ನಾರಿ ಶಕ್ತಿ ವಂದನಾ ಅಧಿನಿಯಮ’ಕ್ಕೆ ತರುತ್ತಿರುವ ತಿದ್ದುಪಡಿಯು ಹಿಂದಿನವರ ದೂರದೃಷ್ಟಿ ಮತ್ತು ಭವಿಷ್ಯದ ನಿರ್ಣಯವನ್ನು ಈಡೇರಿಸುತ್ತಿದೆ’ ಎಂದರು.

‘2023ರಲ್ಲೇ ಈ ಕಾನೂನು ಪರಿಚಯಿಸಲಾಗಿತ್ತು. ಸರ್ವ ಪಕ್ಷಗಳೂ ಅನುಮೋದಿಸಿದ್ದವು. 2029ರ ಒಳಗೆ ಅನುಷ್ಠಾನಕ್ಕೆ ತರಬೇಕು ಎಂಬುದು ವಿಪಕ್ಷಗಳೂ ಸೇರಿದಂತೆ ಎಲ್ಲರ ಬೇಡಿಕೆಯಾಗಿದೆ. ಐತಿಹಾಸಿಕ ನಿರ್ಧಾರಕ್ಕೆ ಹೊಸ ಸಂಸತ್ ಸಾಕ್ಷಿಯಾಗಲಿದೆ. ಇದು ನಾರಿ ಶಕ್ತಿಗೆ ಸಮರ್ಪಣೆ’ ಎಂದು ಪ್ರಧಾನಿ ತಿಳಿಸಿದರು.

‘ಲೋಕಸಭೆ ಮತ್ತು ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಕಲ್ಪಿಸುವ ತಿದ್ದುಪಡಿ ಇದಾಗಿದೆ. 2027ರ ಜನಗಣತಿ ಆಧಾರದ ಮೇಲೆ ಕ್ಷೇತ್ರ ವಿಂಗಡಣೆ ಆಗಬೇಕಿತ್ತು. ಸದ್ಯದ ಕಾನೂನಿನಲ್ಲಿ 2034ಕ್ಕೂ ಮುನ್ನ ಮಹಿಳಾ ಮೀಸಲು ಅನುಷ್ಠಾನಕ್ಕೆ ತರುವ ಅವಕಾಶಗಳು ಇರಲಿಲ್ಲ. ಹೀಗಾಗಿ ಕಾಯ್ದೆಗೆ ತಿದ್ದುಪಡಿ ತರುತ್ತಿದ್ದೇವೆ’ ಎಂದು ಹೇಳಿದರು.

ಮಹಿಳೆಯರಿಗೆ 273 ಸ್ಥಾನ: ‘ಮಹಿಳಾ ಮೀಸಲು ಕಾಯ್ದೆ ತಿದ್ದುಪಡಿಗೆ ಸಂಸತ್ತಿನ ಒಪ್ಪಿಗೆ ದೊರೆತರೆ ಲೋಕಸಭಾ ಕ್ಷೇತ್ರಗಳ ಸಂಖ್ಯೆ 816ಕ್ಕೆ ಏರಲಿದೆ. 273 ಮಹಿಳಾ ಮೀಸಲು ಕ್ಷೇತ್ರಗಳು ಸೃಷ್ಟಿಯಾಗಲಿವೆ’ ಎಂದು ಪ್ರಧಾನಿ ಮೋದಿ ಅವರು ತಿಳಿಸಿದರು.

ರಾಜಕೀಯ ಲಾಭದ ಉದ್ದೇಶ– ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ವಾಗ್ದಾಳಿ

ನವದೆಹಲಿ: ಮಹಿಳಾ ಮೀಸಲಾತಿ ಮಸೂದೆ ಹಾಗೂ ಕ್ಷೇತ್ರ ಮರುವಿಂಗಡಣೆ ಮಸೂದೆಗಳ ಅಂಗೀಕಾರ ಪಡೆಯಲು ಸಂಸತ್‌ನ ವಿಶೇಷ ಅಧಿವೇಶನ ಕರೆದಿರುವ ನರೇಂದ್ರ ಮೋದಿ ಸರ್ಕಾರದ ವಿರುದ್ಧ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ವಾಗ್ದಾಳಿ ನಡೆಸಿದ್ದಾರೆ.

‘ಈ ಕ್ರಮದ ಹಿಂದಿರುವ ನಿಜವಾದ ವಿಷಯ ಮಹಿಳಾ ಮೀಸಲಾತಿಯಲ್ಲ, ಬದಲಿಗೆ ಕ್ಷೇತ್ರ ಪುನರ್‌ವಿಂಗಡಣೆ. ಈ ಪ್ರಸ್ತಾವವು ಅತ್ಯಂತ ಅಪಾಯಕಾರಿ ಮತ್ತು ಸಂವಿಧಾನದ ಮೇಲಿನ ದಾಳಿಯಾಗಿದೆ’ ಎಂದು ಆರೋಪಿಸಿದ್ದಾರೆ.

‘ಲೋಕಸಭೆಯ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವ ಯಾವುದೇ ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆಯು, ಕೇವಲ ಅಂಕಗಣಿತದ ಲೆಕ್ಕಾಚಾರದಂತೆ ಇರಬಾರದು. ಬದಲಿಗೆ ಅದು ರಾಜಕೀಯವಾಗಿ ನ್ಯಾಯಸಮ್ಮತವಾಗಿ ಇರಬೇಕು’ ಎಂದು ಸೋನಿಯಾ ಗಾಂಧಿ ಅವರು ‘ದಿ ಹಿಂದೂ’ ಪತ್ರಿಕೆಗೆ ಬರೆದಿರುವ ಲೇಖನವೊಂದರಲ್ಲಿ ತಿಳಿಸಿದ್ದಾರೆ.

‘ಈ ಮಸೂದೆಗಳಿಗೆ ಅಂಗೀಕಾರ ಪಡೆಯಲು ಆತುರ ಪಡುತ್ತಿರುವುದಕ್ಕೆ ಒಂದೇ ಒಂದು ಕಾರಣವಿರಬಹುದು. ಅದು, ರಾಜಕೀಯ ಲಾಭ ಪಡೆಯುವುದು ಮತ್ತು ವಿರೋಧ ಪಕ್ಷಗಳನ್ನು ಅಸಹಾಯಕ ಸ್ಥಿತಿಗೆ ತಳ್ಳುವುದಾಗಿದೆ’ ಎಂದು ಹೇಳಿದ್ದಾರೆ.


ಸೋನಿಯಾ

‘ಈ ಮೀಸಲಾತಿ ಮಸೂದೆಯನ್ನು 2024ರ ಲೋಕಸಭಾ ಚುನಾವಣೆಯಿಂದಲೇ ಜಾರಿಗೆ ತರಬೇಕೆಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಒತ್ತಾಯಿಸಿದ್ದರು. ಆದರೆ, ಸರ್ಕಾರವು ತನ್ನದೇ ಆದ ಕಾರಣಗಳಿಗಾಗಿ ಈ ಮಸೂದೆಯನ್ನು ಜಾರಿಗೆ ತಂದಿರಲಿಲ್ಲ’ ಎಂದು ಹೇಳಿದ್ದಾರೆ.

‘ಮಹಿಳಾ ಮೀಸಲಾತಿಯನ್ನು 2029ರಿಂದ ಜಾರಿಗೊಳಿಸಲು 334–ಎ ವಿಧಿಗೆ ತಿದ್ದುಪಡಿ ಮಾಡಲಾಗುತ್ತಿದೆ. ಪ್ರಧಾನಿ ಅವರು ತಮ್ಮ ನಿಲುವನ್ನು ಬದಲಿಸಲು 30 ತಿಂಗಳನ್ನು ಏಕೆ ತೆಗೆದುಕೊಂಡರು? ವಿಶೇಷ ಅಧಿವೇಶನ ಕರೆಯಲು ಅವರು ಕೆಲ ವಾರಗಳ ಕಾಲ ಕಾಯಲು ಏಕೆ ಸಾಧ್ಯವಿಲ್ಲ’ ಎಂದು ಅವರು ಪ್ರಶ್ನಿಸಿದ್ದಾರೆ.

‘ಜನರಿಗಾಗಿ ಏಕಾಂಗಿ ಹೋರಾಟ’

ಸೂರಿ/ಗಲಸಿ (ಪಿಟಿಐ): ‘ನನ್ನನ್ನು ಸೋಲಿಸಲು 19 ರಾಜ್ಯ ಹಾಗೂ ಕೇಂದ್ರ ಒಂದಾಗಿವೆ. ಆದರೂ ಜನರಿಗಾಗಿ ನಾನು ಏಕಾಂಗಿಯಾಗಿ ಹೋರಾಡುತ್ತಿರುವೆ’ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸೋಮವಾರ ಇಲ್ಲಿ ಹೇಳಿದರು.

ಬೀರ್‌ಭೂಮ್ ಜಿಲ್ಲೆಯ ಸೂರಿಯಲ್ಲಿ ನಡೆದ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ದೆಹಲಿಯ ಪಡೆಗಳನ್ನು ಬಳಸಿಕೊಂಡು ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ ಗೆಲ್ಲುವುದು ಬಿಜೆಪಿಗೆ ಸಾಧ್ಯವಿಲ್ಲ’ ಎಂದರು.

‘ಪ್ರಧಾನಿ ನರೇಂದ್ರ ಮೋದಿಯವರ ‘ಮನದ ಮಾತು’ ಕಾರ್ಯಕ್ರಮವನ್ನು ಯುವ ಸಮೂಹದ ಮನಸ್ಸುಗಳ ಮೇಲೆ ಪ್ರಭಾವ ಬೀರಲಿಕ್ಕಾಗಿಯೇ ಪ್ರಸಾರ ಮಾಡಲಾಗುತ್ತಿದೆ’ ಎಂದು ದೂರಿದರು.

‘ಬಿಜೆಪಿ ಹಣ ಹಂಚುತ್ತಿದೆ. ನಮ್ಮಲ್ಲಿದ್ದ ಅಧಿಕಾರಿಗಳು, ಪೊಲೀಸರನ್ನು ಇತರ ರಾಜ್ಯಗಳಿಗೆ ವರ್ಗಾವಣೆ ಮಾಡಿರುವುದರಿಂದ, ಇಲ್ಲಿಗೆ ಬಂದಿರುವ ಯಾರೂ ಸಹ ಅವರನ್ನು ಹಿಡಿಯಲು ಸಾಧ್ಯವಿಲ್ಲದಾಗಿದೆ. ಹಣ, ಡ್ರಗ್ಸ್, ಶಸ್ತ್ರಾಸ್ತ್ರ ಸೇರಿದಂತೆ ಮತದಾರರನ್ನು ಪಶ್ಚಿಮ ಬಂಗಾಳಕ್ಕೆ ಕಳ್ಳಸಾಗಣೆ ಮಾಡಲಾಗುತ್ತಿದೆ. ಬಿಹಾರದಿಂದ ಮತದಾರರನ್ನು ರೈಲು, ಬಸ್‌ಗಳಲ್ಲಿ ಕರೆತರಲಾಗುತ್ತಿದೆ’ ಎಂದು ಮಮತಾ ದೂರಿದರು.

ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2026


ಬಂಕುರಾ ವಿಧಾನಸಭಾ ಕ್ಷೇತ್ರದಲ್ಲಿ ಟಿಎಂಸಿ ಅಭ್ಯರ್ಥಿ ಪರ ಮಮತಾ ಬ್ಯಾನರ್ಜಿ ಅವರು ಸೋಮವಾರ ಮತ ಯಾಚಿಸಿದರು ಪಿಟಿಐ ಚಿತ್ರ

ಬಾಬ್ರಿ ಮಸೀದಿಗಿಲ್ಲ ಅವಕಾಶ; ಶಾ

ರಾಣಿಗಂಜ್/ಬೀರ್‌ಭೂಮ್ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಬಾಬ್ರಿ ಮಸೀದಿ ನಿರ್ಮಿಸಲು ಬಿಜೆಪಿ ಅವಕಾಶ ಕೊಡಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೋಮವಾರ ಇಲ್ಲಿ ಹೇಳಿದರು.

ಬಾಬ್ರಿ ಮಸೀದಿಯ ಪ್ರತಿರೂಪ ನಿರ್ಮಿಸುವುದಾಗಿ ಆಮ್ ಜನತಾ ಉನ್ನಯನ್ ಪಕ್ಷದ ವರಿಷ್ಠ ಹುಮಾಯೂನ್ ಕಬೀರ್ ಹೇಳಿದ್ದರೆ, ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣಕ್ಕೆ ಮಮತಾ ಬ್ಯಾನರ್ಜಿ ವಿರೋಧ ವ್ಯಕ್ತಪಡಿಸಿದ್ದರು ಎಂದು ಶಾ ದೂರಿದರು.

ವ್ಯಾನ್–ಲಾರಿ ಡಿಕ್ಕಿ 11 ಮಂದಿ ಸಾವು

ಠಾಣೆ (ಪಿಟಿಐ): ಮಹಾರಾಷ್ಟ್ರದ ಠಾಣೆ ಜಿಲ್ಲೆಯಲ್ಲಿ ಸೋಮವಾರ ಬೆಳಿಗ್ಗೆ ಸಿಮೆಂಟ್ ಮಿಕ್ಸರ್ ಲಾರಿಗೆ ವ್ಯಾನ್ ಡಿಕ್ಕಿ ಹೊಡೆದ ಪರಿಣಾಮ 11 ಮಂದಿ ಮೃತಪಟ್ಟಿದ್ದಾರೆ. ಇಬ್ಬರಿಗೆ ಗಂಭೀರ ಗಾಯಗಳಾಗಿವೆ.

ಮುರ್ಬಾದ್‌ನ ಗೋವೇಲಿ ಗ್ರಾಮದ ರಾಯತಾ ಸೇತುವೆ ಮೇಲೆ ಬೆಳಿಗ್ಗೆ 10.45ರ ಸುಮಾರಿಗೆ ಭೀಕರ ಅಪಘಾತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಕ್ತರ ಮೇಲೆ ಹರಿದ ಲಾರಿ–7 ಸಾವು

ಸುರೇಂದ್ರನಗರ (ಪಿಟಿಐ): ಗುಜರಾತ್‌ನ ಸುರೇಂದ್ರನಗರ ಜಿಲ್ಲೆಯಲ್ಲಿ ಸೋಮವಾರ ಮುಂಜಾನೆ ರಸ್ತೆ ಬದಿ ಪಾದಯಾತ್ರೆಯಲ್ಲಿ ಸಾಗುತ್ತಿದ್ದ ಭಕ್ತರ ಮೇಲೆ ಲಾರಿಯೊಂದು ಹರಿದ ಪರಿಣಾಮ ಏಳು ಮಂದಿ ಮೃತಪಟ್ಟು, ನಾಲ್ವರು ಗಾಯಗೊಂಡಿದ್ದಾರೆ.

‘ಲಖ್ತಾರ್–ವಿರಂಗಮ್ ಹೆದ್ದಾರಿಯಲ್ಲಿ ಮುಂಜಾನೆ 1.30ರ ಸುಮಾರಿಗೆ ಘಟನೆ ನಡೆದಿದೆ. ರಾಜ್‌ಕೋಟ್‌ನಿಂದ ಬಹುಚಾರಜಿಗೆ ಪಾದಯಾತ್ರೆ ಸಾಗುತ್ತಿತ್ತು. ಈ ವೇಳೆ ವೇಗವಾಗಿ ಬಂದ ಲಾರಿ ಡಿಕ್ಕಿ ಹೊಡೆದಿದೆ’ ಎಂದು ಲಖ್ತಾರ್ ಪೊಲೀಸರು ತಿಳಿಸಿದ್ದಾರೆ.

ನೊಯ್ಡಾ: 50 ಪ್ರತಿಭಟನಕಾರರನ್ನು ವಶಕ್ಕೆ ಪಡೆದ ಪೊಲೀಸರು

ಹಿಂಸಾಚಾರಕ್ಕೆ ತಿರುಗಿದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಲಖನೌ: ವೇತನ ಹೆಚ್ಚಳ ಹಾಗೂ ಇತರೆ ಸೌಲಭ್ಯಗಳಿಗೆ ಆಗ್ರಹಿಸಿ ಖಾಸಗಿ ಕಂಪನಿಗಳ ಕಾರ್ಮಿಕರು ನೊಯ್ಡಾದ ಕೈಗಾರಿಕಾ ಪ್ರದೇಶದಲ್ಲಿ ನಡೆಸುತ್ತಿದ್ದ ಪ್ರತಿಭಟನೆಯು ಸೋಮವಾರ ಹಿಂಸಾಚಾರಕ್ಕೆ ತಿರುಗಿದೆ.

ಪ್ರತಿಭಟನಕಾರರು ವಾಹನಗಳಿಗೆ ಬೆಂಕಿ ಹಚ್ಚಿ, ಕಚೇರಿಗಳ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಕಾರ್ಮಿಕರನ್ನು ನಿಯಂತ್ರಿಸಲು ಪೊಲೀಸರು ಲಾಠಿ ಪ್ರಯೋಗಿಸಿ, ಅಶ್ರುವಾಯು ಸಿಡಿಸಿದ್ದಾರೆ.

ಹಿಂಸಾಚಾರಕ್ಕೆ ಸಂಬಂಧಿಸಿದಂತೆ 50 ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಪೊಲೀಸರು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಬೆಂಕಿಯಲ್ಲಿ ಸುಟ್ಟುಹೋಗಿರುವ ವಾಹನಗಳ ಪೈಕಿ ಪೊಲೀಸರ ವಾಹನಗಳು ಸೇರಿವೆ.

ಮಾಸಿಕ ಕನಿಷ್ಠ ವೇತನವನ್ನು ₹26 ಸಾವಿರಕ್ಕೆ ಹೆಚ್ಚಿಸಬೇಕು. ದೀಪಾವಳಿ ಬೋನಸ್, ಕಾರ್ಮಿಕ ನೀತಿ ಅನುಸರಣೆ, ವಾರದ ರಜೆ ಹಾಗೂ ಹೆಚ್ಚುವರಿ ಅವಧಿಯ ಕೆಲಸಕ್ಕೆ ದುಪ್ಪಟ್ಟು ವೇತನ ನೀಡಬೇಕು ಎಂಬುದೂ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಕಾರ್ಮಿಕರು ಕಳೆದ ಕೆಲ ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ.


ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ಮಾಡಿದರು ಪಿಟಿಐ ಚಿತ್ರ

ಕಾರ್ಮಿಕರ ಬೇಡಿಕೆಗಳ ಪೈಕಿ ಕೆಲವನ್ನಷ್ಟೇ ಈಡೇರಿಸಲು ಸರ್ಕಾರದ ಪ್ರತಿನಿಧಿಗಳು ಭಾನುವಾರ ಒಪ್ಪಿಕೊಂಡಿದ್ದು, ಪ್ರಮುಖ ಬೇಡಿಕೆಯಾದ ವೇತನ ಹೆಚ್ಚಳ ಪರಿಗಣಿಸಿಲ್ಲ ಎಂದು ತಿಳಿದುಬಂದಿದೆ. ಇದರಿಂದ, ಆಕ್ರೋಶಗೊಂಡ ಕಾರ್ಮಿಕರು ಪ್ರತಿಭಟನೆಯನ್ನು ತೀವ್ರಗೊಳಿಸಿದ್ದರು.

ಜತೆಗೆ ಹರಿಯಾಣ ಸರ್ಕಾರವು ಕನಿಷ್ಠ ವೇತನವನ್ನು ಹೆಚ್ಚಳ ಮಾಡುವ ಬಗ್ಗೆ ಘೋಷಣೆ ಮಾಡಿರುವುದರಿಂದ ಪ್ರತಿಭಟನೆಯು ಮತ್ತಷ್ಟು ಕಾವು ಪಡೆದಿದೆ ಎನ್ನಲಾಗಿದೆ.

ಘಟನೆ ಕುರಿತಂತೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಪ್ರತಿಕ್ರಿಯಿಸಿ, ಕಾರ್ಮಿಕರ ಹಿತಾಸಕ್ತಿ ರಕ್ಷಿಸಲು ಸರ್ಕಾರ ಬದ್ಧವಾಗಿದೆ. ಆದರೆ, ಕಾರ್ಮಿಕರು ಹಿಂಸಾಚಾರದಲ್ಲಿ ತೊಡಗಬಾರದು ಎಂದೂ ಎಚ್ಚರಿಕೆ ನೀಡಿದ್ದಾರೆ.

ಸಾವಿರಾರು ಅಭಿಮಾನಿಗಳಿಂದ ಅಂತಿಮ ನಮನ: ದಾದರ್‌ನ ಶಿವಾಜಿ ಪಾರ್ಕ್ ಚಿತಾಗಾರದಲ್ಲಿ ಅಂತ್ಯಕ್ರಿಯೆ

ಪಂಚಭೂತಗಳಲ್ಲಿ ‘ಆಶಾ ತಾಯಿ’ ಲೀನ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಎಂಟು ದಶಕಗಳ ಕಾಲ ಸುಮಧುರ ಗಾಯನದಿಂದ ಪ್ರೇಕ್ಷಕರನ್ನು ರಂಜಿಸಿ, ಪ್ರತಿಯೊಬ್ಬರ ಮನದಲ್ಲೂ ವಿಶೇಷ ಸ್ಥಾನ ಪಡೆದಿದ್ದ ಖ್ಯಾತ ಗಾಯಕಿ ಆಶಾ ಭೋಸ್ಲೆ ಅವರಿಗೆ ಕಣ್ಣೀರಿನ ವಿದಾಯ ಹೇಳಲು ಜನಸಾಗರವೇ ನೆರೆದಿತ್ತು.

ಸಿನಿಮಾ ತಾರೆಯರು, ಗಣ್ಯರು ಸೇರಿದಂತೆ ಸಾವಿರಾರು ಅಭಿಮಾನಿಗಳು ‘ಆಶಾ ತಾಯಿ’ಗೆ ಅಂತಿಮ ನಮನ ಸಲ್ಲಿಸಿದರು.

ಸೋಮವಾರ ಸಂಜೆ ದಾದರ್‌ನ ಶಿವಾಜಿ ಪಾರ್ಕ್ ಚಿತಾಗಾರದಲ್ಲಿ ಮಹಾರಾಷ್ಟ್ರ ಸರ್ಕಾರದ ಸಕಲ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿತು. ಕುಟುಂಬದವರ ಆಶಯದಂತೆ ಭಗವದ್ಗೀತೆಯ 9ನೇ ಅಧ್ಯಾಯವನ್ನು ಪಠಿಸಲಾಯಿತು.

ಬೆಳಿಗ್ಗೆ, ಭೋಸ್ಲೆ ಅವರ ಪಾರ್ಥಿವ ಶರೀರವನ್ನು ಲೋವರ್ ಪರೇಲ್‌ನ ಸೇನಾಪತಿ ಬಾಪಟ್ ಮಾರ್ಗದಲ್ಲಿರುವ ಕಾಸಾ ಗ್ರಾಂಡೆ ಕಾಂಪ್ಲೆಕ್ಸ್‌ನ ಅವರ ನಿವಾಸದಲ್ಲಿ ಇರಿಸಲಾಗಿತ್ತು. ಅಲ್ಲಿ ವಿವಿಧ ಕ್ಷೇತ್ರದ ಗಣ್ಯರು, ಕುಟುಂಬಸ್ಥರು ಮತ್ತು ಸ್ನೇಹಿತರು ಅಂತಿಮ ನಮನ ಸಲ್ಲಿಸಿದರು.

ತಮ್ಮ ನೆಚ್ಚಿನ ಗಾಯಕಿಯ ಅಂತಿಮ ದರ್ಶನ ಪಡೆಯಲು ಜನರು ಬೀದಿಗಳಲ್ಲಿ ಸಾಲುಗಟ್ಟಿ ನಿಂತಿದ್ದರು. ಚಾವಣಿ ಹಾಗೂ ಕಿಟಕಿಗಳಿಂದ ಇಣುಕಿ ನೋಡುತ್ತಿದ್ದರು. ಲೋವರ್ ಪರೇಲ್‌ನಿಂದ ಶಿವಾಜಿ ಪಾರ್ಕ್‌ನವರೆಗೆ ನಿಧಾನವಾಗಿ ಸಾಗುತ್ತಿದ್ದ ಅಂತಿಮ ಯಾತ್ರೆಯೊಂದಿಗೆ ನೂರಾರು ಜನರು ಹೆಜ್ಜೆ ಹಾಕಿದರು.

ಮುಖ್ಯಾಂಶಗಳು

- ಗಣ್ಯರಿಂದ ಅಂತಿಮ ನಮನ
- ಅಂತ್ಯಕ್ರಿಯೆ ವೇಳೆ ಭಗವದ್ಗೀತೆಯ 9ನೇ ಅಧ್ಯಾಯ ಪಠಣ
- ‘ಆಶಾ ತಾಯಿ ಅಮರರಾಗಿರಲಿ’ ಎಂದು ಘೋಷಣೆ ಕೂಗಿದ ಜನ

ಹೂವುಗಳಿಂದ ಅಲಂಕರಿಸಿದ್ದ ಶವಪೆಟ್ಟಿಗೆಯ ಮೇಲೆ ಬೋಸ್ಲೆ ಅವರ ಬೃಹತ್ ಭಾವಚಿತ್ರವನ್ನು ಇರಿಸಲಾಗಿತ್ತು. ಕೆಂಪು ಸೀರೆಯಲ್ಲಿ ಕಂಗೊಳಿಸುತ್ತಿದ್ದ ಅವರ ಚಿತ್ರದಲ್ಲಿ ವಿಶಿಷ್ಟವಾದ ಬಿಂದಿ ಮತ್ತು ಮೂಗುತಿ ಎದ್ದು ಕಾಣುತ್ತಿತ್ತು. ಎಂಟು ದಶಕಗಳ ಕಾಲ ತಮ್ಮ ಹೃದಯ ತುಂಬಿದ ಆ ಸಂಗೀತ ದಂತಕಥೆಯ ಅಂತಿಮ ದರ್ಶನಕ್ಕಾಗಿ ನೆರೆದಿದ್ದ ಜನಸಮೂಹದಿಂದ ‘ಆಶಾ ತಾಯಿ ಅಮರರಾಗಿರಲಿ’ ಎಂಬ ಘೋಷಣೆಗಳು ಮೊಳಗಿದವು.

ಭೋಸ್ಲೆ ಅವರ ಪ್ರಸಿದ್ಧ ಹಾಡುಗಳಾದ ‘ಆವೋ ಹುಜೂರ್ ತುಮ್ಕೋ’, ‘ಆಯಿಯೇ ಮೆಹರ್ಬಾನ್’, ‘ಜುಮ್ಕಾ ಗಿರಾ ರೇ’, ‘ದಿಲ್ ಚೀಜ್ ಕ್ಯಾ ಹೈ’, ‘ಓ ಸಾಥಿ ರೇ’ ಮತ್ತು ‘ಯಾಯೀ ರೇ ಯಾಯೀ ರೇ’ ಹಾಡಲಾಯಿತು.


ಮುಂಬೈನ ಲೋವರ್ ಪರೇಲ್‌ನ ಸೇನಾಪತಿ ಬಾಪಟ್ ಮಾರ್ಗದಲ್ಲಿರುವ ಕಾಸಾ ಗ್ರಾಂಡೆ ಕಾಂಪ್ಲೆಕ್ಸ್‌ನಿಂದ ಶಿವಾಜಿ ಪಾರ್ಕ್‌ವರೆಗೆ ಆಶಾ ಭೋಸ್ಲೆ ಅವರ ಅಂತಿಮಯಾತ್ರೆ ನಡೆಯಿತು ಪಿಟಿಐ ಚಿತ್ರ

ಭೋಸ್ಲೆ ಅವರ ಮಗ ಆನಂದ್, ಮೊಮ್ಮಗಳು ಝಾನೈ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು. ಗಾಯಕಿಯೂ ಆಗಿರುವ ಸಹೋದರಿ ಉಷಾ ಮಂಗೇಶ್ಕರ್ ಮತ್ತು ಸಹೋದರ ಹೃದಯನಾಥ್ ಮಂಗೇಶ್ಕರ್ ಕೂಡ ಅಲ್ಲಿದ್ದರು.

ಹಿರಿಯ ನಟಿಯರಾದ ಆಶಾ ಪರೇಖ್, ಹೆಲೆನ್, ಟಬು, ನಟ ರಣವೀರ್ ಸಿಂಗ್, ಸಂಗೀತ ಸಂಯೋಜಕ ಎ.ಆರ್. ರೆಹಮಾನ್, ಕ್ರಿಕೆಟ್ ದಂತಕಥೆ ಸಚಿನ್ ತೆಂಡೂಲ್ಕರ್ ಮತ್ತು ರಾಜಕೀಯ ಮುಖಂಡರಾದ ಉದ್ಧವ್ ಠಾಕ್ರೆ, ಪ್ರಫುಲ್ ಪಟೇಲ್ ಮತ್ತು ಸುಪ್ರಿಯಾ ಸುಳೆ ಸೇರಿದಂತೆ ಹಲವರು ಅಂತಿಮ ದರ್ಶನ ಪಡೆದರು.

ಲತಾ ಮಂಗೇಶ್ಕರ್ ಅವರ ಸಹೋದರಿಯರಲ್ಲಿ ಒಬ್ಬರಾದ ಆಶಾ ಭೋಸ್ಲೆ, ಬಹು ಅಂಗಾಂಗ ವೈಫಲ್ಯದಿಂದಾಗಿ ಬ್ರೀಚ್ ಕ್ಯಾಂಡಿ ಆಸ್ಪತ್ರೆಯಲ್ಲಿ ಭಾನುವಾರ ಬೆಳಿಗ್ಗೆ ನಿಧನರಾದರು. ಅವರಿಗೆ 92 ವರ್ಷ ವಯಸ್ಸಾಗಿತ್ತು.

ಲತಾ ಮಂಗೇಶ್ಕರ್ ಅವರ ಅಂತ್ಯಕ್ರಿಯೆಯೂ ಶಿವಾಜಿ ಪಾರ್ಕ್‌ನಲ್ಲಿ ನಡೆದಿತ್ತು. ಅವರು 2022ರ ಫೆಬ್ರುವರಿಯಲ್ಲಿ 92ನೇ ವಯಸ್ಸಿನಲ್ಲಿ ನಿಧನರಾಗಿದ್ದರು.

ಅರ್ಜಿ ಪರಿಗಣಿಸಲು ‘ಸುಪ್ರೀಂ’ ನಕಾರ

ಒಂದನೇ ಪುಟದಿಂದ...

ಅರ್ಜಿದಾರರಾದ ಕ್ವಾರೈಶಾ ಯಾಸ್ಮಿನ್ ಮತ್ತು ಇತರರು ಈಗಾಗಲೇ ಮೇಲ್ಮನವಿ ನ್ಯಾಯಮಂಡಳಿ ಸಂಪರ್ಕಿಸಿರುವುದನ್ನು ಗಮನಿಸಿದ ಪೀಠ, ‘ನಮ್ಮ ಅಭಿಪ್ರಾಯದಲ್ಲಿ ಈ ಅರ್ಜಿಗಳಲ್ಲಿ ವ್ಯಕ್ತಪಡಿಸಿರುವ ಆತಂಕಗಳು ಅಕಾಲಿಕವಾಗಿವೆ’ ಎಂದು ಆದೇಶದಲ್ಲಿ ಉಲ್ಲೇಖಿಸಿದೆ. ಆದರೆ ಅರ್ಜಿಯ ಅರ್ಹತೆಯ ಬಗ್ಗೆ ಯಾವುದೇ ಅಭಿಪ್ರಾಯ ವ್ಯಕ್ತಪಡಿಸಲ್ಲ ಎಂದು ಸ್ಪಷ್ಟಪಡಿಸಿದೆ.

ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಬಳಿಕ ಮತದಾರರನ್ನು ವಿವಿಧ ಸಾಂವಿಧಾನಿಕ ಅಧಿಕಾರಿಗಳ ನಡುವೆ ಸಿಲುಕಿಸಲಾಗಿದೆ ಎಂದೂ ಪೀಠ ಇದೇ ವೇಳೆ ಅಭಿಪ್ರಾಯಪಟ್ಟಿದೆ.

ಆಯೋಗವು ಸಮರ್ಪಕವಾಗಿ ಎಸ್‌ಐಆರ್ ಪ್ರಕ್ರಿಯೆಯನ್ನು ಅನುಸರಿಸದೆ, ಹಲವರ ಹೆಸರುಗಳನ್ನು ಅಳಿಸಿದೆ. ಇವುಗಳ ವಿರುದ್ಧದ ಮೇಲ್ಮನವಿಗಳ ವಿಚಾರಣೆ ಸಕಾಲಿಕವಾಗಿ ನಡೆಯುತ್ತಿಲ್ಲ ಎಂದು ಅರ್ಜಿಯಲ್ಲಿ ಆರೋಪಿಸಲಾಗಿತ್ತು.

ಈ ಮೇಲ್ಮನವಿಗಳನ್ನು ನಿರ್ಧರಿಸಲು ಕಲ್ಕತ್ತಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರು, ಹೈಕೋರ್ಟ್‌ನ ಮಾಜಿ ಮುಖ್ಯ ನ್ಯಾಯಮೂರ್ತಿಗಳು ಮತ್ತು ಇತರ ನ್ಯಾಯಾಧೀಶರುಗಳ ನೇತೃತ್ವದಲ್ಲಿ 19 ನ್ಯಾಯಮಂಡಳಿ ಸ್ಥಾಪಿಸಿರುವುದನ್ನು ಪೀಠದ ಗಮನಕ್ಕೆ ತರಲಾಯಿತು.

ಚುನಾವಣಾ ಆಯೋಗದ ಪರ ವಾದಿಸಿದ ಹಿರಿಯ ವಕೀಲ ಡಿ.ಎಸ್. ನಾಯ್ಡು ಅವರು, ಪ್ರಸ್ತುತ ಸುಮಾರು 34 ಲಕ್ಷ ಮೇಲ್ಮನವಿ ಅರ್ಜಿಗಳು ಬಾಕಿ ಉಳಿದಿವೆ ಎಂದು ಮಾಹಿತಿ ನೀಡಿದರು. ಹಾಗಾದರೆ ಪ್ರತಿ ನ್ಯಾಯಮಂಡಳಿಯೂ ಲಕ್ಷಕ್ಕೂ ಹೆಚ್ಚು ಮೇಲ್ಮನವಿಗಳನ್ನು ನಿರ್ವಹಿಸಬೇಕಿದೆ ಎಂದು ಪೀಠ ಹೇಳಿತು.

ದಿನಾಂಕ ವಿಸ್ತರಣೆಗೆ ಮನವಿ–ನಿರಾಕರಣೆ: ಸಂಬಂಧಿತ ನ್ಯಾಯಾಂಗ ಅಧಿಕಾರಿಗಳ ಬಳಿ ಅಗತ್ಯ ಆದೇಶಗಳನ್ನು ನೀಡುವಲ್ಲಿ ಚುನಾವಣಾ ಆಯೋಗ ವಿಫಲವಾಗಿದೆ. ಹೀಗಾಗಿ ಮತದಾರರ ಪಟ್ಟಿ ಅಂತಿಮಗೊಳಿಸುವ ದಿನಾಂಕವನ್ನು ವಿಸ್ತರಿಸಬೇಕು ಎಂದು ಅರ್ಜಿದಾರರ ಪರ ವಕೀಲರು ಕೋರಿದರು.

ಈ ಮೇಲ್ಮನವಿ ಅರ್ಜಿಗಳನ್ನು ಕಾಲಮಿತಿಯೊಳಗೆ ನಿರ್ಧರಿಸಲಾಗುತ್ತದೆಯೇ ಎಂದು ವಕೀಲರು ಇದೇ ವೇಳೆ ಪೀಠವನ್ನು ಕೇಳಿದರು. ಅದನ್ನು ಅಲ್ಲಗಳೆದ ಪೀಠವು, ಮಾಜಿ ನ್ಯಾಯಮೂರ್ತಿಗಳಿಗೆ ಸಮಯ ನಿಗದಿಪಡಿಸುವುದು ಸರಿಯಲ್ಲ, ಆ ಮೂಲಕ ಅವರಿಗೆ ಹೆಚ್ಚಿನ ಹೊರೆ ಹೇರಲಾಗದು ಎಂದಿತು.

ಪೀಠ ಹೇಳಿದ ಪ್ರಮುಖಾಂಶಗಳು...

ಒಂದನೇ ಪುಟದಿಂದ...

- ನ್ಯಾಯಯುತ ಪ್ರಕ್ರಿಯೆಯ ಹಕ್ಕುಗಳನ್ನು ನಾವು ರಕ್ಷಿಸಬೇಕಿದೆ. ಆದರೆ, ಈ ಹಂತದಲ್ಲಿ ಚುನಾವಣಾ ಪ್ರಕ್ರಿಯೆಯನ್ನು ನಾವು ತಡೆಯುವುದಿಲ್ಲ
- ಅಪಾರ ಸಂಖ್ಯೆಯ ಮತದಾರರನ್ನು ಹೊರಗಿಟ್ಟಿರುವುದು ಖಚಿತವಾಗುವವರೆಗೆ ಅಥವಾ ಅದು ಚುನಾವಣೆಯ ಮೇಲೆ ಭೌತಿಕವಾಗಿ ಪರಿಣಾಮ ಬೀರುವವರೆಗೆ ಚುನಾವಣೆಯನ್ನು ರದ್ದುಪಡಿಸಲು ಆಗುವುದಿಲ್ಲ. ನ್ಯಾಯಾಂಗವು ನ್ಯಾಯಯುತ ಚುನಾವಣೆಗಳನ್ನು ಉತ್ತೇಜಿಸಲು ಮಧ್ಯಪ್ರವೇಶಿಸುತ್ತದೆಯೇ ಹೊರತು, ಚುನಾವಣೆಗಳನ್ನು ಅಡ್ಡಿಪಡಿಸಲು ಅಲ್ಲ
- ಶೇ 10ರಷ್ಟು ಮತದಾರರು ಮತ ಚಲಾಯಿಸದಿದ್ದರೆ ಮತ್ತು ಗೆಲುವಿನ ಅಂತರ ಶೇ 10ಕ್ಕಿಂತ ಹೆಚ್ಚಿದ್ದರೆ ಏನಾಗುತ್ತದೆ ಎಂದು ಪ್ರಶ್ನಿಸಿದ ಪೀಠವು, ‘ಒಂದು ವೇಳೆ ಗೆಲುವಿನ ಅಂತರ ಶೇ 2ರಷ್ಟಿದ್ದರೆ ಮತ್ತು ಶೇ 15ರಷ್ಟು ಮತದಾರರು ಮತಚಲಾಯಿಸಲು ಸಾಧ್ಯವಾಗದಿದ್ದರೆ ನಾವು ಖಂಡಿತವಾಗಿಯೂ ಯೋಚಿಸಬೇಕಾಗುತ್ತದೆ
- ಅರ್ಜಿದಾರರು ಮೇಲ್ಮನವಿ ನ್ಯಾಯಮಂಡಳಿಗಳ ಮುಂದೆ ತಮ್ಮ ಅರ್ಜಿಗಳನ್ನು ಸಲ್ಲಿಸಿ, ಪರಿಹಾರಗಳನ್ನು ಕಂಡುಕೊಳ್ಳಬೇಕು

ಸಣ್ಣ ಪ್ರಮಾಣದ ದೋಷ ಇರುತ್ತದೆ

‘ರಾಜ್ಯ ಮತ್ತು ಸಾಂವಿಧಾನಿಕ ಸಂಸ್ಥೆ ನಡುವೆ ನಂಬಿಕೆಯ ಕೊರತೆ ಉಂಟಾದಲ್ಲಿ, ಅದನ್ನು ಪರಿಹರಿಸಲು ನ್ಯಾಯಾಂಗದ ಅಧಿಕಾರಿಗಳನ್ನು ನಿಯೋಜಿಸಲಾಗುತ್ತದೆ. ಈ ಅಧಿಕಾರಿಗಳ ಪರಿಶೀಲನೆಯಲ್ಲೂ ದೋಷ ಇದ್ದೇ ಇರುತ್ತದೆ. ನನ್ನ ಪ್ರಕಾರ ದಿನಕ್ಕೆ 1000 ದಾಖಲೆಗಳನ್ನು ಪರಿಶೀಲಿಸಿದರೆ, ಅದರಲ್ಲಿ ನಿಖರತೆ ಪ್ರಮಾಣ ಶೇ 70ರಷ್ಟು ಇರಬಹುದು. ನ್ಯಾಯಾಂಗದ ಅಧಿಕಾರಿಗಳು ಒತ್ತಡದಲ್ಲಿ ಕೆಲಸ ಮಾಡುವ ಪರಿಣಾಮದಿಂದ ಸಣ್ಣ ದೋಷಗಳು ಇರುತ್ತವೆ’ ಎಂದು ನ್ಯಾ. ಬಾಗ್ಚಿ ಹೇಳಿದರು.

'ಕೇಂದ್ರಕ್ಕಿಂತ ರಾಜ್ಯದ ಆರ್ಥಿಕತೆ ಸದೃಢ'

ಭದ್ರಾ ಹಿನ್ನೀರಿನಲ್ಲಿ ನಿರ್ಮಿಸಿರುವ ಸೇತುವೆ ಲೋಕಾರ್ಪಣೆ ನೆರವೇರಿಸಿದ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: 'ನರೇಂದ್ರ ಮೋದಿ ಅವರ 12 ವರ್ಷದಿಂದ ಪ್ರಧಾನಿಯಾಗಿದ್ದಾರೆ, ಆದರೆ ಆರ್ಥಿಕವಾಗಿ ಕೇಂದ್ರ ಸರ್ಕಾರಕ್ಕಿಂತ ರಾಜ್ಯ ಸರ್ಕಾರ ಸದೃಢವಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ನರಸಿಂಹರಾಜಪುರದಲ್ಲಿ ಭದ್ರಾ ಹಿನ್ನೀರಿನಲ್ಲಿ ನಿರ್ಮಿಸಿರುವ ಅರ್ಧ ಕಿಲೋ ಮೀಟರ್ ಉದ್ದದ ಸೇತುವೆ ಲೋಕಾರ್ಪಣೆ ಮತ್ತು ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆ, ಶಂಕುಸ್ಥಾಪನೆ, ಸವಲತ್ತುಗಳ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದರೆ ಸರ್ಕಾರ ದಿವಾಳಿಯಾಗಲಿದೆ ಎಂದು ಬಿಜೆಪಿಯವರು ಟೀಕಿಸಿದ್ದರು. ಮೂರು ವರ್ಷಗಳಿಂದ ಗ್ಯಾರಂಟಿ ಯೋಜನೆಗಳು ಜಾರಿಯಲ್ಲಿವೆ. ಈವರೆಗೆ ₹1.30 ಲಕ್ಷ ಕೋಟಿ ವೆಚ್ಚ ಮಾಡಲಾಗಿದೆ. ರಾಜ್ಯ ಆರ್ಥಿಕವಾಗಿ ದಿವಾಳಿ ಆಗಿದೆಯಾ' ಎಂದು ಪ್ರಶ್ನಿಸಿದರು.

'ರಾಜ್ಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಅಪಪ್ರಚಾರ ನಡೆಸುವ ಬಿಜೆಪಿಯವರಿಗೆ ಸುಳ್ಳೇ ಮನೆದೇವರು' ಎಂದರು.

'15ನೇ ಹಣಕಾಸು ಆಯೋಗದಲ್ಲಿ ಶಿಫಾರಸು ಮಾಡಿದ್ದ ಅನುದಾನವನ್ನು ಕೇಂದ್ರ ನೀಡಿಲ್ಲ. ಮೋದಿ ಅವರು ನೀಡಿದ ಯಾವುದೇ ಭರವಸೆ ಈಡೇರಿಸಿಲ್ಲ. ಅವರ ಒಳ್ಳೆಯ ದಿನಗಳು ಬರಲೇ ಇಲ್ಲ. ಆದರೆ, ನಮ್ಮ ಸರ್ಕಾರ ನುಡಿದಂತೆ ನಡೆದಿದೆ. ಜನರ ದಾರಿ ತಪ್ಪಿಸುವ ಬಿಜೆಪಿಯನ್ನು ನಂಬಬಾರದು' ಎಂದರು.

ಆಜಾನ್: ಭಾಷಣ ನಿಲ್ಲಿಸಿದ ಸಿ.ಎಂ

ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಷಣ ಆರಂಭಿಸಿದ ಸ್ವಲ್ಪ ಹೊತ್ತಿಗೆ ವೇದಿಕೆ ಸಮೀಪದಲ್ಲಿದ್ದ ಮಸೀದಿಯ ಧ್ವನಿವರ್ಧಕದಲ್ಲಿ ಆಜಾನ್ ಕೇಳಿತು. ಒಂದು ನಿಮಿಷ ಭಾಷಣ ನಿಲ್ಲಿಸಿದ ಸಿದ್ದರಾಮಯ್ಯ, ಆಜಾನ್ ಮುಗಿದ ನಂತರ ಮಾತು ಮುಂದುವರಿಸಿದರು.



ಉದ್ಘಾಟನೆ ಬಳಿಕ ಸಿದ್ದರಾಮಯ್ಯ ನೂತನ ಸೇತುವೆ ವೀಕ್ಷಿಸಿದರು. ಸಚಿವ ಕೆ.ಜೆ. ಜಾರ್ಜ್, ಕೆಎಸ್‌ಟಿಡಿಸಿ ಅಧ್ಯಕ್ಷ ಎಂ. ಶ್ರೀನಿವಾಸ್, ಶಾಸಕ ಟಿ.ಡಿ. ರಾಜೇಗೌಡ ಇದ್ದರು

ಸೇತುವೆಗೆ ಸಿದ್ದರಾಮಯ್ಯ ಹೆಸರು

ಭದ್ರಾ ಹಿನ್ನೀರಿನಲ್ಲಿ ನಿರ್ಮಿಸಿರುವ ಅರ್ಧ ಕಿಲೋಮೀಟರ್ ಉದ್ದದ ಸೇತುವೆಗೆ ಸಿದ್ದರಾಮಯ್ಯ ಅವರ ಹೆಸರನ್ನು ಇಡಲಾಗಿದೆ.

₹38.5 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಸೇತುವೆಯ ಆರಂಭದಲ್ಲೇ ಸಿದ್ದರಾಮಯ್ಯ ಸೇತುವೆ ಎಂಬ ಸ್ವಾಗತ ಕಮಾನು ಮತ್ತು ಪುತ್ಥಳಿ ಇದೆ.

ಸೇತುವೆ ಉದ್ಘಾಟಿಸಿದ ಸಿದ್ದರಾಮಯ್ಯ, 'ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ಶ್ರೀನಿವಾಸ್ ನನ್ನ ಸ್ನೇಹಿತ. ಅವರ ಕೋರಿಕೆಯಂತೆ ಅನುದಾನ ನೀಡಲಾಗಿತ್ತು' ಎಂದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, 'ಜಿಲ್ಲೆಯ ವಿವಿಧೆಡೆ 41 ಪ್ರಮುಖ ಸೇತುವೆಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದೆ. ಈ ಪೈಕಿ 31 ಸೇತುವೆಗಳು ಲೋಕಾರ್ಪಣೆಗೊಂಡಿವೆ. ಬಾಕಿ 10 ಸೇತುವೆಗಳ ಕಾಮಗಾರಿ ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳ್ಳಲಿವೆ' ಎಂದು ಹೇಳಿದರು.

ನೀರಾನೆ 'ಹಂಸಿಣಿ' ಆರೋಗ್ಯ ಸ್ಥಿತಿ ಗಂಭೀರ

ಪ್ರಜಾವಾಣಿ ವಾರ್ತೆ



ಶಿವಮೊಗ್ಗ: ಇಲ್ಲಿನ ತ್ಯಾವರೆಕೊಪ್ಪ ಹುಲಿ ಸಿಂಹಧಾಮದಲ್ಲಿ ಈಚೆಗೆ ತರಬೇತಿ ನಿರತ ಪಶು ವೈದ್ಯೆ ಡಾ. ಸಮೀಕ್ಷಾ ರೆಡ್ಡಿ ಅವರ ಸಾವಿಗೆ ಕಾರಣವಾಗಿದ್ದ ನೀರಾನೆ ಹಂಸಿಣಿಯ ಆರೋಗ್ಯ ಸ್ಥಿತಿ ಗಂಭೀರವಾಗಿದೆ.

ಎಂಟು ವರ್ಷ ವಯಸ್ಸಿನ 'ಹಂಸಿಣಿ' ದಿನ ತುಂಬಿದರೂ ಪ್ರಸವವಾಗದೇ ಮರಿ ಹೊಟ್ಟೆಯಲ್ಲಿಯೇ ಮೃತಪಟ್ಟಿದೆ. ಮೃತ ಮರಿಯನ್ನು ಹೊರ ತೆಗೆಯುವುದು ಸಾಧ್ಯವಾಗದ್ದರಿಂದ ಸೋಂಕಿಗೆ ತುತ್ತಾಗಿದೆ.

ಆಹಾರ ಸೇವಿಸುವುದನ್ನೇ ಬಿಟ್ಟಿರುವ 'ಹಂಸಿಣಿ' ಆರೋಗ್ಯ ಸ್ಥಿತಿ ಗಂಭೀರವಾಗುತ್ತಿದೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಪಶು ವೈದ್ಯರು ಚಿಕಿತ್ಸೆ ನೀಡುತ್ತಿದ್ದಾರೆ. ನೀರಾನೆ ಬಡಕಲಾಗಿದ್ದು, ಸೋಮವಾರದಿಂದ ಪೋಲ್ ಸಿರಿಂಜ್ ಮೂಲಕ ಆಹಾರ ಮತ್ತು ಔಷಧಿ ಕೊಡಲಾಗುತ್ತಿದೆ' ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಮರಾಕ್ಷರ ತಿಳಿಸಿದ್ದಾರೆ.

'ಹಂಸಿಣಿಯ ಆರೋಗ್ಯ ಸುಧಾರಣೆಗೆ ಗರ್ಭದಲ್ಲೇ ಮೃತಪಟ್ಟಿರುವ ಮರಿಯನ್ನು ಶಸ್ತ್ರಚಿಕಿತ್ಸೆ ಮೂಲಕ ಹೊರತೆಗೆಯಬೇಕಿದೆ. ಶಸ್ತ್ರಚಿಕಿತ್ಸೆಗೆ ಅಗತ್ಯವಿರುವ ಉಪಕರಣ ಹಾಗೂ ತಜ್ಞರ ತಂಡ ಒಳಗೊಂಡ ಅಗತ್ಯ ಸೌಲಭ್ಯ ಗುಜರಾತ್‌ನಲ್ಲಿರುವ ಮುಖೇಶ್ ಅಂಬಾನಿ ಒಡೆತನದ ವಂತಾರ ವನ್ಯಧಾಮದಲ್ಲಿ ಮಾತ್ರ ಇದೆ. ಇದು ಹಂಸಿಣಿಯ ಆರೋಗ್ಯ ರಕ್ಷಣೆ ವಿಚಾರದಲ್ಲಿ ಸವಾಲಾಗಲಿಕ್ಕೆ ಕಾರಣವಾಗಿದೆ' ಎಂದು ಮೂಲಗಳು ತಿಳಿಸಿವೆ.

ಗರ್ಭಿಣಿ ಆಗಿದ್ದ ಹಂಸಿಣಿ ಆಹಾರ ಸೇವಿಸುತ್ತಿಲ್ಲ ಎಂಬ ಕಾರಣಕ್ಕೆ ಮಾರ್ಚ್ 19ರ ರಾತ್ರಿ ಡಾ.ಸಮೀಕ್ಷಾ ಅದರ ಆರೋಗ್ಯ ತಪಾಸಣೆಗೆ ಮುಂದಾಗಿದ್ದರು. ಆಗ ನೀರಾನೆ ದಾಳಿ ನಡೆಸಿತ್ತು. ಗಾಯಗೊಂಡಿದ್ದ ಅವರು ಶಿವಮೊಗ್ಗದ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು.

'ಹಂಸಿಣಿ'ಗೆ ಗರ್ಭಪಾತ ಆಗಿದೆ ಎಂದು ಮೂಲಗಳು ತಿಳಿಸಿದ್ದವು. ಆದರೆ, ಪ್ರಸವ ಪೂರ್ವದಲ್ಲೇ ಮರಿ ಗರ್ಭದಲ್ಲೇ ಮೃತಪಟ್ಟಿದ್ದರಿಂದ ಆರೋಗ್ಯ ಸ್ಥಿತಿ ಹದಗೆಡುತ್ತಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಫೈರೋಜ್ ಕೊಲೆ: 9 ಆರೋಪಿಗಳು ಸೆರೆ

ಧಾರವಾಡ: 'ಕಾಂಗ್ರೆಸ್ ಯುವ ಮುಖಂಡ ಫೈರೋಜ್ ಖಾನ್ ಕೊಲೆ ಪ್ರಕರಣ ಸಂಬಂಧ 9 ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಹುಬ್ಬಳ್ಳಿ ಧಾರವಾಡ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ತಿಳಿಸಿದರು.

'ಬಂಧಿತರನ್ನು ಕೋರ್ಟ್‌ಗೆ ಹಾಜರುಪಡಿಸಿದ್ದು, ಕೋರ್ಟ್ ಎಲ್ಲರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ವೈಯಕ್ತಿಕ ಸಂಘರ್ಷ ಕಾರಣವೆಂದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. 'ಕೆಲ ಆರೋಪಿಗಳಿಗೆ ಅಪರಾಧ ಹಿನ್ನೆಲೆ ಇದೆ. ತಲೆ ಮರೆಸಿಕೊಂಡಿರುವ ಇನ್ನು ಕೆಲವರಿಗೆ ಶೋಧ ನಡೆದಿದೆ' ಎಂದರು.

ಬಳ್ಳಾರಿ, ವಿಜಯನಗರ ಜಿಲ್ಲೆಯಲ್ಲಿ ಮಳೆ

ಹುಬ್ಬಳ್ಳಿ: ವಿಜಯನಗರ, ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಯ ವಿವಿಧೆಡೆ ಭಾನುವಾರ ಮಧ್ಯರಾತ್ರಿ ಮತ್ತು ಸೋಮವಾರ ಗುಡುಗು, ಸಿಡಿಲು ಸಹಿತ ಮಳೆ ಸುರಿಯಿತು.

ವಿಜಯನಗರ ಜಿಲ್ಲೆ ಕೂಡ್ಲಿಗಿ ಮತ್ತು ಕೊಟ್ಟೂರು ತಾಲ್ಲೂಕುಗಳಲ್ಲಿ ಮಳೆ ಸುರಿಯಿತು. ಕೂಡ್ಲಿಗಿಯ ಗುಣಸಾಗರದಲ್ಲಿ ಸಿಡಿಲು ಬಡಿದು ಎತ್ತು ಮೃತಪಟ್ಟಿತು. ಅಮರದೇವರಗುಡ್ಡ ಗೊಲ್ಲರಹಟ್ಟಿ ಗ್ರಾಮದಲ್ಲಿ ಪಪ್ಪಾಯಿ ಬೆಳೆಗೆ ಹಾನಿಯಾಯಿತು. ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ ಸುಲ್ತಾನಾಪುರ, ಚಿಕ್ಕ ಅಂತಾಪುರ ಗ್ರಾಮಗಳಲ್ಲಿ ಮಳೆ ಸುರಿಯಿತು. ಧಾರವಾಡ ಜಿಲ್ಲೆಯ ನವಲಗುಂದ, ಹುಬ್ಬಳ್ಳಿ ಸುತ್ತಮುತ್ತ ಮಳೆ ಆಗಿದೆ.

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ಅಸ್ಪೃಶ್ಯರು ಸೇರಿದಂತೆ ಎಲ್ಲಾ ಶೋಷಿತ ವರ್ಗಗಳು ಮೊದಲು ಒಗ್ಗಟ್ಟಾಗಿ; ಕ್ಷುಲ್ಲಕ ಸ್ವಾರ್ಥಕ್ಕಾಗಿ ವಿಭಜನೆಗೊಳ್ಳಬೇಡಿ.
–ಬಿ.ಆರ್. ಅಂಬೇಡ್ಕರ್

ಸಂಪಾದಕೀಯ

ದಾಖಲೆ ಪ್ರಮಾಣದಲ್ಲಿ ಮತದಾನ ಪ್ರಜಾಪ್ರಭುತ್ವ ವ್ಯವಸ್ಥೆಗೆ ಹುರುಪು

ಕೇರಳ, ಅಸ್ಸಾಂ, ಪುದುಚೇರಿಯಲ್ಲಿ ಕಳೆದ ಗುರುವಾರ (ಏಪ್ರಿಲ್ 9) ನಡೆದ ವಿಧಾನಸಭಾ ಚುನಾವಣೆಯಲ್ಲಿ ನಡೆದಿರುವ ದಾಖಲೆ ಪ್ರಮಾಣದ ಮತದಾನ, ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದನ್ನು ಮತದಾರರು ಗಂಭೀರವಾಗಿ ಪರಿಗಣಿಸಿರುವುದರ ಸೂಚನೆಯಂತಿದೆ. ಶೇ 78.27ರಷ್ಟು ಮತದಾನ ಆಗಿರುವ ಕೇರಳವು ಮೊದಲಿನಿಂದಲೂ ಚುನಾವಣಾ ಪ್ರಕ್ರಿಯೆಯಲ್ಲಿ ಮತದಾರರು ಉತ್ಸಾಹದಿಂದ ಭಾಗವಹಿಸುವುದಕ್ಕೆ ಪ್ರಸಿದ್ಧವಾದ ರಾಜ್ಯ. 2021ರ ಚುನಾವಣೆಯಲ್ಲಿ ನಡೆದಿದ್ದ ಶೇ 74.06ರಷ್ಟು ಮತದಾನಕ್ಕೆ ಹೋಲಿಸಿದರೆ ಈ ಬಾರಿ ಮತದಾನ ಪ್ರಮಾಣ ಶೇ 4ರ ಜಿಗಿತ ದಾಖಲಿಸಿದೆ. ಪುದುಚೇರಿಯಲ್ಲಿ ದಾಖಲಾಗಿರುವ ಶೇ 89.87ರಷ್ಟು ಮತದಾನ, ಆ ಕೇಂದ್ರಾಡಳಿತ ಪ್ರದೇಶದ ಚುನಾವಣಾ ಚರಿತ್ರೆಯಲ್ಲಿಯೇ ಗರಿಷ್ಠ ಪ್ರಮಾಣದ್ದಾಗಿದೆ. ಅಸ್ಸಾಂ ಕೂಡ ಅದರ ಚುನಾವಣಾ ಇತಿಹಾಸದಲ್ಲಿ ಗರಿಷ್ಠ ದಾಖಲೆಯಾದ ಶೇ 85ರಷ್ಟು ಮತ ಚಲಾವಣೆಯನ್ನು ಕಂಡಿದೆ. ಮತದಾನ ಪ್ರಮಾಣದಲ್ಲಿನ ಹೆಚ್ಚಳಕ್ಕೆ ಕಾರಣಗಳು ಹಾಗೂ ಅದರಿಂದ ಫಲಿತಾಂಶದ ಮೇಲೆ ಆಗಬಹುದಾದ ಪರಿಣಾಮಗಳ ಬಗ್ಗೆ ಚರ್ಚೆಗಳು ಮತ್ತು ವಿಶ್ಲೇಷಣೆಗಳು ನಡೆಯುತ್ತಿವೆ. ಆದರೆ, ಮತದಾನ ಪ್ರಮಾಣದಲ್ಲಿನ ಗಣನೀಯ ಹೆಚ್ಚಳವನ್ನು ಆಡಳಿತ ವಿರೋಧಿ ಅಲೆಯ ರೂಪದಲ್ಲಿ ನೋಡುವ ಸಾಮಾನ್ಯ ಪರಿಕಲ್ಪನೆಯು ಎಲ್ಲ ಸಂದರ್ಭಗಳಲ್ಲೂ ಸರಿಯಾಗಿರಲಾರದು ಎನ್ನುವುದು ಈಗಾಗಲೇ ಹಲವು ಬಾರಿ ಸಾಬೀತಾಗಿದೆ.


ಮತದಾನ ಪ್ರಮಾಣ ಹೆಚ್ಚಳಕ್ಕೆ ಕಾರಣಗಳನ್ನು ಸದ್ಯದ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುವುದು ಸಾಧ್ಯವಿಲ್ಲ. ಆದರೆ, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯು (ಎಸ್‌ಐಆರ್) ಮತ ಚಲಾವಣೆ ಪ್ರಮಾಣ ಹೆಚ್ಚಾಗಲಿಕ್ಕೆ ಕಾರಣಗಳಲ್ಲೊಂದು ಎಂದು ಹೇಳುವುದು ತಪ್ಪಾಗಲಾರದು. ಎಸ್‌ಐಆರ್ ಪ್ರಕ್ರಿಯೆಯು ಕೇರಳದಲ್ಲಿ ಶೇ 3.2ರಷ್ಟು ಹಾಗೂ ಪುದುಚೇರಿಯಲ್ಲಿ ಶೇ 7.5ರಷ್ಟು ಮತದಾರರ ಸಂಖ್ಯೆಯನ್ನು ಕಡಿಮೆಗೊಳಿಸಿದೆ. ಮತದಾರರ ಪಟ್ಟಿಯಿಂದ ಹೊರಬಿದ್ದವರಲ್ಲಿ, ಮೃತಪಟ್ಟವರು, ನಕಲಿ ನಮೂದುಗಳು ಮತ್ತು ಅಗತ್ಯ ದಾಖಲೆಗಳನ್ನು ಸಲ್ಲಿಸಲು ವಿಫಲರಾದವರು ಸೇರಿದ್ದಾರೆ. ಹೀಗೆ ಮತದಾರರ ಪಟ್ಟಿಯು ಕುಗ್ಗಿರುವುದು ಮತದಾನದ ಪ್ರಮಾಣ ಹೆಚ್ಚಾಗುವುದಕ್ಕೆ ಒಂದು ಕಾರಣವಾಗಿದೆ. ಮತಪಟ್ಟಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಹೆಸರುಗಳನ್ನು ತೆಗೆದುಹಾಕಿರುವ ಪುದುಚೇರಿಯಲ್ಲಿ, ಕೇರಳಕ್ಕಿಂತಲೂ ಹೆಚ್ಚಿನ ಶೇಕಡಾವಾರು ಮತದಾನ ಆಗಿರುವುದು ಗಮನಾರ್ಹ. ಕೇರಳದ ಕೆಲವು ಕ್ಷೇತ್ರಗಳಲ್ಲಿ ಹೆಚ್ಚಿನ ಪ್ರಮಾಣದ ಮತದಾನ ಆಗಿದ್ದರೂ, ಚಲಾವಣೆಯಾದ ಮತಗಳ ಸಂಖ್ಯೆಯಲ್ಲೇನೂ ಹೆಚ್ಚಳವಾಗಿಲ್ಲ. ಕೇರಳ ಹಾಗೂ ಪುದುಚೇರಿಗೆ ಹೋಲಿಸಿದರೆ ಅಸ್ಸಾಂನಲ್ಲಿ ಎಸ್‌ಐಆರ್ ಪ್ರಕ್ರಿಯೆ ಹೆಚ್ಚು ಕಟ್ಟುನಿಟ್ಟಾಗಿರಲಿಲ್ಲ. ವಲಸೆ ಮತ್ತು ಪೌರತ್ವ ಹಕ್ಕುಗಳ ವಿಶೇಷ ಪರಿಸ್ಥಿತಿಯಿಂದಾಗಿ ಅಸ್ಸಾಂನಲ್ಲಿ ಮತದಾರರ ಪಟ್ಟಿಗಳಿಂದ ಶೇ 10ರಷ್ಟು ಹೆಸರುಗಳನ್ನು ಮಾತ್ರ ತೆಗೆದುಹಾಕಲಾಗಿದೆ. ಅದರೂ ಅಲ್ಲಿ ಮತದಾನ ಪ್ರಮಾಣದಲ್ಲಿ ಗಣನೀಯ ಹೆಚ್ಚಳವಾಗಿರುವುದು ಗಮನಾರ್ಹ.



ಕೇರಳ, ಅಸ್ಸಾಂ, ಪುದುಚೇರಿ ಚುನಾವಣೆಗಳಲ್ಲಿನ ದಾಖಲೆ ಮತದಾನಕ್ಕೆ ಕಾರಣಗಳು ಅಸ್ಪಷ್ಟವಾದರೂ, ಈ ಬೆಳವಣಿಗೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸ್ಫೂರ್ತಿ ತುಂಬುವಂತಿದೆ.

ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕುವ ಎಸ್‌ಐಆರ್ ಪ್ರಕ್ರಿಯೆಯು ಮೂಡಿಸಿರಬಹುದಾದ ಎಚ್ಚರವು, ಹೆಚ್ಚಿನ ಮತದಾರರು ತಮ್ಮ ಹಕ್ಕನ್ನು ಚಲಾಯಿಸುವುದಕ್ಕೆ ಪ್ರೇರಣೆ ಆಗಿರಬಹುದು. ಇದಕ್ಕೆ ಉದಾಹರಣೆಯೆಂದರೆ, ದೊಡ್ಡ ಸಂಖ್ಯೆಯ ವಲಸೆ ಕಾರ್ಮಿಕರು ರಾಜ್ಯಕ್ಕೆ ಹಿಂದಿರುಗಿ ಮತ ಚಲಾಯಿಸುವ ಬೆಳವಣಿಗೆ ಅಸ್ಸಾಂನಲ್ಲಿ ನಡೆದಿದೆ. ಆದರೆ, ಇರಾನ್ ಹಾಗೂ ಅಮೆರಿಕ–ಇಸ್ರೇಲ್ ನಡುವಿನ ಯುದ್ಧದಿಂದಾಗಿ ವಾಯುಯಾನದಲ್ಲಿ ಉಂಟಾಗಿರುವ ವ್ಯತ್ಯಯದಿಂದಾಗಿ, ಗಲ್ಫ್ ರಾಷ್ಟ್ರಗಳಲ್ಲಿ ವಾಸಿಸುತ್ತಿರುವ ಕೇರಳದ ಹಲವು ಮತದಾರರಿಗೆ ತವರಿಗೆ ಬಂದು ಮತದಾನ ಮಾಡುವುದು ಸಾಧ್ಯವಾಗಿಲ್ಲ. ಮತದಾನ ಪ್ರಮಾಣದಲ್ಲಿನ ಜಿಗಿತವು ತಮಗೆ ಅನುಕೂಲಕರ ಫಲಿತಾಂಶ ಕಲ್ಪಿಸಲಿದೆ ಎಂದು ಪ್ರಸ್ತುತ ಎಲ್ಲ ರಾಜಕೀಯ ಪಕ್ಷಗಳು ಹೇಳಿಕೊಳ್ಳುತ್ತಿವೆ. ಆದರೆ, ಯಾರ ನಿರೀಕ್ಷೆ ನಿಜವಾಗಲಿದೆ ಎನ್ನುವುದನ್ನು ತಿಳಿಯಲು ಮೇ 4ರ ಫಲಿತಾಂಶದವರೆಗೂ ಕಾಯಬೇಕಾಗಿದೆ. ಫಲಿತಾಂಶ ಏನೇ ಆಗಿರಲಿ, ಮತದಾನ ಪ್ರಮಾಣದಲ್ಲಿನ ಹೆಚ್ಚಳವು ಪ್ರಜಾಪ್ರಭುತ್ವ ವ್ಯವಸ್ಥೆಗೆ ಉತ್ಸಾಹ ತುಂಬುವಂತಿದೆ.

ಕನ್ನಡದ ಲಯಬಹುತ್ವ



ಬೀದಿಯೇ ಭಾಷೆಯ ಚೆಲುವಿನ ಪ್ರದರ್ಶನದ ಸರಿಯಾದ ರಂಗಭೂಮಿ. ಈ ಬೀದಿರಂಗದಲ್ಲಿದ್ದು ಆಲಿಸುತ್ತ ಹೋದರೆ ಕರ್ನಾಟಕದಲ್ಲಿ ಕನ್ನಡಂಗಳ್ ಇರುವುದರ, ಪ್ರತಿಯೊಂದು ಪ್ರದೇಶದ ಕನ್ನಡಕ್ಕೆ ತನ್ನದೇ ಆದ ಲಯಗಾರಿಕೆ ಇರುವುದರ ಕಿಂಚಿತ್ ದರ್ಶನವಾಗುತ್ತದೆ. ಈ ಲಯಬಹುತ್ವ ಎಲ್ಲ ನುಡಿಗಳ ಮಟ್ಟಿಗೂ ದಿಟ.

ರಹಮತ್ ತರೀಕೆರೆ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



'ನಾರಿ ಶಕ್ತಿ ವಂದನ್ ಅಧಿನಿಯಮ'ವನ್ನು ಚುನಾವಣೆ ಗಿಮಿಕ್ ಎಂದು ಕರೆದಿರುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷರ ಹೇಳಿಕೆ ಆ ಪಕ್ಷದ ಅಸಲಿ ಮುಖವಾಡವನ್ನು ಬಯಲು ಮಾಡಿದೆ. ಶಾಸನಸಭೆಗಳಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ನೀಡದೆ ಅವರನ್ನು ಮತಬ್ಯಾಂಕ್ ಆಗಿ ಮಾತ್ರ ಬಳಸಿಕೊಂಡ ಕಾಂಗ್ರೆಸ್‌ಗೆ, ಈಗ ಈ ಐತಿಹಾಸಿಕ ಮೈಲಿಗಲ್ಲನ್ನು ಸಹಿಸಲು ಸಾಧ್ಯವಾಗುತ್ತಿಲ್ಲ.

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಶನಿವಾರ, 14-4-2001

● **ತೆಹಲ್ಕಾ ಹಿಂದೆ ಹಿಂದೂಜಾ ಕೈವಾಡ: ಜಾರ್ಜ್ ಆರೋಪ**

ರಾಂಚಿ, ಏ. 13 (ಯುಎನ್‌ಐ)– ರಕ್ಷಣಾ ಹಗರಣದ ಹಿನ್ನೆಲೆಯಲ್ಲಿ ಹಿಂದೂಜಾಗಳ ಕೈವಾಡವಿದೆ ಎಂದು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ (ಎನ್‌ಡಿಎ) ಸಂಚಾಲಕ ಜಾರ್ಜ್ ಫರ್ನಾಂಡಿಸ್ ಇಂದು ಆರೋಪಿಸಿದ್ದಾರೆ.

ಇಡೀ ಹಗರಣ ಬೋಫೋರ್ಸ್ ಪ್ರಕರಣದ ಹಿನ್ನೆಲೆಯಲ್ಲಿ ಜರುಗಿದೆ ಎಂದು ಅವರು ಆಪಾದಿಸಿದರು.

ಇದರ ಹಿಂದೆ ಶಸ್ತ್ರಾಸ್ತ್ರ ಮಾರಾಟಗಾರರ ಭಾರಿ ಲಾಬಿ ಇದೆ. 1989ರಿಂದ ನಡೆದ ಶಸ್ತ್ರಾಸ್ತ್ರ ವ್ಯವಹಾರಗಳ ಬಗ್ಗೆ ನಡೆಯುತ್ತಿರುವ ತನಿಖೆಯ ಪರಿಣಾಮಗಳಿಗೆ ಹೆದರಿದಂತಹವರು ತೆಹಲ್ಕಾ ರಕ್ಷಣಾ ಹಗರಣ ಸೃಷ್ಟಿಸಿದ್ದಾರೆ ಎಂದು ಅಭಿಪ್ರಾಯಪಟ್ಟರು.

● **ಮೂರು ತಿಂಗಳಲ್ಲಿ ಸಾರಿಗೆ 'ಸ್ಮಾರ್ಟ್ ಕಾರ್ಡ್' ಲಭ್ಯ**

ಬೆಂಗಳೂರು, ಏ. 13– ಈ ವರ್ಷದ ಬಜೆಟ್‌ನಲ್ಲಿ ಘೋಷಿಸಿರುವಂತೆ ರಿಜಿಸ್ಟ್ರೇಷನ್, ಚಾಲನಾ ಪರವಾನಗಿ, ವಿಮೆ, ಚೆಕ್‌ಪೋಸ್ಟ್‌ಗಳ ಪ್ರವೇಶ, ನಿಯಂತ್ರಣ ಕಾರ್ಯಗಳು, ಜಾರಿಗೊಳಿಸುವುದು ಮತ್ತಿತರ ವಿವರಗಳನ್ನು ಒಳಗೊಂಡಿರುವ, ನಕಲಿ ಮಾಡಲು ಸಾಧ್ಯವಾಗದ 'ಸ್ಮಾರ್ಟ್ ಕಾರ್ಡ್' ಅನ್ನು ಸಾರ್ವಜನಿಕರಿಗೆ ಮೂರು ತಿಂಗಳೊಳಗೆ ಒದಗಿಸಲು ಸಾರಿಗೆ ಇಲಾಖೆಯು ಕ್ರಮಕೈಗೊಂಡಿದೆ.

75 ವರ್ಷಗಳ ಹಿಂದೆ

ಶನಿವಾರ, 14-4-1951

● **ಬರೋಡ ರಾಜರಿಗೆ ಸ್ಥಾನ ಭ್ರಷ್ಟತೆ**

ನವದೆಹಲಿ, ಏ. 13– ಭಾರತ ಸರ್ಕಾರ ಬರೋಡದ ಅರಸರಾದ ಮಹಾರಾಜಾ ಪ್ರತಾಪ್‌ಸಿಂಗ್ ಗಾಯಕವಾಡರಿಗಿತ್ತಿರುವ ಮನ್ನಣೆಯನ್ನು ವಾಪಸು ತೆಗೆದುಕೊಂಡಿದ್ದಾರೆ ಎಂದು ಖಚಿತವಾಗಿ ತಿಳಿದುಬಂದಿದೆ. ಈ ಬಗ್ಗೆ ಮಹಾರಾಜರಿಗೂ ತಿಳಿವಳಿಕೆ ಕೊಡಲಾಗಿದೆ.

ಗಾಯಕವಾಡರ 21 ವಯಸ್ಸಿನ ಜ್ಯೇಷ್ಠ ಪುತ್ರ ಫತೆಸಿಂಗರನ್ನು ಬರೋಡದ ರಾಜರಾಗಿ ನೇಮಿಸಲು ಭಾರತ ಸರ್ಕಾರ ನಿರ್ಧರಿಸಿದೆ. ಈ ವಿಷಯವನ್ನು ನಾಳೆ ಪಾರ್ಲಿಮೆಂಟಿನಲ್ಲಿ ಅಧಿಕೃತವಾಗಿ ಪ್ರಕಟಿಸಲಾಗುವುದು.

● **ಗೋಧಿ ಯಾರು ಕೊಟ್ಟರೂ ಬೇಕು!**

ಮುಂಬಯಿ, ಏ. 13– ರಷ್ಯಾ ಗೋಧಿಯನ್ನು ಸ್ವೀಕರಿಸುವ ಪ್ರಶ್ನೆಯನ್ನು ಭಾರತ ಸರ್ಕಾರ ಪರಿಶೀಲಿಸುತ್ತಿದೆಯೆಂದೂ ಯಾವ ರಾಷ್ಟ್ರ ಗೋಧಿಯನ್ನು ಕೊಟ್ಟರೂ ಸ್ವೀಕರಿಸುವುದಾಗಿಯೂ ಕೇಂದ್ರದ ಆಹಾರ ಸಚಿವರಾದ ಕೆ.ಎಂ. ಮುನ್ಷಿ ಅವರು ಇಂದು ಇಲ್ಲಿ ಮಾಹಿತಿ ಒದಗಿಸಿದರು.

ಅಂಬೇಡ್ಕರ್: ಇಂದಿಗೆ–ನಾಳೆಗೆ



ವಿಶ್ಲೇಷಣೆ

ನಾಗತಿಹಳ್ಳಿ ಚಂದ್ರಶೇಖರ

ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಮುಟ್ಟಿಸಿಕೊಳ್ಳಲು ಹಿಂಜರಿಯುವ ವರ್ತಮಾನದಲ್ಲಿ, ಮನಸ್ಸುಗಳು ಒಂದಾಗುವುದು ಹೇಗೆ? ನಮ್ಮ ಸಣ್ಣತನಗಳನ್ನು ನೀಗಿಕೊಳ್ಳಲು ಹಾಗೂ ವರ್ತಮಾನದ ಬಹುತೇಕ ಸಂಕಷ್ಟಗಳ ಕುದಿಗೆ ಬಾಬಾಸಾಹೇಬ್ ಅಂಬೇಡ್ಕರ್ ಅವರ ಬದುಕು ಮತ್ತು ವಿಚಾರಗಳಲ್ಲಿ ಉತ್ತರವಿದೆ.

ಅದು ಪೋಲೆಂಡ್‌ನ ವಾರ್ಸಾದ ಸಿಟಿ ಬಸ್ಸು. ಕಟ್ಟುಮಸ್ತಾಗಿದ್ದ ಕಪ್ಪು ಜೋಡಿಯೊಂದು ಬಸ್ಸೇರಿತು. ನನ್ನನ್ನು ಹೊರತುಪಡಿಸಿ ಬಸ್ಸಿನಲ್ಲಿದ್ದ ಪ್ರಯಾಣಿಕರೆಲ್ಲ ಬಿಳಿಯರೇ. ಬಿಳಿಯನ ಪಕ್ಕದಲ್ಲಿ ಒಂದು ಸೀಟು ಖಾಲಿ ಇತ್ತು. ಅಲ್ಲಿ ಕಪ್ಪು ಹುಡುಗ ಕುಳಿತ. ಕೂಡಲೇ ಆ ಬಿಳಿಯ, ಬೆಂಕಿ ತುಳಿದವನಂತೆ ಎದ್ದು ನಿಂತ. ಕಪ್ಪು ಹುಡುಗಿ ತನ್ನ ಗೆಳೆಯನ ಬದಿ ಕುಳಿತಳು. ಒಂದೂ ಮಾತಾಡದೆ ಮೌನವಾಗಿ ಆಚರಿಸಿದ ಆ ವರ್ಣಭೇದ, ಸೂಕ್ಷ್ಮ ಮನಸ್ಸುಳ್ಳವರಿಗೆ ತಿಳಿಯುವಂತಿತ್ತು. ಸೀಟು ಬಿಟ್ಟುಕೊಟ್ಟ ಬಿಳಿಯ, ಆ ಜೋಡಿಯನ್ನು ತಿರಸ್ಕಾರದಿಂದ ನೋಡುತ್ತಿದ್ದ. ಆ ಕಪ್ಪು ಹುಡುಗ ಸಿಡಿದೆದ್ದ. 'ಯಾಕೆ ಹಾಗೆ ವಕ್ರವಾಗಿ ನೋಡುತ್ತಿದ್ದಿ? ನಾನೂ ನಿನ್ನಂತೆ ಮನುಷ್ಯ. ಒಬ್ಬನೇ ದೇವರು ಇಬ್ಬರನ್ನೂ ಸೃಷ್ಟಿಸಿರೋದು...' ಇತ್ಯಾದಿ ಶುರು ಮಾಡಿದವನು ಅಶ್ಲೀಲ ಪದಗಳನ್ನು ಬಳಸಿ ಹಿಗ್ಗಾಮುಗ್ಗಾ ಬೈದ. ಬಿಳಿಯ ಪೆಚ್ಚಾದ. ಅವನ ನೆರವಿಗೆ ಬಸ್ಸಿನಲ್ಲಿದ್ದ ಯಾವ ಬಿಳಿಯನೂ ಬರಲಿಲ್ಲ.

ಕಪ್ಪು ಹುಡುಗನ ಉಚ್ಚಾರಣೆ ಗಮನಿಸಿದಾಗ ಅವನು ಅಮೆರಿಕನ್ ಪ್ರಜೆ ಅನ್ನಿಸಿತು. ಅವನ ಪ್ರತಿಭಟನೆ ಇಷ್ಟವಾಯಿತು. ಬಹುಸಂಖ್ಯಾತ ಬಿಳಿಯರಿಗೆ, ಅವರ ನೆಲದಲ್ಲೇ ತಪ್ಪು ಎತ್ತಿತೋರಿಸಿ ಆ ಜೋಡಿ ಇಳಿದುಹೋಯಿತು. ಉದ್ಯಾನ, ಈಜುಕೊಳ, ಸಾರ್ವಜನಿಕ ಸಾರಿಗೆ ಇಂಥ ಕಡೆ ಬರಿಯ ನೋಟದಿಂದ ಅವಮಾನಕ್ಕೊಳಗಾಗುವ ಅನುಭವ ನನಗೆ ಬಹಳ ಸಲ ಆಗಿದೆ. ತಿರಸ್ಕಾರದ ನೋಟಕ್ಕೂ ತಿರುಗಿ ಬೀಳುವ ಪ್ರತಿಭಟನೆಯನ್ನು ಮೊದಲ ಬಾರಿಗೆ ಕಂಡೆ. ಈ ಬಗೆಯ ವಕ್ರನೋಟವು ಕಾನೂನಿನ ದೃಷ್ಟಿಯಲ್ಲಿ ಅಪರಾಧವೋ ಅಲ್ಲವೋ ಕಾಣೆ. ಆದರೆ, ನಾಗರಿಕ ನಡವಳಿಕೆಯಲ್ಲಿ ಅಪರಾಧ.

'ಮುಟ್ಟಿಸಿಕೊಳ್ಳಬಾರದು' ಎನ್ನುವುದು ಕೇವಲ ದೈಹಿಕ ಸ್ವಚ್ಛತೆಗೆ ಸಂಬಂಧಿಸಿದ್ದಲ್ಲ; ಅದೊಂದು ಮಾನಸಿಕ ರೋಗ. ಹಳ್ಳಿಗಾಡಿನಲ್ಲಿ ವಾಚ್ಯವಾಗಿದ್ದರೆ, ನಗರಗಳಲ್ಲಿ ಸೂಚ್ಯವಾಗಿ ಕಾಣುವ ರೋಗ. ಎರಡೂ ಸಮಾನ ಅಪಾಯಕಾರಿಗಳೇ. ಹಳ್ಳಿಗಾಡಿನಲ್ಲಿ ಜಾತಿ ನಿಂದೆಯು ಕೇರಿಗಳಲ್ಲಿ ಪ್ರತ್ಯೇಕ ವಾಸ, ಕುಡಿಯುವ–ಬಳಸುವ ನೀರಿಗೆ ನಿಷೇಧ, ದೇವಾಲಯ ಪ್ರವೇಶ ನಿರ್ಬಂಧ, ಕ್ಷೌರ ಮಾಡುವುದಕ್ಕೆ ತಾರತಮ್ಯ, ಮರ್ಯಾದೆಗೇಡು ಹತ್ಯೆ ಇತ್ಯಾದಿಗಳ ರೂಪದಲ್ಲಿ ವ್ಯಕ್ತವಾಗುತ್ತದೆ. ನಗರಗಳಲ್ಲಿ, ಬಾಡಿಗೆಗೆ ಮನೆ ಕೊಡಲೂ ಜಾತಿ ಕೇಳುವ, ಸಾಂಸ್ಕೃತಿಕವಾಗಿ ದೂರ ಇರಿಸುವ ಹಲವು ಬಗೆಯಲ್ಲಿ ಸೂಚ್ಯವಾಗಿ ವ್ಯಕ್ತವಾಗುತ್ತದೆ. ಶ್ರೀಮಂತ ಮತ್ತು ಅಧಿಕಾರಸ್ಥ ದಲಿತ ಮಾತ್ರ ಕೊಂಚಮಟ್ಟಿಗೆ ಇವುಗಳಿಂದ ಪಾರಾಗಬಲ್ಲ. ಕೆಳಜಾತಿಯವನು ಬಡವನೂ ಆಗಿದ್ದರೆ ಹಳ್ಳಿಯಾಗಲೀ ನಗರವಾಗಲೀ ನರಕವೇ.

ಬಡತನವು ಆರ್ಥಿಕ ಸ್ಥಿತಿಯಾದ್ದರಿಂದ ಬದಲಾಗುವ ಸಾಧ್ಯತೆ ಉಳ್ಳದ್ದು. ಆದರೆ, ಜಾತಿ ಬೆನ್ನಿಗಂಟಿದ ಶಾಪ. ಎಂದೂ ಬದಲಾಗದ್ದು. ಭಾರತದಲ್ಲಂತೂ ಇದು ಕಠೋರ ವಾಸ್ತವಗಳಿಂದ ಹಬ್ಬಿರುವ ಹೆಣಿಗೆ. ಸಂತರು, ದಾರ್ಶನಿಕರು, ಶರಣರು, ಬರಹಗಾರರು, ಕಲಾಕಾರರು ಮತ್ತು ಬದ್ಧತೆಯುಳ್ಳ ರಾಜಕಾರಣಿಗಳು ಕಾಲಕಾಲಕ್ಕೆ ಅಸ್ಪೃಶ್ಯತೆಯ ವಿರುದ್ಧ ದನಿ ಎತ್ತಿದ್ದಾರೆ. ಸಂವಿಧಾನವಿದೆ. ತತ್ತ್ವಗಳಿವೆ. ಇಲಾಖೆಗಳಿವೆ. ಪರಿಸ್ಥಿತಿ ಮೊದಲಿಗಿಂತ ಸುಧಾರಿಸಿದೆ ಎಂದು ಮೇಲ್ನೋಟಕ್ಕೆ ಕಂಡರೂ ಜಾತಿಯ ಕಂದರಗಳು ಅಲ್ಲಲ್ಲಿ ಹಾಗೆಯೇ ಇವೆ.

ಮನುಷ್ಯ ಮನುಷ್ಯನನ್ನು ಮನುಷ್ಯನಂತೆ ಪರಿಭಾವಿಸಿ ಸಮಾನತೆಯಿಂದ ಒಳಗೊಳ್ಳುವುದೊಂದೇ ಜಾತಿ ಸಮಸ್ಯೆಗೆ ಪರಿಹಾರ. ಈ ಪರಿಹಾರವನ್ನು ರಾಜಕೀಯ ಅಧಿಕಾರದಿಂದ, ಶಿಕ್ಷಣದಿಂದ, ಹೋರಾಟಗಳಿಂದ, ಸಂಘಟನೆಯ ಮೂಲಕ ಕಂಡುಕೊಳ್ಳಬಹುದು ಎಂದು ಕೂಗಿ ಹೇಳಿದವರು ಬಿ.ಆರ್. ಅಂಬೇಡ್ಕರ್.


ಬಾಬಾ ಸಾಹೇಬರ ಬಾಲ್ಯದಲ್ಲಿ ಕರಾಳ ಘಟನೆಗಳಿವೆ. ಅಲ್ಲೆಲ್ಲಾ ಅವಮಾನ ಹೆಪ್ಪುಗಟ್ಟಿದೆ. ಅವು ಬಡತನದ ಬದಲು, ಜಾತಿ ಕಾರಣದಿಂದ ಆದ ಅವಮಾನಗಳಾಗಿವೆ. ಒಂಬತ್ತು ವರ್ಷದ ಬಾಲಕನಾಗಿದ್ದಾಗ ಮೊದಲ ರೈಲು ಪ್ರಯಾಣ ಮತ್ತು ಎತ್ತಿನಗಾಡಿ ಪ್ರಯಾಣಗಳಲ್ಲಿ ಆದ ಅವಮಾನದ ಗಾಯಗಳನ್ನು ಎಂದೂ ಮರೆಯಲಾಗದ ಘಟನೆಗಳೆಂದು ಅಂಬೇಡ್ಕರ್ ದಾಖಲಿಸಿದ್ದಾರೆ. ರೈಲು ಎಂಬುದು ಬ್ರಿಟಿಷರ ಸಂಕೇತದಂತಿದೆ. ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿಯವರನ್ನು ಎಳೆದು ಹೊರ ಹಾಕಿದ್ದೂ ರೈಲಿನಿಂದಲೇ. ಬಹಳಷ್ಟು ಮಂದಿ ಅಪಮಾನಗಳನ್ನು ನುಂಗಿಕೊಂಡು ವಿಧಿಬರಹದ ಪಟ್ಟಿಗೆ ಸೇರಿಸಿ ಸುಮ್ಮನಾಗುತ್ತಾರೆ. ಆದರೆ ಗಾಂಧಿ, ಅಂಬೇಡ್ಕರ್ ಅಂತಹ ಚೇತನಗಳು ಅವಮಾನಗಳಿಂದ ಬಿಡುಗಡೆ ಪಡೆಯಲು ಶೋಷಿತರ ಪರ ಹೋರಾಟಗಳನ್ನು ರೂಪಿಸುತ್ತವೆ. ಗಾಂಧಿ ಮತ್ತು ಅಂಬೇಡ್ಕರ್ ಹೋರಾಟದ ಸ್ವರೂಪಗಳು ಭಿನ್ನವಾಗಿದ್ದರೂ, ಇಬ್ಬರ ಅಂತಿಮ ಗುರಿ ಒಂದೇ ಆಗಿತ್ತು. ಅವರಿಬ್ಬರಿಲ್ಲದೆ ಭಾರತವನ್ನು ಕಲ್ಪಿಸಿಕೊಳ್ಳಲು ಆಗದು.

ಗೋಣಿತಾಟನ್ನು ತೆಗೆದುಕೊಂಡು ಹೋಗಿ ಶಾಲೆಯಲ್ಲಿ ಪ್ರತ್ಯೇಕವಾಗಿ ಕೂರುತ್ತಿದ್ದರು– ಅಲ್ಲ ಕೂರಿಸುತ್ತಿದ್ದರು– ಬಾಲಕ ಅಂಬೇಡ್ಕರ್‌ರನ್ನು. ಪ್ರತಿಭಾವಂತ ವಿದ್ಯಾರ್ಥಿ ಎನಿಸಿಯೂ ಅಪಮಾನ. ಸವರ್ಣೀಯ ಮಕ್ಕಳು ನಲ್ಲಿಯಲ್ಲಿ ನೀರು ಬಿಟ್ಟಾಗ ಮಾತ್ರ ಕುಡಿಯಬೇಕು. ನಲ್ಲಿಯನ್ನು ಮುಟ್ಟುವಂತಿಲ್ಲ. ದಲಿತರು ಸಾರ್ವಜನಿಕವಾಗಿ ನಲ್ಲಿಯನ್ನು ಬಳಸಿದರೆಂದು ಗಂಗಾಜಲ ಪ್ರೋಕ್ಷಣೆ ಮಾಡಿದ ಸವರ್ಣೀಯರ ವರ್ತನೆಯೊಂದು ಇತ್ತೀಚೆಗೆ ವರದಿಯಾಗಿತ್ತು. ನನ್ನ ಕಣ್ಣಿಗೆ ಕಟ್ಟಿದಂತಿರುವ ಒಂದು ಅಸಹಾಯಕ ಚಿತ್ರ ಹೀಗಿದೆ. ಪ್ರೌಢಶಾಲೆಯಲ್ಲಿ ಓದುವಾಗ ಪರಿಶಿಷ್ಟ ಜಾತಿಯ ಬಾಲಕನೊಬ್ಬ ಹೊಸ ಚಪ್ಪಲಿ ಧರಿಸಿ ಬಂದಿದ್ದಕ್ಕೆ ವ್ಯಾಯಾಮ ಶಿಕ್ಷಕ ಅವನ ಕಾಲಿಗೆ ಬಾಸುಂಡೆ ಬರುವಂತೆ ಹೊಡೆದಿದ್ದರು. ಅಪಮಾನ, ನೋವು ತಾಳಲಾರದೆ ಅವನು ಶಾಲೆಯನ್ನೇ ಬಿಟ್ಟ. ಕಣ್ಣೀರು ಸುರಿಸುತ್ತಿದ್ದ ಆ ನನ್ನ ಸಹಪಾಠಿಯ ಚಿತ್ರ, ಏನೂ ಮಾಡಲಾಗದ ನನ್ನ ಅಸಹಾಯಕತೆ ಪಾಪಪ್ರಜ್ಞೆಯಂತೆ ನನ್ನಲ್ಲಿ ಉಳಿದುಬಿಟ್ಟಿದೆ. ಹೊಸ ಚಪ್ಪಲಿ ಧರಿಸಬಲ್ಲಷ್ಟು ಸ್ಥಿತಿವಂತನಾಗಿದ್ದೇ ಸವರ್ಣೀಯ ಮನಸ್ಸಿನ ಹೊಟ್ಟೆಕಿಚ್ಚಿಗೆ ಕಾರಣ. ಈ ನೀಚ ಪ್ರವೃತ್ತಿ ಈಗಲೂ ಕೆಲವರಲ್ಲಿದೆ. ಅಸ್ಪೃಶ್ಯರು ಒಳ್ಳೆಯ ಬಟ್ಟೆ ಧರಿಸಬಾರದು, ಒಳ್ಳೆಯ ಊಟ ಮಾಡಬಾರದು, ಒಳ್ಳೆಯ ಮನೆಯಲ್ಲಿ ವಾಸಿಸಬಾರದು, ಒಟ್ಟಿನಲ್ಲಿ ತನಗಿಂತ ಉತ್ತಮ ರೀತಿಯಲ್ಲಿ ಬದುಕಬಾರದು. ಅಂಬೇಡ್ಕರ್ ತಂದೆ ಸರ್ಕಾರಿ ನೌಕರಿಯಲ್ಲಿದ್ದುದರಿಂದ ಹಣ ಕೊಡಲು ಶಕ್ತರಾಗಿದ್ದರೂ ಅಸ್ಪೃಶ್ಯರಾದ್ದರಿಂದ ಅಗಸರು ಬಟ್ಟೆ ಒಗೆಯುವುದಿಲ್ಲ. ಕ್ಷೌರಿಕರು ಹತ್ತಿರ ಸುಳಿಯುವುದಿಲ್ಲ. ಬಾಲ್ಯದಲ್ಲಿ ತನ್ನ ಹಿರಿಯಕ್ಕನೇ ನನಗೆ ಕ್ಷೌರ ಮಾಡುತ್ತಿದ್ದಳು ಎಂದಿದ್ದಾರೆ ಅಂಬೇಡ್ಕರ್. ಒಮ್ಮೆ ಬಾಯಾರಿಕೆ ತಾಳದೆ ತನ್ನನ್ನು ತಾನು ಮುಸ್ಲಿಂ ಎಂದು ಪರಿಚಯಿಸಿಕೊಳ್ಳುತ್ತಾರೆ. ಹಿಂದೂ ಧರ್ಮದ ಅಸ್ಪೃಶ್ಯ ಎಲ್ಲ ಧರ್ಮದಲ್ಲೂ ಅಸ್ಪೃಶ್ಯನೇ. ಹಲ್ಲೆಯ ಭಯ, ಬಾಯಾರಿಕೆ, ಹೆಪ್ಪುಗಟ್ಟಿದ ಆಕ್ರೋಶ ಮತ್ತು ಒಂಟಿತನ ಎಲ್ಲಕ್ಕೂ ಉತ್ತರವನ್ನು ಶಿಕ್ಷಣದ ಬೆಳಕಿನಲ್ಲಿ ಕಾಣಬಯಸುತ್ತಾರೆ.

ವಿಪರ್ಯಾಸವೆಂದರೆ, ವಿದೇಶ ವ್ಯಾಸಂಗ ಮುಗಿಸಿ 1918ರಲ್ಲಿ ಭಾರತಕ್ಕೆ ಬಂದಾಗಲೂ, ಇಲ್ಲಿನ ಸಾಮಾಜಿಕ ಸನ್ನಿವೇಶದಲ್ಲಿ ಬದಲಾವಣೆ ಆಗದೆ ಇದ್ದುದು. ಯುರೋಪ್, ಅಮೆರಿಕಗಳಲ್ಲಿ ಕೆಲಕಾಲ ಅಸ್ಪೃಶ್ಯನೆಂಬುದನ್ನು ಮರೆತಿದ್ದ ಅಂಬೇಡ್ಕರ್‌ಗೆ ಭಾರತ ಮತ್ತೆ ಜಾತಿಯನ್ನು ನೆನಪಿಸುತ್ತದೆ. ಇದು ಸಾಧಾರಣ ಭಾರತವಲ್ಲ. ಶೂದ್ರರಿಗೆ ಮತ್ತು ಸ್ತ್ರೀಯರಿಗೆ ಶಿಕ್ಷಣ ನೀಡಿದ ಸಾವಿತ್ರಿಬಾಫುಲೆ ಅವರನ್ನು ಸಗಣಿ ಎಸೆದು ಅಪಮಾನಿಸಿದ ಭಾರತ. ಜಾತಿಯಾಚೆಗೆ ಪ್ರೀತಿ ಮಾಡಿ ಮದುವೆಯಾದರೆ, ಕುಲದ ಮರ್ಯಾದೆಯೆಂದು ಕರುಳಕುಡಿಯನ್ನೇ ಹತ್ಯೆ ಮಾಡುವ ಮರ್ಯಾದಸ್ಥರ ಭಾರತ. ಇಂಥ ಭಾರತ, ವಿದೇಶದಲ್ಲಿ ಓದಿಕೊಂಡು ಬಂದ ದಲಿತನನ್ನು ವಸತಿಗೃಹ ನೀಡದೆ ಅಪಮಾನಿಸಿದ್ದು ಅಚ್ಚರಿ ಏನಲ್ಲ. ಅಂಬೇಡ್ಕರ್ ಭಾವೋದ್ರೇಕಕ್ಕೊಳಗಾಗುವ, ತನಗೆ ಮಾತೃಭೂಮಿ ಎಂಬುದೇ ಇಲ್ಲ ಎಂದು ಗದ್ಗದಿತರಾಗುವ ಸನ್ನಿವೇಶಗಳು ಅವರ ಬದುಕಿನಲ್ಲಿ ಇವೆ. ಸಂಕಟಗಳು ಸಿಟ್ಟಾಗಿ ಪರಿವರ್ತನೆಗೊಂಡು ಅವರು ಹಟಮಾರಿಯಾಗುತ್ತಾರೆ.

ಬಾಬಾ ಸಾಹೇಬರು ಜಾತಿ, ಅಸ್ಪೃಶ್ಯತೆ, ಧರ್ಮ, ಬೌದ್ಧಮತ, ಮತಾಂತರ, ಸಂವಿಧಾನ, ಮಹಿಳೆಯ ಸ್ಥಾನಮಾನ, ಅಲ್ಪಸಂಖ್ಯಾತರು, ಭಾಷಾವಾರು ಪ್ರಾಂತ್ಯ ರಚನೆ, ಗಾಂಧಿವಾದ, ಆರ್ಥಿಕತೆ, ನಿಮ್ನ ವರ್ಗಕ್ಕೆ ರಾಜಕೀಯ ಅಧಿಕಾರದ ಅವಶ್ಯಕತೆ– ಮುಂತಾದ ವಿಷಯಗಳ ಬಗ್ಗೆ ಆಳವಾಗಿ ಚಿಂತಿಸಿ ಬರೆದಿದ್ದಾರೆ. ಅವರು ಬರಿಯ ಅಸ್ಪೃಶ್ಯ ಜಾತಿಗಳ ನಾಯಕ ಎಂಬ ಸೀಮಿತ ದೃಷ್ಟಿಕೋನವನ್ನು ಕಿತ್ತೊಗೆದು 'ಅಂಬೇಡ್ಕರ್ ಎಲ್ಲರಿಗಾಗಿ' ಎಂಬ ಮುಕ್ತ ಮನಸ್ಸಿನಿಂದ, ಯಾರಿಗೆ ಸಮಾನತೆಯಲ್ಲಿ ನಂಬಿಕೆ ಇದೆಯೋ, ಅವರೆಲ್ಲ ಅಧ್ಯಯನ ಮಾಡಬೇಕಿದೆ. ಮುಟ್ಟಿಸಿಕೊಳ್ಳದ ರೋಗಿಷ್ಠರಿಗೆ ಇದೇ ಸರಿಯಾದ ಮದ್ದು.

ಅಂಬೇಡ್ಕರ್ ಜಯಂತಿ ಸಂದರ್ಭದಲ್ಲಿ ಎರಡು ವಿದ್ಯಮಾನಗಳು ಏರ್ಪಟ್ಟಿವೆ. ಮೊದಲನೆಯದು ಸರ್ಕಾರದ ಜನಗಣತಿ. ಸಿನಿಕರಾಗದೆ, ಆಲಸ್ಯ ತೋರದೆ, ಕುಂಟುನೆಪ ಹೇಳಿ ತಪ್ಪಿಸಿಕೊಳ್ಳದೆ ಪ್ರತಿಯೊಬ್ಬರೂ ಇದರಲ್ಲಿ ಭಾಗವಹಿಸುವುದು ಅಗತ್ಯ. ಈ ಮಹಾರಣ್ಯದಲ್ಲಿ ಆನೆ, ಸಿಂಹ, ತೋಳ, ಕಾಗೆ, ವೇಷತೊಟ್ಟ ನರಿ ಎಷ್ಟಿವೆ ಮತ್ತು ಎಲ್ಲಿವೆ ಎಂಬ ಮಾಹಿತಿ ಪ್ರಭುತ್ವಕ್ಕೆ ಬೇಕಾದೀತು. ಈ ಅಂಕಿಅಂಶಗಳಿಂದ ಪವಾಡಗಳೇನೂ ಆಗದಿದ್ದರೂ ಪ್ರಜಾಪ್ರಭುತ್ವದ ಸಂಚಲನೆ ಮತ್ತು ಸ್ಪಷ್ಟತೆಗೆ ಇದು ಅಗತ್ಯ. ಎರಡನೆಯದು, ಈಗ ಎದ್ದಿರುವ ಒಳಮೀಸಲಾತಿಯ ಪರ ಮತ್ತು ವಿರೋಧಗಳು. ಇದರ ಸೂಕ್ತ ನಿರ್ಣಯಕ್ಕೂ ಅಂಬೇಡ್ಕರ್ ಅವರ ತಾತ್ತ್ವಿಕ ಅಧ್ಯಯನವೇ ದಿಕ್ಕು. ಎರಡೂ ಬಣಗಳು ಬಾಬಾ ಸಾಹೇಬರನ್ನು ಒಪ್ಪಿರುವುದರಿಂದ ತಕ್ಕ ಪರಿಹಾರವನ್ನು ಸಂವಿಧಾನ ಮತ್ತು ಅದರ ಶಿಲ್ಪಿಯ ವಿಚಾರಧಾರೆಗಳಿಂದಲೇ ಪಡೆಯಬೇಕಿದೆ.



ವಾಚಕರ ವಾಣಿ

ಕನ್ನಡ ಭಾಷಾ ಕಲಿಕೆ: ಆತಂಕಕಾರಿ ಹಿನ್ನಡೆ

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಕನ್ನಡ ಭಾಷಾ ವಿಷಯದಲ್ಲಿ ಎಲ್ಲ ವಿದ್ಯಾರ್ಥಿಗಳು ತೇರ್ಗಡೆಯಾಗುವಂತಾಗಲು 16 ಶಿಫಾರಸುಗಳನ್ನು ರೂಪಿಸಿರುವುದು ಸಮಯೋಚಿತ. ಶಿಕ್ಷಣ ಸಂಸ್ಥೆಗಳು, ಪೋಷಕರು, ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್ ವಿಷಯಗಳಷ್ಟೆ ಮುಖ್ಯವೆಂಬ ಭ್ರಾಮಕಲೋಕ ರೂಪಿಸಿಕೊಂಡಿದ್ದಾರೆ. ಇದರಿಂದ ಕನ್ನಡ ವಿಷಯ ಲೆಕ್ಕಕ್ಕೇ ಇಲ್ಲದಂತಾಗಿದೆ. ಹಾಗೆ ನೋಡಿದರೆ ಎಲ್ಲ ವಿಷಯಗಳ ಜ್ಞಾನಾರ್ಜನೆಗೆ ಮೂಲವಾದುದು ಭಾಷೆ. ಭಾಷೆಯ ಮೂಲಕವೇ ಜ್ಞಾನವಿಕಾಸ ಸಾಧ್ಯ. ಆದ್ದರಿಂದ ಭಾಷೆಗೆ ಪ್ರಥಮ ಆದ್ಯತೆ ನೀಡಬೇಕಾಗಿದೆ. ಕನ್ನಡ ಶಿಕ್ಷಕರು ಉಳಿದ ವಿಷಯಗಳ ಶಿಕ್ಷಕರಂತೆ ಪಠ್ಯಪುಸ್ತಕದಲ್ಲಿರುವ ಗದ್ಯ–ಪದ್ಯಗಳ ಅರ್ಥ ತಿಳಿಸುವ ಕೆಲಸ ಮಾಡುತ್ತಿದ್ದಾರೆಯೇ ಹೊರತು ಭಾಷಾ ಕಲಿಕೆಯ ಕಡೆಗೆ ಗಮನ ಕೊಡುತ್ತಿಲ್ಲ. ಕನ್ನಡವನ್ನು ಓದುವುದು, ಬರೆಯುವುದು ಮತ್ತು ಮಾತನಾಡುವುದು ಮುಖ್ಯವಾಗಬೇಕಿದೆ.

ಪು.ಸೂ. ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ವಿದೇಶಿ ಕಲಿಕೆಯಲ್ಲಿ ಯಾವ ಹಿಂದುತ್ವವಿದೆ?

ಕೇಂದ್ರದ ಮಾಜಿ ಸಚಿವ ಅನಂತಕುಮಾರ್ ಹೆಗಡೆಯವರು 'ತಮ್ಮ ಪುತ್ರ ಅಶುತೋಷ್ ವಿದೇಶದಲ್ಲಿ ಓದುತ್ತಿದ್ದಾನೆ; ಪ್ರಕರಣವೊಂದರಲ್ಲಿ ಅವನ ಪಾಸ್‌ಪೋರ್ಟ್ ದಾಬಸ್‌ಪೇಟೆ ಪೊಲೀಸರಿಂದ ಜಪ್ತಿಯಾಗಿದೆ. ಇದರಿಂದ ಅವನ ವ್ಯಾಸಂಗಕ್ಕೆ ತೊಂದರೆಯಾಗುತ್ತಿದೆ. ಅವನನ್ನು ಪ್ರಕರಣದಿಂದ ಕೈಬಿಡಿ' ಎಂದು ಹೈಕೋರ್ಟ್‌ಗೆ ಕೋರಿದ್ದಾರೆ. ಅವರ ಮಗನನ್ನು ಬಿಡಬಹುದು ಅಥವಾ ಬಿಡದೇ ಇರಬಹುದು; ಅದು ಕೋರ್ಟಿಗೆ ಬಿಟ್ಟ ವಿಚಾರ. ಪ್ರಶ್ನೆ ಇರುವುದು ಹಿಂದುತ್ವದ ಪ್ರತಿಪಾದಕರಾದ ಅವರು ಭಗವಾಧ್ವಜ, ಬಜರಂಗದಳ, ಭಗವದ್ಗೀತೆ, ಕೇಸರಿ, ಗುರುಕುಲ, ದೇವರು, ಧರ್ಮ, ಗೋವಿನ ಬಗ್ಗೆ ಬೇರೆಯವರ ಮಕ್ಕಳಿಗೆ ಭಾಷಣ ಮಾಡುತ್ತಾ, ತಮ್ಮ ಮಕ್ಕಳನ್ನು ಕಲಿಕೆಗಾಗಿ ವಿದೇಶಗಳಿಗೆ ಏಕೆ ಕಳಿಸುತ್ತಾರೆ? ವಿದೇಶದಲ್ಲಿ ಯಾವ ಹಿಂದುತ್ವವಿದೆ? ತಮ್ಮ ಮಕ್ಕಳ ವ್ಯಾಸಂಗ, ಉದ್ಯೋಗ, ವ್ಯಾಪಾರ ಮತ್ತು ಸಂಬಂಧ ಬೆಳೆಸಲು ವಿದೇಶಗಳೇ ಬೇಕೆನ್ನುವ ಈ ಹಿಂದುತ್ವವಾದಿ ಮುಖಂಡರು, ಬೇರೆಯವರ ಮಕ್ಕಳಲ್ಲಿ ಕೋಮುದ್ವೇಷ ಬಿತ್ತುವುದು ಸರಿಯೇ?

ತಾ.ಸಿ. ತಿಮ್ಮಯ್ಯ, ಬೆಂಗಳೂರು

ಸಿಲಿಂಡರ್ ವಿತರಣೆ: ನಿಲ್ಲದ ಗೊಂದಲ

ಕೊಲ್ಲಿ ಯುದ್ಧದ ಕಾರಣದಿಂದಾಗಿ ಎಲ್‌ಪಿಜಿ ಸಿಲಿಂಡರ್ ಅಭಾವವಾಗಿದೆ. ಆದರೆ, ಗ್ಯಾಸ್ ಬುಕ್ಕಿಂಗ್ ಮಾಡಿದ ಬಳಿಕ ಎಷ್ಟು ದಿನಗಳಿಗೆ ವಿತರಣೆಯಾಗುತ್ತದೆ ಎಂಬ ಬಗ್ಗೆ ಸ್ಪಷ್ಟನೆ ಇಲ್ಲ. ಎರಡು ಸಿಲಿಂಡರ್‌ಗಳ ಸಂಪರ್ಕ ಇದ್ದವರು ಹೇಗೋ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ. ಆದರೆ, ಒಂದೇ ಸಿಲಿಂಡರ್ ಇದ್ದವರಿಗೆ ತೊಂದರೆಯಾಗುತ್ತಿದೆ. ಗ್ಯಾಸ್ ವಿತರಕರು ಬುಕ್ಕಿಂಗ್ ಮಾಡಿದ ಬಳಿಕ ವಿತರಣೆಯ ದಿನಾಂಕದ ಬಗ್ಗೆ ಸರಿಯಾಗಿ ಮಾಹಿತಿ ನೀಡುವುದಿಲ್ಲ. ಕೆಲವು ಏಜೆನ್ಸಿಯವರು ಒಂದು ವಾರವೆಂದರೆ, ಮತ್ತೆ ಕೆಲವರು 15 ದಿನಗಳ ಗಡುವು ನೀಡುತ್ತಿದ್ದು, ಈ ಬಗ್ಗೆ ಕೇಂದ್ರ ಸ್ಪಷ್ಟ ವಿವರಣೆ ನೀಡಬೇಕಿದೆ.

ಎಸ್.ಎಂ. ಚಂದ್ರಮೌಳಿ ಸ್ವಾಮಿ, ಬೆಂಗಳೂರು

ಸರ್ಕಾರಿ ಕಾಲೇಜುಗಳ ವ್ಯವಸ್ಥಿತ ಅವನತಿ

ಸರ್ಕಾರಿ ಪಿಯು ಕಾಲೇಜುಗಳ ಫಲಿತಾಂಶ ಕುಸಿತ ಕಂಡಿರುವುದು ಶಿಕ್ಷಣ ವ್ಯವಸ್ಥೆಯ ಬಿಕ್ಕಟ್ಟನ್ನು ಸೂಚಿಸುತ್ತದೆ. ಖಾಸಗಿ ಕಾಲೇಜುಗಳು ಶೇ 90ರಷ್ಟು ಫಲಿತಾಂಶ ದಾಖಲಿಸುತ್ತಿದ್ದರೆ, ಸರ್ಕಾರಿ ಕಾಲೇಜುಗಳ ಫಲಿತಾಂಶ ಶೇ 65ರಿಂದ ಶೇ 70ರಷ್ಟಿದೆ. ಉಪನ್ಯಾಸಕರ ಕೊರತೆ ಮತ್ತು ಅವರಿಗೆ ಬೋಧನೆಯ ಜೊತೆಗೆ ಇತರೆ ಇಲಾಖೆಯ ಕೆಲಸಗಳ ಹೊರೆ ನೀಡಿರುವುದು ಫಲಿತಾಂಶದ ಮೇಲೆ ನೇರ ಪರಿಣಾಮ ಬೀರಿದೆ. ಪ್ರಯೋಗಾಲಯಗಳ ಕೊರತೆಯಿಂದ ವಿಜ್ಞಾನದಂತಹ ವಿಷಯಗಳಲ್ಲಿ ವಿದ್ಯಾರ್ಥಿಗಳು ಹಿಂದುಳಿಯುತ್ತಿದ್ದಾರೆ. ಸರ್ಕಾರಿ ಕಾಲೇಜುಗಳಲ್ಲಿ ನುರಿತ ಉಪನ್ಯಾಸಕರಿದ್ದಾರೆ. ಆದರೆ, ಅವರಿಗೆ ಪೂರಕ ವಾತಾವರಣದ ಅಗತ್ಯವಿದೆ. ಮೂಲಸೌಕರ್ಯದ ಕೊರತೆಯು ಫಲಿತಾಂಶದ ಹಿನ್ನಡೆಗೆ ಕಾರಣ. ಬಡ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಬಲಪಡಿಸುವುದು ಇಂದಿನ ತುರ್ತು.

ವಿಜಯಕುಮಾರ ಎಚ್.ಕೆ., ರಾಯಚೂರು

ಗೃಹಲಕ್ಷ್ಮಿ ಹಣ: ಖಾಸಗಿ ಕಂಪನಿಗಳ ಪಾಲು

ಆರ್ಥಿಕವಾಗಿ ಹಿಂದುಳಿದ ಬಡ ಮಹಿಳೆಯರಿಗೆ ಸರ್ಕಾರವು ಗೃಹಲಕ್ಷ್ಮಿ ಯೋಜನೆಯಡಿ ನೀಡುತ್ತಿರುವ ಹಣವನ್ನು ಖಾಸಗಿ ಹಣಕಾಸು ಕಂಪನಿಗಳು, ತಾವು ನೀಡಿರುವ ಸಾಲದ ಕಂತಿಗೆ ಜಮೆ ಮಾಡಿಕೊಳ್ಳುತ್ತಿವೆ. ಇದರಿಂದ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಬಡ ಮಹಿಳೆಯರಿಗೆ ಸರ್ಕಾರದಿಂದ ಉಚಿತ ಧನ ಸಹಾಯ ದೊರೆಯುತ್ತದೆಂಬ ನಂಬಿಕೆಯ ಆಧಾರದ ಮೇಲೆ ಕಂಪನಿಯವರು ಮಹಿಳೆಯರಿಗೆ ಸಾಲ ಕೊಟ್ಟಿಲ್ಲ ಎಂಬುದನ್ನು ಮನಗಾಣಬೇಕಿದೆ. ಹಣ ಕಡಿತಗೊಳಿಸುತ್ತಿರುವ ಕಂಪನಿಗಳ ವಿರುದ್ಧ ಕ್ರಮ ಜರುಗಿಸಲು ಸರ್ಕಾರ ಮುಂದಾಗಿರುವುದು ಸಮಯೋಚಿತ ನಡೆ.

ಎಲ್. ಚಿನ್ನಪ್ಪ, ಬೆಂಗಳೂರು

ತಂತ್ರಜ್ಞಾನದ ಬೆಳಕಿನಲ್ಲಿ ಅಜ್ಞಾನದ ಕತ್ತಲು

ಉತ್ತರಪ್ರದೇಶದ ಅಮ್ರೋಹಾ ಜಿಲ್ಲೆಯಲ್ಲಿ ಹಾವು ಕಡಿತದಿಂದ ಅಮಿತ್ ಎಂಬ ಬಾಲಕ, ಆತನ ತಂದೆ–ತಾಯಿ ಹಾಗೂ ಊರಿನವರು ಮೌಢ್ಯಕ್ಕೆ ಬಲಿಯಾಗಿರುವುದು ದುರದೃಷ್ಟಕರ. ಮಂಗಳಯಾನ, ಚಂದ್ರಯಾನ ಸಾಧ್ಯವಾಗುತ್ತಿರುವ ಈ ದೇಶದಲ್ಲಿ ಗಂಗಾನದಿಯಲ್ಲಿ ಮುಳುಗಿಸಿದರೆ ಹಾವಿನ ವಿಷ ಹೊರಹೋಗುತ್ತದೆ ಎಂದು ನಂಬುವ ಜನರೂ ಇದ್ದಾರೆ ಎಂಬುದು ವಿಪರ್ಯಾಸ. ದೇಶವು ತಂತ್ರಜ್ಞಾನದಲ್ಲಿ ಎಷ್ಟೇ ಅಭಿವೃದ್ಧಿ ಸಾಧಿಸಿದರೂ ಜನಸಾಮಾನ್ಯರಲ್ಲಿನ ಮೌಢ್ಯ ಹೋಗಲಾಡಿಸದಿದ್ದರೆ ಎಲ್ಲವೂ ನಿಷ್ಪ್ರಯೋಜಕ. ಆಡಳಿತದ ಚುಕ್ಕಾಣಿ ಹಿಡಿದವರು, ಸಂಘ–ಸಂಸ್ಥೆಗಳು ಮೌಢ್ಯ ತೊಲಗಿಸಲು ಕಾರ್ಯೋನ್ಮುಖರಾಗಬೇಕಿದೆ.

ಟಿ. ಜಯರಾಂ, ಕೋಲಾರ

ಚುರುಮುರಿ



ಜೂಟು ಬೋಲೆ...

● ಲಿಂಗರಾಜು ಡಿ.ಎಸ್.

ಎಂದಿನಂತೆ ವಿಕ್ರಮಾದಿತ್ಯನು ಬೇತಾಳವನ್ನು ಹುಡುಕುತ್ತಾ ಬಂದ. ಬೇತಾಳವು ತನ್ನನ್ನು ಕೆಳಗಿಳಿಸತೊಡಗಿದ ವಿಕ್ರಮಾದಿತ್ಯನನ್ನೇ ನೋಡುತ್ತಾ ಮಾತನಾಡಿತು.

'ಎಲೈ ರಾಜನೇ, ನಿನ್ನ ಮಾರ್ಗಾಯಾಸ ಕಳೆಯಲು ಗುಂಡೀಪುರದ ಕುರ್ಚಿ ಕಲಹವನ್ನು ಕೇಳುವಂತಹವನಾಗು. ಕೈ–ಕುಲದೇವತೆಗಳಾದ ರಾಗಾ ಮತ್ತು ಸೋಗಾ ಅವರ ಮುಂದೆ ಒಪ್ಪಂದವಾದಂತೆ ರಾಮಸಿದ್ದಯ್ಯನು ತನಗೆ ಅಧಿಕಾರ ಬಿಟ್ಟುಕೊಡಬೇಕೆನ್ನುವುದು ಕುಮಾರಶಿವನ ಕೋರಿಕೆಯಾಗಿತ್ತು. ರಾಮಸಿದ್ದಯ್ಯ ಅಂತಹ ಯಾವುದೇ ಒಪ್ಪಂದವಾಗಿಲ್ಲ ಎನ್ನುತ್ತಿದ್ದ. ಆಗಾಗ ಪುತ್ರರತ್ನವೂ ನುಡಿಮದ್ದುಗಳನ್ನು ಹಾರಿಸುತ್ತಿತ್ತು. ಪರ–ವಿರೋಧಿ ಗುಂಪುಗಳು, ಸಚಿವ ಪಟ್ಟದ ಹಿರಿ–ಕಿರಿ ಆಕಾಂಕ್ಷಿಗಳು ಕುಲದೇವತೆಗಳ ದರ್ಶನವಾಗದೆ ಪರಿತಪಿಸುತ್ತಿದ್ದರು.

'ಈ ವಿಪತ್ಕಾಲದಿಂದ ಹೊರಬರಲು ಕುಮಾರಶಿವ ಮತ್ತು ರಾಮಸಿದ್ದಯ್ಯ ಕುಲದೇವತೆಗಳ ಬಳಿಗೆ ತೆರಳಿ ಕುರ್ಚಿ ಕದನವನ್ನು ಕೊನೆಗೊಳಿಸಬೇಕೆಂದು ಬೇಡಿಕೊಳ್ಳುತ್ತಾ ತಂತಮ್ಮ ತಲೆಗಳನ್ನು ಕತ್ತರಿಸಿಕೊಂಡು ದೇವತೆಗಳ ಪಾದಕ್ಕಿಟ್ಟರು. ಇವರ ಪ್ರಾಮಾಣಿಕತೆಗೆ ಬೆಚ್ಚಿದ ಕುಲದೇವತೆಗಳು ಇಬ್ಬರಿಗೂ ಪ್ರಾಣದಾನ ಮಾಡುವಾಗ ಆದ ಸರ್ಜರಿ ತಪ್ಪಿನಿಂದಾಗಿ, ರಾಮಸಿದ್ದಯ್ಯನ ದೇಹಕ್ಕೆ ಕುಮಾರಶಿವನ ತಲೆ ಮತ್ತು ಕುಮಾರಶಿವನ ದೇಹಕ್ಕೆ ರಾಮಸಿದ್ದಯ್ಯನ ತಲೆ ಸೇರಿ ಇಬ್ಬರೂ ಜೀವಂತವಾದರು.

'ರಾಜನೇ, ಅಧಿಕಾರದ ಕುರ್ಚಿ ರಾಮಸಿದ್ದಯ್ಯನ ತಲೆ ಮತ್ತು ಕುಮಾರಶಿವನ ದೇಹ ಹೊಂದಿದವರಿಗೋ ಅಥವಾ ಕುಮಾರಶಿವನ ತಲೆ ಮತ್ತು ರಾಮಸಿದ್ದಯ್ಯನ ದೇಹ ಹೊಂದಿದವರಿಗೋ? ಕಲಹದ ಸುಳ್ಳು–ಸತ್ಯಗಳನ್ನು ತಿಳಿದಿದ್ದೂ ಉತ್ತರ ಹೇಳದಿದ್ದಲ್ಲಿ ನಿನ್ನ ತಲೆಯು ಉರುಳುವುದು' ಎಂದಿತು.

ವಿಕ್ರಮಾದಿತ್ಯನು ಕ್ಷಣಕಾಲ ಚಿಂತಿಸಿ ಬಾಯಿಬಿಟ್ಟನು. 'ಎಲೈ ಬೇತಾಳವೇ, ನಿನ್ನ ಪ್ರಶ್ನೆಯು ಕುಲದೇವತೆಗಳಿಗೆ ಮತ್ತು ಮಧ್ಯಸ್ಥರಿಗೆ ಮಾತ್ರ ತಿಳಿದ ರಹಸ್ಯವಾಗಿದೆ. ಆದುದರಿಂದ ಯಾರಿಗೆ ಅಧಿಕಾರ ಎಂಬುದನ್ನು ನಿನ್ನ ಕಿವಿಯಲ್ಲಿ ಹೇಳುತ್ತೇನೆ' ಎಂದು ರಾಜನು ಮೌನವನ್ನು ಮುರಿದು, ನಾಯಕತ್ವದ ರಹಸ್ಯವನ್ನು ಬೇತಾಳನ ಕಿವಿಯಲ್ಲಿ ಹೇಳಿದ. ಕೂಡಲೇ ವಿಕಟವಾಗಿ ನಗುತ್ತಾ ಬೇತಾಳವು ಹಾರಿಹೋಗಿ ವಿಧಾನಸೌಧದ ಗುಮ್ಮಟದ ಮೇಲೆ ಕುಳಿತುಕೊಂಡು 'ಜೂಟು ಬೋಲೆ ಕವ್ವಾ ಕಾಟೆ ಕಾಲೆ ಕವ್ವೇಸೆ ಡರಿಯೋ' ಎಂದು ಹಾಡತೊಡಗಿತು.

ಸಂಗತ

ಸಂಸದೀಯ ಪರಂಪರೆ ದಿಕ್ಕು ತಪ್ಪುತ್ತಿದೆಯೆ?

ಸಂಸತ್, ವಿಧಾನಮಂಡಲದ ಕಲಾಪಗಳಲ್ಲಿ ಜನಪ್ರತಿನಿಧಿಗಳು ಹೊಣೆಗಾರಿಕೆಯನ್ನು ಸರಿಯಾಗಿ ನಿರ್ವಹಿಸುತ್ತಿದ್ದಾರೆಯೆ? ಉತ್ತರ ಹುಡುಕಿದರೆ ನಿರಾಶೆ ಕಟ್ಟಿಟ್ಟ ಬುತ್ತಿ.

● ಜಗದೀಶ

ಸಂಸತ್ ಹಾಗೂ ವಿಧಾನಮಂಡಲ ಅಧಿವೇಶನಗಳನ್ನು ಗಮನಿಸಿದಾಗ ಎದುರಾಗುವ ಪ್ರಶ್ನೆ: ದೇಶದ ಸಂಸದೀಯ ಪರಂಪರೆ ಅಧೋಗತಿಯತ್ತ ಸಾಗುತ್ತಿದೆಯೆ?

ಇತ್ತೀಚಿನ ವಿಧಾನಸಭೆ ಕಲಾಪದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಬಿಜೆಪಿ ಶಾಸಕ ಮುನಿರತ್ನ ಅವರ ನಡುವಿನ ವೈಯಕ್ತಿಕ ವಾಗ್ವಾದ ದೊಡ್ಡ ಸುದ್ದಿಯಾಗಿತ್ತು. ಆ ಘಟನೆಯನ್ನು ವರದಿ ಮಾಡದಂತೆ ಸಭಾಧ್ಯಕ್ಷರೇ ಮಾಧ್ಯಮಗಳಿಗೆ ಮನವಿ ಮಾಡಿದ್ದನ್ನು ಗಮನಿಸಿದರೆ, ಇಬ್ಬರು ಜನಪ್ರತಿನಿಧಿಗಳ ಬಾಯಿಗಳಿಂದ ಹೊರಹೊಮ್ಮಿದ ಪದಗಳು ಎಂತಹದ್ದಿರಬಹುದೆಂದು ಊಹಿಸಬಹುದು.

ಜನಸಾಮಾನ್ಯರ ಸಮಸ್ಯೆಗಳು ಜನಪ್ರತಿನಿಧಿಗಳ ಮೂಲಕ ಸರ್ಕಾರದ ಗಮನಕ್ಕೆ ಮುಟ್ಟುವಲ್ಲಿ ಸದನಗಳಿಗೆ ವಿಶೇಷ ಮಹತ್ವವಿದೆ. ಜನರ ತೆರಿಗೆ ಹಣದಲ್ಲಿ ನಡೆಯುವ ಕಲಾಪಗಳನ್ನು ಸರಿಯಾದ ದಿಕ್ಕಿನಲ್ಲಿ ನಡೆಯುವಂತೆ ನೋಡಿಕೊಳ್ಳುವ ಹೊಣೆಗಾರಿಕೆ ಜನಪ್ರತಿನಿಧಿಗಳದ್ದಾಗಿದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಗದ್ದಲ, ಕೋಲಾಹಲ, ಬಹಿಷ್ಕಾರ ಮತ್ತು ಪ್ರತಿಭಟನೆಗಳಲ್ಲಿ ಕಲಾಪದ ಅಮೂಲ್ಯ ಸಮಯವು ವ್ಯರ್ಥವಾಗುತ್ತಿದೆ. ವ್ಯಕ್ತಿಗತ ನಿಂದನೆ ಮತ್ತು ಕೀಳುಮಟ್ಟದ ಶಬ್ದ ಪ್ರಯೋಗಗಳು ಹೆಚ್ಚುತ್ತಿರುವುದು ಸದನ ತಲಪಿರುವ ಅಧೋಗತಿಗೆ ನಿದರ್ಶನದಂತಿದೆ.

ರಾಜ್ಯ–ರಾಷ್ಟ್ರದ ಸಮಸ್ಯೆಗಳ ಕುರಿತು ಚರ್ಚೆ ನಡೆಸಿ ಉತ್ತರ ಕಂಡುಕೊಳ್ಳಬೇಕಾದ ಜನಪ್ರತಿನಿಧಿಗಳು ಸದನವನ್ನು ಕದನಭೂಮಿ ಆಗಿಸುತ್ತಿದ್ದಾರೆ. ಜನಸಾಮಾನ್ಯರ ಹಿತದೃಷ್ಟಿಯಿಂದ ಚರ್ಚೆ ಆಗಬೇಕಾದ ಮುಖ್ಯ ಸಂಗತಿಗಳು ನೇಪಥ್ಯಕ್ಕೆ ಸರಿದು, ಕ್ಷುಲ್ಲಕ ವಿಷಯಗಳು ಮುನ್ನೆಲೆಗೆ ಬರುತ್ತಿವೆ. ರಾಜಕೀಯ ಆರೋಪ ಪ್ರತ್ಯಾರೋಪಗಳಿಗೆ ಅಧಿವೇಶನ ಸೀಮಿತವಾಗುತ್ತಿರುವುದು ಪ್ರಜಾಪ್ರಭುತ್ವದ ಆಶಯಗಳನ್ನು ಅಣಕಿಸುವಂತಿದೆ.



ಜನಪ್ರತಿನಿಧಿ ಎನ್ನಿಸಿಕೊಂಡವರು ಸದನದಲ್ಲಿ ತೋರುತ್ತಿರುವ ಪ್ರೌಢಿಮೆಯಂತೂ ಹೇಳತೀರದು. ಸಭ್ಯರು ಕಲಾಪವನ್ನು ವೀಕ್ಷಿಸಲೂಬಾರದು, ಕೇಳಿಸಿಕೊಳ್ಳಲೂಬಾರದು ಎಂಬ ರೀತಿಯಲ್ಲಿ ಅವರ ವರ್ತನೆಗಳಿರುತ್ತವೆ ಎನ್ನುವುದಕ್ಕೆ, ಕಳೆದ ಎರಡು ದಶಕಗಳ ವಿಧಾನಮಂಡಲ ಕಲಾಪವನ್ನು ಗಮನಿಸಿದರೆ ಹಲವು ಉದಾಹರಣೆಗಳು ಸಿಗುತ್ತವೆ.

ಜನಾರ್ದನ ರೆಡ್ಡಿ ಮತ್ತು ಸಿದ್ದರಾಮಯ್ಯನವರ ನಡುವೆ ಸದನದಲ್ಲಿ ಈ ಹಿಂದೆ ನಡೆದ ವಾಗ್ವಾದ ತೊಡೆ ತಟ್ಟುವವರೆಗೆ ಹೋಗಿತ್ತು. ಡಿ.ಕೆ. ಶಿವಕುಮಾರ್ ಮತ್ತು ಕೆ.ಎಸ್. ಈಶ್ವರಪ್ಪ ತೋಳೇರಿಸಿಕೊಂಡು ಸದನವನ್ನು ಯುದ್ಧರಂಗವನ್ನಾಗಿಸಿದ್ದರು. ಆರೋಪ ಪ್ರತ್ಯಾರೋಪಗಳನ್ನು ವೈಯಕ್ತಿಕ ಪ್ರತಿಷ್ಠೆಯ ವಿಚಾರ ಮಾಡಿಕೊಂಡು, ಸಂಘರ್ಷಕ್ಕೆ ಆಹ್ವಾನಿಸುವಂತೆ ತೊಡೆತಟ್ಟುವುದು ಸದನಕ್ಕೆ ಶೋಭೆ ತರುವ ನಡವಳಿಕೆಯಲ್ಲ. ಗೂಳಿಹಟ್ಟಿ ಶೇಖರ್ ಸದನದೊಳಗೆ ಅಂಗಿಯನ್ನು ಹರಿದುಕೊಂಡಿದ್ದು, ಸಂಗಮೇಶ್ ಅವರು ಅಂಗಿ ತೆಗೆದಿದ್ದು ಕೂಡ ಅಶಿಸ್ತಿನ ನಡವಳಿಕೆಗಳೇ. ಸದನದೊಳಗೆ ನೀಲಿ ಚಿತ್ರ ವೀಕ್ಷಿಸಿದ ಮಹನೀಯರನ್ನು ಕೂಡ ನಮ್ಮ ಪ್ರಜಾತಂತ್ರ ಕಂಡಿದೆ!

ಸರ್ಕಾರದ ಮುಖ್ಯಸ್ಥರಾದ ರಾಜ್ಯಪಾಲರಿಗೆ ಅಗೌರವ ತೋರಿದ ಘಟನೆಗಳಿಗೂ ಸದನ ಸಾಕ್ಷಿಯಾಗಿದೆ. ಸಾಂವಿಧಾನಿಕವಾಗಿ ಇರುವ ಉನ್ನತ ಹುದ್ದೆಗಳನ್ನು ಗೌರವಿಸುವುದು ಜನಪ್ರತಿನಿಧಿಗಳ ಶಿಸ್ತಿನ ಭಾಗ ಎನ್ನುವುದನ್ನು ಹಲವರು ಮರೆತಿದ್ದಾರೆ.

ಚಿಂತಕರ ಚಾವಡಿ ಎನ್ನುವ ಹಿರಿಮೆಯ ವಿಧಾನ ಪರಿಷತ್ ಕೂಡ ಆಕ್ಷೇಪಾರ್ಹ ಘಟನೆಗಳಿಗೆ ಸಾಕ್ಷಿಯಾಗುತ್ತಿರುವುದು ಖೇದಕರ. ಬಿಜೆಪಿಯ ಸಿ.ಟಿ. ರವಿ ಅವರು ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಅವರ ವಿರುದ್ಧ ಅವಾಚ್ಯ ಪದ ಬಳಸಿದ್ದಾರೆ ಎನ್ನುವ ಆರೋಪವು ತೀವ್ರ ಗದ್ದಲಕ್ಕೆ ಕಾರಣವಾಗಿತ್ತು. ಸಭ್ಯತೆಯ ಪರಿಭಾಷೆ ಯಾವುದು ಎನ್ನುವುದನ್ನು ನಮ್ಮ ಜನಪ್ರತಿನಿಧಿಗಳು ಮರೆತಿರುವಂತಿದೆ.

ಒಂದು ಕಾಲದಲ್ಲಿ ಕರ್ನಾಟಕದ ವಿಧಾನಸಭೆ ಮತ್ತು ವಿಧಾನ ಪರಿಷತ್ ಕಲಾಪಗಳು ರಾಷ್ಟ್ರದ ಸಂಸದೀಯ ಪರಂಪರೆಯ ಕೀರ್ತಿಕಲಶದಂತಿದ್ದವು. 'ವಿಧಾನ ಪರಿಷತ್ ಕಲಾಪದಲ್ಲಿ ಗಂಭೀರ ಚರ್ಚೆ ಮೂಲಕ ತಮ್ಮ ಪ್ರಜ್ಞಾವಂತಿಕೆಯನ್ನು ತೋರುತ್ತಿದ್ದ ಕವಿಗಳಾದ ಚಂದ್ರಶೇಖರ ಕಂಬಾರ, ಸಿದ್ಧಲಿಂಗಯ್ಯ ಅಂಥವರು ಸದನದ ಗೌರವವನ್ನು ಹೆಚ್ಚಿಸಿದ್ದರು. ಸಾಹಿತಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಸಾಂಸ್ಕೃತಿಕ ಮತ್ತು ಗ್ರಾಮೀಣಾಭಿವೃದ್ಧಿ ವಿಷಯಗಳಲ್ಲಿ ನಡೆಸಿದ ವಿದ್ವತ್ಪೂರ್ಣ ಚರ್ಚೆಗಳನ್ನು ಈಗಲೂ ನೆನಪಿಸಿಕೊಳ್ಳುವವರು ಇದ್ದಾರೆ. ಅಂತಹ ಮೌಲ್ಯಯುತ ಚರ್ಚೆಗಳು ಇಂದು ವಿರಳವಾಗಿವೆ. ಮೇಲ್ಮನೆಯಲ್ಲಿ ಸುದೀರ್ಘ ಅನುಭವ ಇರುವ ಸಭಾಪತಿ ಬಸವರಾಜ ಹೊರಟ್ಟಿ ಅವರೇ ಸಂದರ್ಶನವೊಂದರಲ್ಲಿ ಈ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ.

ಅಧಿವೇಶನದ ಮಹತ್ವವನ್ನು ನಿರ್ಲಕ್ಷಿಸಿರುವ ಸಚಿವರು ಹಾಗೂ ಅಧಿಕಾರಿಗಳು ಮೈಮರೆತಿದ್ದಾರೆ ಎನ್ನುವುದಕ್ಕೆ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಇತ್ತೀಚೆಗೆ ಸಭಾತ್ಯಾಗ ಮಾಡಿದ ಘಟನೆ ಉದಾಹರಣೆಯಂತಿದೆ. ಶಾಸಕರು ಲಿಖಿತ ರೂಪದಲ್ಲಿ ಕೇಳಿದ 230 ಪ್ರಶ್ನೆಗಳ ಪೈಕಿ ಕೇವಲ 84 ಪ್ರಶ್ನೆಗಳಿಗೆ ಮಾತ್ರ ಉತ್ತರ ನೀಡಲಾಗಿತ್ತು. ಈ ಬಗ್ಗೆ ಸಭಾಪತಿ ಅಸಮಾಧಾನ ವ್ಯಕ್ತಪಡಿಸಿದ್ದರು. ಅಭಿವೃದ್ಧಿ ಮತ್ತು ಇನ್ನಿತರ ವಿಚಾರವಾಗಿ ಆಡಳಿತಯಂತ್ರದಿಂದ ಸಮರ್ಪಕ ಉತ್ತರ ಪಡೆಯಲು ಶಾಸಕರಿಗೆ ವೇದಿಕೆಯಾಗಬೇಕಾದ ಸದನದಲ್ಲಿ ಇಂತಹ ಪರಿಸ್ಥಿತಿ ನಿರ್ಮಾಣವಾದುದು ಸದನದ ಗಾಂಭೀರ್ಯವನ್ನು ಅಣಕಿಸುವಂತಿತ್ತು.

ದೇಶದ ಭವ್ಯ ಸಂಸದೀಯ ಪರಂಪರೆಗೆ ಚ್ಯುತಿಯಾಗುವಂಥ ಘಟನೆಗಳು ಪದೇ ಪದೇ ಘಟಿಸುತ್ತಿವೆ. ಸಂಸದೀಯ ವ್ಯವಸ್ಥೆ ಸಾಗುತ್ತಿರುವ ಹಾದಿಯ ಬಗ್ಗೆ ಪರಾಮರ್ಶೆ ನಡೆಯಬೇಕಾದ ತುರ್ತು ಇಂದಿನದು. ಪ್ರಜಾಪ್ರಭುತ್ವ ವ್ಯವಸ್ಥೆಯ ಮಿದುಳಿನಂತಿರುವ ಅಧಿವೇಶನವು ಮತ್ತೆ ತನ್ನ ಗತವೈಭವಕ್ಕೆ ಮರಳಬೇಕಾಗಿದೆ. ಗದ್ದಲ, ಕೋಲಾಹಲ, ಅಶಿಸ್ತಿನ ಹೊರತಾಗಿ, ಅರ್ಥಪೂರ್ಣ ಚರ್ಚೆಗಳು ಸದನದ ಗೌರವ ಹೆಚ್ಚಿಸುತ್ತವೆ ಹಾಗೂ ಜನರಿಗೆ ಉತ್ತರದಾಯಿ ಆಗಿರುತ್ತವೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಕೆಪಿಎಸ್‌ಸಿ ಗುಜರಿಗೆ ಹಾಕಿ ಗುಡುಗಿದ್ದ ನ್ಯಾಯಪೀಠ

ಸ್ವಚ್ಛವಾಗಲಿ

• ಬಿ.ಎಸ್. ಷಣ್ಮುಖಪ್ಪ

'ನೀವು ಲಂಚ ತೆಗೆದುಕೊಂಡು ಅಭ್ಯರ್ಥಿಗಳ ನೇಮಕ ಮಾಡುವುದನ್ನು ನಾವು ಈ ಜನ್ಮದಲ್ಲಿ ನಿಲ್ಲಿಸುವಂತೆ ಕಾಣುತ್ತಿಲ್ಲ. ಕಡೇ ಪಕ್ಷ ಶೇ 50ರಷ್ಟಾದರೂ ಯೋಗ್ಯತೆಯುಳ್ಳ ಅರ್ಹ ಅಭ್ಯರ್ಥಿಗಳಿಗೆ ಅವಕಾಶ ಮಾಡಿಕೊಡಿ...' ಎಂದಿದ್ದ ಅಂದಿನ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಒಂದು ಹಂತದಲ್ಲಿ ಕರ್ನಾಟಕ ಲೋಕಸೇವಾ ಆಯೋಗವನ್ನು (ಕೆಪಿಎಸ್‌ಸಿ) ಗುಜರಿಗೆ ಹಾಕಬೇಕು ಎಂದಿದ್ದರು. 'ಇಲ್ಲಿನ ಕರ್ಮಕಾಂಡದ ತನಿಖೆಯನ್ನು ಸಿಬಿಐಗೆ ಒಪ್ಪಿಸುತ್ತೇನೆ' ಎಂದೂ ಗುಡುಗಿದ್ದರು. ಈ ಕುರಿತಂತೆ ಕೆಪಿಎಸ್‌ಸಿಯಲ್ಲಿ ತ್ವರಿತ ಸುಧಾರಣೆಗಳಿಗೆ ಶಿಫಾರಸು ಒತ್ತಿ ಮಧ್ಯಂತರ ಆದೇಶ ಹೊರಡಿಸಿದ್ದರು. ಕೆಲವೇ ದಿನಗಳಲ್ಲಿ ಒಡಿಶಾ ಹೈಕೋರ್ಟ್‌ಗೆ ವರ್ಗಾವಣೆಗೊಂಡರು.

ಕೆಪಿಎಸ್‌ಸಿಯೊಳಗಿನ ಬಲಾಢ್ಯರು ಎಷ್ಟರಮಟ್ಟಿಗೆ ಕೊಬ್ಬಿ ಹೋಗಿರುತ್ತಾರೆ ಎಂಬುದು ಹೈಕೋರ್ಟ್‌ಗೆ ಚೆನ್ನಾಗಿಯೇ ತಿಳಿದಿದೆ. 'ಇಲ್ಲಿನ ಭ್ರಷ್ಟಾಚಾರ ಮತ್ತು ಜಾತಿ ವ್ಯವಸ್ಥೆಯ ಆಡುಂಬೊಲವನ್ನು ಕಾಲಕಾಲಕ್ಕೆ ತಿದ್ದಿ ತೀಡುವ ಪ್ರಯತ್ನವನ್ನು ಆಯಾ ಕಾಲದ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿಗಳು ಮಾಡುತ್ತಲೇ ಬಂದಿದ್ದಾರೆ. ಆಯೋಗದೊಳಗಿನ ಅಕ್ರಮಗಳಿಗೆ ಆಗಾಗ್ಗೆ ಚಾಟಿ ಬೀಸಿ ಹಾಕಿದ ಮುಕ್ಕವಾಗಿ ಬಿಟ್ಟಿದ್ದ ಇದೇ ಕೆಪಿಎಸ್‌ಸಿಯನ್ನೇ ಮಾರ್ಗದರ್ಶನ ಮಾಡಿದ್ದವರು ಅನೇಕ ನ್ಯಾಯಮೂರ್ತಿಗಳು ತಮ್ಮ ಶಕ್ತ್ಯನುಸಾರ ನಿಭಾಯಿಸಿದ್ದಾರೆ. ನ್ಯಾ.ಕೃಷ್ಣ ಎಸ್.ದೀಕ್ಷಿತ್ ಮತ್ತು ನ್ಯಾ. ರಾಮಚಂದ್ರ ಡಿ.ಹುದ್ದಾರ (ನಿವೃತ್ತರು) ಅವರಿದ್ದ ವಿಭಾಗೀಯ ನ್ಯಾಯಪೀಠ ಒಂದೊಮ್ಮೆ ಕೆಪಿಎಸ್‌ಸಿಯ ಕಾರ್ಯವೈಖರಿಗೆ ಅಸಮಾಧಾನ ವ್ಯಕ್ತಪಡಿಸಿ ₹50 ಸಾವಿರ ದಂಡವನ್ನೂ ವಿಧಿಸಿತ್ತು.

ಕಳೆದ 35 ವರ್ಷಗಳಿಂದಲೂ ಕೆಪಿಎಸ್‌ಸಿ ಬಗ್ಗೆ ಕೋರ್ಟ್‌ಗಳು ತಮ್ಮ ಕಿಡಿ ಮುತ್ತುಗಳನ್ನು ಉದುರಿಸುತ್ತಲೇ ಬರುತ್ತಿವೆ.

ರಾಜ್ಯದಲ್ಲಿ ದಕ್ಷ, ಸ್ವಚ್ಛ ಹಾಗೂ ಪಾರದರ್ಶಕ ಆಡಳಿತ ನೀಡಲು ಸಂವಿಧಾನದ ಆಶಯಗಳಡಿ ಸ್ಥಾಪನೆಗೊಂಡ ಕರ್ನಾಟಕ ಲೋಕಸೇವಾ ಆಯೋಗ ಒಂದು ಸಾಂವಿಧಾನಿಕ ಸಂಸ್ಥೆ. ನಮ್ಮ ಸಂವಿಧಾನವು ಶಾಸಕಾಂಗ, ಕಾರ್ಯಾಂಗ



ಕೃಷ್ಣ ಎಸ್.ದೀಕ್ಷಿತ್

ಮತ್ತು ನ್ಯಾಯಾಂಗಗಳ ವ್ಯವಸ್ಥೆ ರೂಪಿಸಿದೆ. ಕಾರ್ಯಾಂಗವನ್ನು ಸ್ವಚ್ಛವಾಗಿಡುವ ಹೊಣೆಗಾರಿಕೆ ಇರುವುದು ಯುಪಿಎಸ್‌ಸಿ (ಕೇಂದ್ರ ಲೋಕಸೇವಾ ಆಯೋಗ) ಮತ್ತು ಕೆಪಿಎಸ್‌ಸಿಗೆ.

ಕಾರ್ಯಾಂಗದ ಭಾಗವಾಗಿ ಸೇವೆ ಸಲ್ಲಿಸುವ ಅಭ್ಯರ್ಥಿಗಳ ಆಯ್ಕೆಯಲ್ಲಿ ಸರ್ಕಾರದ ಹಸ್ತಕ್ಷೇಪ ಇರಬಾರದು ಎಂದುಕೊಂಡೇ ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ಆಯೋಗವನ್ನು ರಚನೆ ಮಾಡಲಾಯಿತು. ಕಾರ್ಯಾಂಗ ಸರಿ ಇರಬೇಕು ಎಂಬ ಕಾರಣಕ್ಕಾಗಿಯೇ ಕಾರ್ಯಾಂಗದಲ್ಲಿ ಹೇಗೆ ನೇಮಕಾತಿ ನಡೆಸಬೇಕು, ಎಂತಹವರನ್ನು ನೇಮಕ ಮಾಡಬೇಕು ಎನ್ನುವುದನ್ನು ಸಂವಿಧಾನದಲ್ಲೇ ವಿವರಿಸಲಾಗಿದೆ.

ಕಾರ್ಯಾಂಗದ ಹುಳುಕು, ನ್ಯೂನತೆ, ಭ್ರಷ್ಟಾಚಾರದ ಆರೋಪಗಳು ಜಗಜ್ಜಾಹೀರು. ಕೆಪಿಎಸ್‌ಸಿಯಲ್ಲಿ ಮೊದಮೊದಲು ಭ್ರಷ್ಟಾಚಾರ ತೆರೆಯ ಮರೆಯಲ್ಲಿ ನಡೆಯುತ್ತಿತ್ತು. 90ರ ದಶಕದ ನಂತರ ಇದು ವ್ಯಾಪಕವಾಯಿತು. 1998ರಿಂದ 2025ರವರೆಗಿನ ಯಾವುದೇ ನೇಮಕಾತಿ ಒಂದಲ್ಲ ಒಂದು ಕಾರಣದಿಂದ ಹೈಕೋರ್ಟ್, ಸುಪ್ರೀಂ ಕೋರ್ಟ್ ಮತ್ತು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ ಕಟಕಟೆಯಲ್ಲಿ ಕೈಕಟ್ಟಿ ನಿಂತಿದೆ. ಈ ದುರವಸ್ಥೆಗೆ ಆಯಾ ಸಮಯದ ಸರ್ಕಾರಗಳ ವಿಫಲತೆಯೇ ಕಾರಣ.

'ಇಲ್ಲಿಯವರೆಗೆ ಎಲ್ಲಾ ರಾಜಕೀಯ ಪಕ್ಷಗಳು ಆಡಳಿತಕ್ಕೆ ಬರುವ ಮುನ್ನ ಕೆಪಿಎಸ್‌ಸಿ ಸುಧಾರಣೆ ಮಾಡುವ ಮತ್ತು ಭ್ರಷ್ಟಾಚಾರ ಹೋಗಲಾಡಿಸುವ ಆವೇಶದ ಮಾತುಗಳನ್ನಾಡುತ್ತಲೇ ಬಂದಿವೆ. ಆದರೆ, ಗೆದ್ದಮೇಲೆ ನಿಷ್ಕ್ರಿಯತೆ ತೋರಿವೆ. ಹಾಗೆಂದು ಇವಕ್ಕೆಲ್ಲಾ ಪರಿಹಾರ ಇಲ್ಲವೆಂದಲ್ಲ. ಚಲನಶೀಲ ವ್ಯವಸ್ಥೆಯಲ್ಲಿ ಶಾಸಕಾಂಗ ಮತ್ತು ನ್ಯಾಯಾಂಗ ಇಂತಹ ಲೋಪದೋಷಗಳನ್ನು ನಿವಾರಿಸುವ ಪ್ರಯತ್ನವನ್ನು ಸಂವಿಧಾನಕ್ಕೆ ಅನುಗುಣವಾಗಿ ಮಾಡುತ್ತಲೇ ಬಂದಿವೆ. ಇದು ಸರ್ಕಾರವೊಂದರ ಇಚ್ಛಾಶಕ್ತಿಯನ್ನು ಅವಲಂಬಿಸಿರುತ್ತದೆ.

ನಮ್ಮ ಸಾಂವಿಧಾನಿಕ ಪ್ರಜಾಪ್ರಭುತ್ವ ವ್ಯವಸ್ಥೆ ಒಂದು ಅದ್ಭುತವಾದ ತ್ರಿಚಕ್ರದ ರಥ ಇದ್ದಂತೆ. ಒಂದು ಗಾಲಿಗೆ ಗಾಸಿಯಾದರೂ ಸಾಕು, ರಥ ಮೂಲೆ ಗುಂಪಾಗುತ್ತದೆ. ದೇಶದ ಅನೇಕ ರಾಜ್ಯಗಳಲ್ಲಿ ಲೋಕಸೇವಾ ಆಯೋಗಗಳು ಆಪಾದನೆಗಳಿಗೆ ಒಳಗಾಗಿವೆ. ಆದಾಗ್ಯೂ, ಯುಪಿಎಸ್‌ಸಿ, ಕೆಪಿಎಸ್‌ಸಿಯಷ್ಟು ಕೆಟ್ಟದಾಗಿಲ್ಲ. ಅಲ್ಲೊಂದಿಷ್ಟು ಬಂದೋಬಸ್ತ್ ಇದೆ.

2011ರ ನಂತರದಲ್ಲಿ ನ್ಯಾ. ಎನ್.ಕುಮಾರ್ ಅವರು ನೀಡಿದ್ದ ತೀರ್ಪು ಮೌಲ್ಯಮಾಪನದಲ್ಲಿ ಅಕ್ರಮ ತಡೆಗೆ ಕಾರಣವಾಗಿತ್ತು. ಬಳಿಕ 2013ರಲ್ಲಿ ಪಿ.ಸಿ.ಹೋಟಾ ಸಮಿತಿ ರಚನೆ ಆಗಿತ್ತು



ನ್ಯಾಯಪೀಠಗಳ 'ಕಿಡಿ'ಮುತ್ತುಗಳು

ಕೆಪಿಎಸ್‌ಸಿ ಎಂಬುದು ಭ್ರಷ್ಟಾಚಾರ ಕೂಪ.
–1990ರ ದಶಕದ ಆರಂಭದಲ್ಲಿ ನ್ಯಾ. ಕೆ.ಶಿವಶಂಕರ ಭಟ್

ಇಲ್ಲಿರುವಷ್ಟು ಭ್ರಷ್ಟಾಚಾರ ಇನ್ನೆಲ್ಲೂ ಇಲ್ಲ.
–1995ರ ನಂತರದಲ್ಲಿ ನ್ಯಾ. ಆರ್.ವಿ.ರವೀಂದ್ರನ್

ಕೆಪಿಎಸ್‌ಸಿ ಸರಿ ಮಾಡಲು ಟೆಂಡರ್ ಕರೆಯಬೇಕು.
–1997ರ ನಂತರದಲ್ಲಿ ನ್ಯಾ. ಬಿ.ಎನ್.ಮಲ್ಲಿಕಾರ್ಜುನ (ಕೆಎಟಿ ಅಧ್ಯಕ್ಷರೂ ಆಗಿದ್ದವರು)

ಸರಿ ಮಾಡಲು ಯಾರಿಗೂ ಸಾಧ್ಯವಿಲ್ಲ
–1997ರ ನಂತರದಲ್ಲಿ ನ್ಯಾ. ಪಿ.ವಿಶ್ವನಾಥ ಶೆಟ್ಟಿ

ಕೆಪಿಎಸ್‌ಸಿಗೂ ಭ್ರಷ್ಟಾಚಾರಕ್ಕೂ ಅವಿನಾಭಾವ ಸಂಬಂಧ ಇದೆ
–2004ರ ನಂತರದಲ್ಲಿ ನ್ಯಾ. ಕೆ.ಭಕ್ತವತ್ಸಲ

ಸ್ವಾಯತ್ತೆ ಎಲ್ಲಿದೆ?

ಸಾಂವಿಧಾನಿಕ ಸ್ವಾಯತ್ತೆ ಹೊಂದಿದ ಕೆಪಿಎಸ್‌ಸಿಗೆ ಒಬ್ಬ ಅಧ್ಯಕ್ಷ, ಕಾರ್ಯದರ್ಶಿ ಮತ್ತು ಇಂತಿಷ್ಟು ಸಂಖ್ಯೆಯ ಸದಸ್ಯರು ಎಂದು ಇರುತ್ತಾರೆ. ಸರ್ಕಾರವೇ ಇವರನ್ನೆಲ್ಲಾ ನೇಮಕ ಮಾಡಬೇಕು ಮತ್ತು ಮಾಡುತ್ತದೆ. ಸರ್ಕಾರದ ಕೆಲಸ ಏನಿದ್ದರೂ ಇವರನ್ನು ಆಯ್ಕೆ ಮಾಡಿ ರಾಜ್ಯಪಾಲರಿಗೆ ಶಿಫಾರಸು ಮಾಡುವುದು ಮಾತ್ರವಷ್ಟೇ. ಆದರೆ, ಇವರು ಯಾರೂ ಸರ್ಕಾರದ ಅಧೀನದಲ್ಲಿ ಇರುವುದಿಲ್ಲ. ಸರ್ಕಾರ ಇವರನ್ನು ತೆಗೆದುಹಾಕಲಿಕ್ಕೂ ಬರುವುದಿಲ್ಲ.

ಕೆಪಿಎಸ್‌ಸಿ ಕಾರ್ಯದರ್ಶಿ ಸಾಮಾನ್ಯವಾಗಿ ಭಾರತೀಯ ಆಡಳಿತ ಸೇವೆಯ ತತ್ಸಮಾನ ದರ್ಜೆಯ ಅಧಿಕಾರಿಯೇ ಇರುತ್ತಾರೆ. ಮುಖ್ಯವಾಗಿ ಇವರು ಸರ್ಕಾರ ಮತ್ತು ಲೋಕಸೇವಾ ಆಯೋಗದ ನಡುವಿನ ಕೊಂಡಿ. ತಮಾಷೆ ಎಂದರೆ ಈ ಕಾರ್ಯದರ್ಶಿ ರಬ್ಬರ್ ಸ್ಟ್ಯಾಂಪ್‌ನಂತೆ. ಇವರನ್ನು ಅಧ್ಯಕ್ಷರು ಮತ್ತು ಸದಸ್ಯರು ನಿಯಂತ್ರಿಸುತ್ತಾರೆ.

ಅಕ್ರಮ–ಸಕ್ರಮ ಚಾಳಿ

1998, 1999 ಮತ್ತು 2004ರ ಸಾಲಿನ ಕೆಪಿಎಸ್‌ಸಿ ನೇಮಕಾತಿಗಳು ದಶಕಗಳೇ ಕಳೆದರೂ ತೀರ್ಮಾನವಾಗದೆ ಕೋರ್ಟ್‌ಗಳಲ್ಲಿ ಕಗ್ಗಂಟಾಗಿ ಉಳಿದಿದ್ದವು. ಅಂತಿಮವಾಗಿ, ಎಲ್ಲಾ ನೇಮಕಾತಿಗಳು ಅಕ್ರಮ, ಅನ್ಯಾಯ ಹಾಗೂ ಕಾನೂನುಬಾಹಿರ ಕ್ರಮಗಳಿಂದ ಕೂಡಿವೆ. ಸಂವಿಧಾನದ ನಿಯಮಗಳಿಗೆ ವಿರುದ್ಧವಾಗಿವೆ ಎಂದು ತಿಳಿದು ಕೋರ್ಟ್‌ಗಳು ಈ ನೇಮಕಾತಿಗಳನ್ನು ರದ್ದುಗೊಳಿಸಿ, ಪುನಃ ಆಯ್ಕೆ ಮಾಡಲು ತಿಳಿಸಿದ್ದರೂ ಆಡಳಿತಾರೂಢ ಸರ್ಕಾರಗಳು ಎಲ್ಲಾ ನ್ಯಾಯನೀತಿಗಳಿಗೆ ತಿಲಾಂಜಲಿ ಇಟ್ಟು ಶಾಸನ ಸಭೆಗಳ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಮುನ್ನಡೆದಿವೆ. ಕೋರ್ಟ್‌ಗಳು ನೀಡಿದ ತೀರ್ಪುಗಳ ವಿರುದ್ಧ ಶಾಸನಗಳನ್ನು ರಚಿಸಿ ಸವಾಲು ಎಂಬಂತೆ ಬಡ, ಪ್ರತಿಭಾವಂತ ಆಕಾಂಕ್ಷಿ ಅಭ್ಯರ್ಥಿಗಳ ಭವಿಷ್ಯಕ್ಕೆ ಮಣ್ಣುಸುರಿದಿವೆ.

ಸರ್ಕಾರಗಳು ಕೆಪಿಎಸ್‌ಸಿಗೆ ದುರ್ಬಲ, ಅಸಮರ್ಥ, ಅದಕ್ಷ ಐಎಎಸ್ ಅಧಿಕಾರಿಗಳನ್ನು ಹುಡುಕಿ ಹುಡುಕಿ ನೇಮಿಸುವುದರ ಹಿಂದೆ ದೊಡ್ಡ ಹುನ್ನಾರವೇ ಇರುತ್ತದೆ. ಈ ಅಧಿಕಾರಿಗಳು ತಮ್ಮ ಸ್ವಂತಿಕೆ ಮರೆತು ಕೆಪಿಎಸ್‌ಸಿಯಲ್ಲಿನ ಅಕ್ರಮಗಳನ್ನು ಮರೆಮಾಚಿ ಸ್ವಾಮಿನಿಷ್ಠೆ ಮೆರೆಯುತ್ತಾರೆ. ನೇಮಕಾತಿಗಳ ಆಳ–ಅಗಲ ತಿಳಿಯದ ಇವರು ಕೋರ್ಟ್‌ಗಳಿಗೆ, ಸರಿ ಇರುವುದನ್ನು ತಪ್ಪು ಎನ್ನುವುದು, ತಪ್ಪಿರುವುದನ್ನು ಸರಿ ಎನ್ನುವ ಚಾಳಿ ಬೆಳೆಸಿಕೊಂಡು ಪ್ರಮಾಣಪತ್ರಗಳನ್ನು ಸಲ್ಲಿಸಿ ಕೋರ್ಟ್‌ಗಳಿಗೆ ಸತ್ಯಸಂಗತಿ ಮರೆಮಾಚುತ್ತಾರೆ. ಹೀಗಾಗಿ ಪ್ರತಿಭಾವಂತ ಅಭ್ಯರ್ಥಿಗಳ ಪಾಲಿಗೆ ಕೆಪಿಎಸ್‌ಸಿ ಹುದ್ದೆ ಒಂದು ಮರೀಚಿಕೆಯಾಗಿದೆ.

ದಾಖಲೆಗಳ ನಾಶ...

1999ರಲ್ಲಿ ಕೆಪಿಎಸ್‌ಸಿ ನಡೆಸಿದ ಪರೀಕ್ಷೆಯಲ್ಲಿ ಗ್ರೂಪ್ 'ಎ' ಮತ್ತು 'ಬಿ' ಹುದ್ದೆಯ ಆಕಾಂಕ್ಷಿಯಾಗಿ ದ್ಯಾಮಾನಾಯಕ್ ಎ. ಚವಾಣ್ ಎಂಬ ಅಭ್ಯರ್ಥಿ ಹಾಜರಾಗಿದ್ದರು. ಫಲಿತಾಂಶ ಪ್ರಕಟವಾದ ಮೊದಲ ಹಂತದಲ್ಲಿ, ಅವರು ಮುಖ್ಯ ಪರೀಕ್ಷೆಯಲ್ಲಿ 1,052 ಅಂಕಗಳನ್ನು ಪಡೆದಿದ್ದಾರೆಂದು ತೋರಿಸಲಾಯಿತು. ನಂತರ ಆ ಪಟ್ಟಿಯನ್ನು ತೆಗೆದುಹಾಕಲಾಯಿತು ಮತ್ತು ಅವರ ಹೆಸರು ಮುಖ್ಯ ಪರೀಕ್ಷೆಗಳ ಅರ್ಹ ಪಟ್ಟಿಯಲ್ಲಿ ಸ್ಥಾನ ಪಡೆಯಲಿಲ್ಲ.

ನಂತರ ಒಂದಲ್ಲ ಒಂದು ಕಾರಣಕ್ಕಾಗಿ ಈ ವಿಷಯವನ್ನು ವಿಳಂಬಗೊಳಿಸಲಾಯಿತು. ಇಂದಿಗೂ ಅರ್ಜಿ ಹೈಕೋರ್ಟ್ ಮುಂದೆ ಪರಿಗಣನೆಗೆ ಬಾಕಿ ಇದೆ. ಮುಖ್ಯವಾಗಿ ಪಟ್ಟಿಯನ್ನು ನೋಟಿಸ್ ಬೋರ್ಡ್‌ನಿಂದ ತೆಗೆದುಹಾಕಿದ ನಂತರ, ಅವರು 1,052 ಅಂಕಗಳ ಬದಲಿಗೆ 658 ಅಂಕಗಳನ್ನು ಪಡೆದಿದ್ದಾರೆಂದು ತೋರಿಸಲಾಗಿದೆ. ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳನ್ನು ತೋರಿಸಿ ಎಂದು ಕೋರ್ಟ್ ನಿರ್ದೇಶಿಸಿದಾಗ, 'ಉತ್ತರ ಪತ್ರಿಕೆಗಳನ್ನು ನಾಶಪಡಿಸಲಾಗಿದೆ' ಎಂದು ಕೆಪಿಎಸ್‌ಸಿ ಪ್ರಮಾಣ ಪತ್ರ ಸಲ್ಲಿಸಿತ್ತು.

ಒಬ್ಬ ವ್ಯಕ್ತಿಗೆ ಸೇರಿದ ಯಾವುದೇ ದಾಖಲೆ, ಅದು ಅಂಕಪಟ್ಟಿಯಾಗಿರಲಿ ಅಥವಾ ಇನ್ನೇನಾದರೂ ಆಗಿರಲಿ, ಕೋರ್ಟ್‌ನಲ್ಲಿ ವಿಚಾರಣೆ ಬಾಕಿ ಇರುವಾಗ, ಅದು ಅಂತಿಮವಾಗಿ ಇತ್ಯರ್ಥಗೊಳ್ಳುವ ತನಕ ನಾಶಪಡಿಸಬಾರದು ಎಂಬುದನ್ನು ಒಬ್ಬ ಸಾಮಾನ್ಯನೂ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಯಾವುದೇ ಸಂದರ್ಭದಲ್ಲಿ, ಆಯ್ಕೆ ಸಂಸ್ಥೆಯು ವಿಚಾರಣೆ ಬಾಕಿ ಇರುವ ಸಮಯದಲ್ಲಿ ಪತ್ರಿಕೆಯನ್ನು ನಾಶಮಾಡಲು ನಿರ್ಧರಿಸಿದರೆ, ಅದನ್ನು ನ್ಯಾಯಾಲಯದ ಅನುಮತಿಯೊಂದಿಗೆ ಮಾತ್ರ ಮಾಡಬಹುದು. ಆದರೆ, ಅಂತಹ ಯಾವುದೇ ನಿರ್ದೇಶನಗಳನ್ನು ಪಡೆಯದೆ ಕೆಪಿಎಸ್‌ಸಿ ಮೌಲ್ಯಮಾಪನ ಮಾಡಿದ ಉತ್ತರ ಪತ್ರಿಕೆಗಳನ್ನು ಅನಿಯಂತ್ರಿತವಾಗಿ ನಾಶಪಡಿಸಿದೆ.

ಈ ನಾಶದ ಹಿಂದಿನ ಉದ್ದೇಶ ದಸ್ತಾವೇಜು ಸಾಕ್ಷ್ಯವನ್ನು ಮರೆಮಾಡುವುದು ಮತ್ತು ಸಂಭವನೀಯ ಪರಿಣಾಮ ಮತ್ತು ಕಾನೂನಿನ ಹಿಡಿತದಿಂದ ತಪ್ಪಿಸಿಕೊಳ್ಳುವುದು ಎಂಬುದು ನಿಸ್ಸಂಶಯ.


ಸಿಐಡಿ ತನಿಖೆ ಮತ್ತು ಹೈಕೋರ್ಟ್‌ನಿಂದ ನೇಮಕಗೊಂಡ ಸತ್ಯಶೋಧನಾ ಸಮಿತಿ ಪರಿಶೀಲನೆ ನಡೆಸಿದ್ದರೂ, ಅರ್ಜಿದಾರರ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಮೂಲ ಅಂಕಪಟ್ಟಿಗಳು ಕೆಪಿಎಸ್‌ಸಿಯ ಕಾನೂನುಬಾಹಿರ ಕೃತ್ಯಗಳಿಂದ ಉದ್ದೇಶಪೂರ್ವಕವಾಗಿ ನಾಶವಾಗಿದ್ದು ಅನೇಕರ ಜೀವನವನ್ನು ಕತ್ತಲೆಯಲ್ಲಿ ಮುಳುಗಿಸಿದೆ.



ಲಕ್ಷ್ಮಿ ಅಯ್ಯಂಗಾರ್, ಹೈಕೋರ್ಟ್‌ನ ಪದಾಂಕಿತ ಹಿರಿಯ ವಕೀಲೆ

ಬದಲಾಗದ ನಡೆ

1998, 1999 ಮತ್ತು 2004ರ ಸಾಲಿನ ಪ್ರಕರಣಗಳಿಂದ ಹಿಡಿದು ಇಲ್ಲಿಯವರೆಗಿನ ಕೆಪಿಎಸ್‌ಸಿ ನೇಮಕಾತಿಗಳ ಭ್ರಷ್ಟಾಚಾರ, ಅಕ್ರಮ, ಅನ್ಯಾಯ ಹಾಗೂ ಸ್ವಜನಪಕ್ಷಪಾತಗಳಂತಹ ಕಾನೂನುಬಾಹಿರ ಕೃತ್ಯಗಳನ್ನು ಗಮನಿಸಿರುವ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳು ಸಾಕಷ್ಟು ಬಾರಿ ಚಾಟಿ ಬೀಸಿವೆ. ಕೆಪಿಎಸ್‌ಸಿ ತನ್ನ ಕಾರ್ಯದಲ್ಲಿ ಸುಧಾರಣೆ ತಂದು ತಪ್ಪುಗಳನ್ನು ತಿದ್ದಿಕೊಂಡು ಉತ್ತಮವಾಗಿ ಕಾರ್ಯ ನಿರ್ವಹಿಸಲು ಹಲವಾರು ಕ್ರಮಗಳನ್ನು ಸೂಚಿಸಿವೆ. ಆದರೂ, ಕೆಪಿಎಸ್‌ಸಿ ತನ್ನ ನಡೆಯಲ್ಲಿ ಸುಧಾರಣೆ ಕಂಡುಕೊಂಡಿಲ್ಲ. ಕೆಪಿಎಸ್‌ಸಿ ನಡೆಸಿರುವ ಪರೀಕ್ಷೆ, ಆಯ್ಕೆ ಪಟ್ಟಿಗಳು ಸಿಐಡಿ ಹಾಗೂ ಇತರೆ ತನಿಖೆಗಳಲ್ಲಿ ಅಕ್ರಮ ಎಂದು ಕಂಡು ಬಂದಿವೆ. ಅನ್ಯಾಯ ಕಂಡು ಬಂದರೂ ಅದನ್ನು ಎಸಗಿದವರ ಬಗ್ಗೆ ಕ್ರಮ ವಹಿಸದೇ ಇರುವುದು ಹಾಗೂ ಸಂಬಂಧಿಸಿದ ಆಯ್ಕೆ ಪಟ್ಟಿಗಳು 'ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟಿವೆ' ಎನ್ನುವ ಆದೇಶಗಳಿಂದ ಲಾಭ ಪಡೆಯುವುದು ನಡೆದೇ ಇದೆ. ಇದರಿಂದಾಗಿ ಅಕ್ರಮ ಫಲಾನುಭವಿಗಳು ನಿರಂತರವಾಗಿ ತಮ್ಮ ಹುದ್ದೆಗಳನ್ನು ಭದ್ರಪಡಿಸಿಕೊಳ್ಳುತ್ತಲೇ ಬಂದಿದ್ದಾರೆ. ಇಂತಹುದಕ್ಕೆ ಅವಕಾಶ ನೀಡದೆ ಬದಲಾವಣೆ ತರುವುದು ಅತ್ಯಂತ ಸೂಕ್ತವಾಗಿರುತ್ತದೆ.



ಕೆ.ಆರ್.ಖಲೀಲ್ ಅಹ್ಮದ್, ಕೆಪಿಎಸ್‌ಸಿ ವಿರುದ್ಧ ಅರ್ಜಿ ಸಲ್ಲಿಸಿದ ಅಭ್ಯರ್ಥಿ, ಸದ್ಯ ಹೈಕೋರ್ಟ್ ವಕೀಲ

ಮರ್ಯಾದಸ್ಥ ಸದಸ್ಯರ ಅಗತ್ಯವಿದೆ

ಕೆಪಿಎಸ್‌ಸಿ ಮೇಲೆ ಗೂಬೆ ಕೂರಿಸುವುದು ಸಾಮಾನ್ಯವಾಗಿದೆ. ದಿನವೂ ಪತ್ರಿಕೆಗಳಲ್ಲಿ ಕೆಪಿಎಸ್‌ಸಿ ತೇಜೋವಧೆ ಮಾಡುವಂತಹ ಸುದ್ದಿಗಳು ಬರುತ್ತಿದ್ದರೆ ಸರ್ಕಾರಕ್ಕೂ ಇದರ ಮೇಲೆ ಹತೋಟಿ ಸಾಧಿಸಲು ಆಯುಧ ಸಿಕ್ಕಂತಾಗುತ್ತದೆ.


ವಾಸ್ತವದಲ್ಲಿ ಕೆಪಿಎಸ್‌ಸಿ ಸಂಪೂರ್ಣ ಶುದ್ಧ ಎಂದು ಹೇಳಲಿಕ್ಕೆ ಆಗದಿದ್ದರೂ ಇದರ ನ್ಯೂನತೆಗಳಿಗೆ ಸರ್ಕಾರವೇ ಪ್ರಮುಖ ಹೊಣೆಗಾರ. ಯಾಕೆಂದರೆ ಯಾವುದೇ ನೇಮಕಾತಿಗೂ ಮುನ್ನ ನಿಯಮಗಳನ್ನು ಮತ್ತು ಮೀಸಲು ಹಂಚಿಕೆಯನ್ನು ರೂಪಿಸಬೇಕಾದ್ದು ಆಡಳಿತಾರೂಢ ಸರ್ಕಾರದ ಜವಾಬ್ದಾರಿ. ಕೆಪಿಎಸ್‌ಸಿ ಕೇವಲ ಆಯ್ಕೆ ಮಾಡುತ್ತದೆ. ಅಂತೆಯೇ, ಕೆಪಿಎಸ್‌ಸಿ ಕಾರ್ಯದರ್ಶಿ ಮತ್ತು ಸದಸ್ಯರ ನಡುವಿನ ಜವಾಬ್ದಾರಿ ಏನೇನು ಎಂಬುದು ಈತನಕ ಸ್ಪಷ್ಟವಾಗಿ ಎಲ್ಲೂ ವಿದಿತವಾಗಿಲ್ಲ. ಇಲ್ಲಿ ಏನೇ ಹೇರಾಫೇರಿ ನಡೆದರೂ ಕೋರ್ಟ್‌ಗೆ ಉತ್ತರ ಕೊಡಬೇಕಾದವರು ಕಾರ್ಯದರ್ಶಿ. ಮರ್ಯಾದಸ್ಥ ಸದಸ್ಯರನ್ನು ನೇಮಕ ಮಾಡಿದರೆ ಕೆಪಿಎಸ್‌ಸಿಗೊಂದು ಬೆಲೆ ಇರುತ್ತದೆ.



ಪಿ.ಎಸ್.ರಾಜಗೋಪಾಲ್, 25 ವರ್ಷಗಳಿಂದ ಕೆಪಿಎಸ್‌ಸಿ ಪರ ಹೈಕೋರ್ಟ್‌ನ ಪದಾಂಕಿತ ಹಿರಿಯ ವಕೀಲ

ಜೈಲಿಗೆ ಹೋದವರು...

ಕೋರ್ಟ್‌ಗಳು ನೀಡುವ ತಡೆ, ನಿರ್ಬಂಧಗಳನ್ನು ತೆರವುಗೊಳಿಸಿ ನೇಮಕಾತಿ ಮೇಲಿನ ಕಳಂಕ ನಿವಾರಿಸುವಲ್ಲಿ ಸರ್ಕಾರಗಳು ವಿಫಲವಾಗಿವೆ. ಇಂದಿಗೂ 1998ರ ನೇಮಕಾತಿ ಮೇಲಿನ ತಡೆ ನಿರ್ಬಂಧ ತೆರವು ಮಾಡಿಲ್ಲದಿರುವುದು ಇದಕ್ಕೊಂದು ಉತ್ತಮ ಉದಾಹರಣೆ. ಆಡಳಿತ ಸೇವೆಯಲ್ಲಿ ಆಯಕಟ್ಟಿನ ಜಾಗಗಳಿಗೆ ಕಳಂಕಿತ ಅಕ್ರಮ ಅಭ್ಯರ್ಥಿಗಳನ್ನು ನೇಮಿಸುವುದು, ಬಡ್ತಿ ಹಾಗೂ ಇತರೆ ಸೌಲಭ್ಯಗಳನ್ನು ನೀಡಿ ಕಾನೂನಿನ ಉಲ್ಲಂಘನೆಯೊಂದಿಗೆ ಭ್ರಷ್ಟಾಚಾರ ಉತ್ತೇಜಿಸುವುದು ನಿಂತಿಲ್ಲ. ಅಕ್ರಮ ನೇಮಕಾತಿಗಳಲ್ಲಿನ ಕಳಂಕಿತರು ಫಲಾನುಭವಿಗಳು ಎಂದು ಗೊತ್ತಿದ್ದರೂ ಸರ್ಕಾರ; ಕೆಪಿಎಸ್‌ಸಿ ಕಾರ್ಯದರ್ಶಿ ಹಾಗೂ ಇತರೆ ಹುದ್ದೆಗಳಿಗೆ ಅಂತಹವರನ್ನು ನೇಮಿಸಿ ಭ್ರಷ್ಟಾಚಾರ ಪೋಷಣೆಗೆ ಅವಕಾಶ ಮಾಡಿಕೊಟ್ಟಿದೆ.



ಡಾ.ಎಚ್.ಎನ್.ಕೃಷ್ಣ ಅವರು ಕೆಪಿಎಸ್‌ಸಿ ಅಧ್ಯಕ್ಷರಾಗಿದ್ದಾಗ (1998-2004) ನೇಮಕಾತಿಯಲ್ಲಿ ಭ್ರಷ್ಟಾಚಾರ ಮತ್ತು ಅಕ್ರಮಗಳನ್ನು ಎಸಗಿದ್ದಾರೆ ಎಂಬ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಸಿಐಡಿ ಅವರನ್ನು 2011ರ ಅಕ್ಟೋಬರ್ 7ರಂದು ಅವರನ್ನು ಬಂಧಿಸಿತು. ಪರಿಣಾಮವಾಗಿ 2011ರ ಅಕ್ಟೋಬರ್ 13ರಂದು ಎಂಟನೇ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಕೃಷ್ಣ ಅವರನ್ನು ಜೈಲಿಗೆ ತಳ್ಳಿತ್ತು.

ಕೆಪಿಎಸ್‌ಸಿ ಪರೀಕ್ಷೆಗಳಲ್ಲಿ ಅಕ್ರಮ, ಭ್ರಷ್ಟಾಚಾರ ಮತ್ತು ನಕಲು ಪ್ರಕರಣಗಳಿಗೆ ಸಂಬಂಧಿಸಿದಂತೆ ತಪ್ಪು ಮಾಡಿದ ಅಭ್ಯರ್ಥಿಗಳು ಮತ್ತು ಅಧಿಕಾರಿಗಳಿಗೆ ಕಠಿಣ ಶಿಕ್ಷೆ ಜಾರಿಯಲ್ಲಿದೆ. ಹೊಸ ನಿಯಮಗಳ ಪ್ರಕಾರ, ಅಕ್ರಮದಲ್ಲಿ ಭಾಗಿಯಾದವರಿಗೆ 10 ವರ್ಷಗಳ ಜೈಲು ಶಿಕ್ಷೆ ಮತ್ತು ₹10 ಕೋಟಿಯವರೆಗೆ ದಂಡ ವಿಧಿಸಬಹುದಾಗಿದೆ. ಆದರೆ, ಈ ಕಾನೂನುಗಳಿಗೆ ಕುರುಡು ಕಾಂಚಾಣದ ಮುಸುಕು ಹೊದಿಸಲಾಗಿದೆ.

ದುರ್ಬಲವಾದ ಅಧಿಕಾರ ವಿಂಗಡಣಾ ತತ್ವ

ಕೆಪಿಎಸ್‌ಸಿಯಂತಹ ಸಾಂವಿಧಾನಿಕ ಸಂಸ್ಥೆಯ ವಿಷಯದಲ್ಲಿ ಅಧಿಕಾರ ವಿಂಗಡಣಾ ತತ್ವ ಇಂದು ದುರ್ಬಲವಾಗಿ ಕಾಣುತ್ತಿದೆ. ಈ ಅಧಿಕಾರ ವಿಂಗಡಣಾ ತತ್ವವನ್ನು 13 ನ್ಯಾಯಮೂರ್ತಿಗಳ ಸಾಂವಿಧಾನಿಕ ಪೀಠ (5 ಮತ್ತು 5ಕ್ಕಿಂತಲೂ ಹೆಚ್ಚಿನ ನ್ಯಾಯಮೂರ್ತಿಗಳ ಪೀಠಗಳೆಲ್ಲವೂ ಸಾಂವಿಧಾನಿಕ ಪೀಠವೆ) ಕೇಶವಾನಂದ ಭಾರತಿ ಪ್ರಕರಣದಲ್ಲಿ ಯಾವತ್ತೋ ಸ್ಪಷ್ಟಪಡಿಸಿಯಾಗಿದೆ. ಅಧಿಕಾರ ವಿಂಗಡಣಾ ತತ್ವ ಎಂಬುದು ಸಂವಿಧಾನದ ಮೂಲ ಆಶಯ (ಬೇಸಿಕ್ ಫೀಚರ್) ಎಂಬುದನ್ನು ಈ ಪೀಠವು ತೊಳೆತೊಳೆಯಾಗಿ ಬಿಡಿಸಿಟ್ಟಿದೆ.

ಸರ್ಕಾರದ ಪ್ರಮುಖ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ನಡುವಿನ ಅಧಿಕಾರವನ್ನು ಪ್ರತ್ಯೇಕವಾಗಿ ಹಂಚಿಕೆ ಮಾಡಲಾಗಿದೆ. ಪ್ರತಿಯೊಂದು ಅಂಗವೂ ತನ್ನ ಕಾರ್ಯವ್ಯಾಪ್ತಿಯಲ್ಲಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತದೆ. ಇದು ಅಧಿಕಾರದ ಕೇಂದ್ರೀಕರಣವನ್ನು ತಡೆದು, ಸರ್ವಾಧಿಕಾರವನ್ನು ತಪ್ಪಿಸಿ, ಪ್ರಜಾಪ್ರಭುತ್ವದ ರಕ್ಷಣೆ ಮತ್ತು ನಾಗರಿಕರ ಸ್ವಾತಂತ್ರ್ಯವನ್ನು ಖಚಿತಪಡಿಸಿಕೊಳ್ಳಲು ನೆರವಾಗುತ್ತದೆ. ಒಂದು ಅಂಗವು ಇನ್ನೊಂದು ಅಂಗದ ಮೇಲೆ ನಿಗಾ ಇರಿಸಿ, ಅಧಿಕಾರದ ದುರುಪಯೋಗವಾಗದಂತೆ ನೋಡಿಕೊಳ್ಳುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧವನ್ನು ನಿಲ್ಲಿಸಲು ಪಾಕಿಸ್ತಾನ ಮಧ್ಯಸ್ಥಿಕೆ ವಹಿಸಿದ ವಿಚಾರವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು ಕೇಂದ್ರ ಸರ್ಕಾರವನ್ನು ಟೀಕಿಸಿದ್ದಾರೆ ಎಂದು ಪ್ರತಿಪಾದಿಸುತ್ತಾ ಪಾಕಿಸ್ತಾನ ಪರವಾಗಿರುವ @ಇನ್‌ಸೈಡರ್‌ಡಬ್ಲ್ಯುಬಿ ಎಂಬ 'ಎಕ್ಸ್' ಖಾತೆಯಲ್ಲಿ ವಿಡಿಯೊವನ್ನು ಪೋಸ್ಟ್ ಮಾಡಲಾಗಿದೆ. ಪಾಕಿಸ್ತಾನದ ಕೆಲವು ಪತ್ರಕರ್ತರು ಕೂಡ ಈ ವಿಡಿಯೊವನ್ನು ಹಂಚಿಕೊಂಡಿದ್ದಾರೆ. ತರೂರ್ ಅವರು ಸುದ್ದಿ ಚಾನೆಲ್ ಒಂದರಲ್ಲಿ ಅಭಿಪ್ರಾಯ ವ್ಯಕ್ತಪಡಿಸುವ ದೃಶ್ಯ ವಿಡಿಯೊದಲ್ಲಿದೆ. ಆದರೆ, ಇದು ಸುಳ್ಳು.



ವಿಡಿಯೊದ ಕೀಫ್ರೇಮ್ ಒಂದನ್ನು ರಿವರ್ಸ್ ಸರ್ಚ್ ವಿಧಾನದಲ್ಲಿ ಹುಡುಕಾಟ ನಡೆಸಿದಾಗ, ಪತ್ರಕರ್ತ ರಾಜ್‌ದೀಪ್ ದೇಸಾಯಿ ಅವರು ಶಶಿ ತರೂರ್ ಅವರೊಂದಿಗೆ ನಡೆಸಿದ ವಿಡಿಯೊ ಸಂದರ್ಶನದ ಲಿಂಕ್ ಸಿಕ್ಕಿತು. ಇಂಡಿಯಾ ಟುಡೇಯಲ್ಲಿ 2025ರ ಡಿಸೆಂಬರ್ 26ರಂದು ಆ ಸಂದರ್ಶನ ಪ್ರಕಟವಾಗಿತ್ತು. ಆ ವಿಡಿಯೊದಲ್ಲಿ ಶಶಿ ತರೂರ್ ಅವರು ಈಗ ಎಕ್ಸ್‌ನಲ್ಲಿ ಹಂಚಿಕೊಳ್ಳಲಾಗುತ್ತಿರುವ ವಿಡಿಯೊದಲ್ಲಿರುವ ಧಿರಿಸಿನಲ್ಲೇ ಇರುವುದು ಕಾಣಿಸುತ್ತದೆ. ವಿಡಿಯೊದ ಹಿನ್ನೆಲೆಯೂ ಅದೇ. ಈಗ ಪೋಸ್ಟ್ ಮಾಡಲಾಗಿರುವ ವಿಡಿಯೊದಲ್ಲಿ 'ಜಾಗತಿಕ ಮಟ್ಟದಲ್ಲಿ ಭಾರತಕ್ಕೆ ಸೋಲು' ಎಂಬ ತಲೆಬರಹ ನೀಡಲಾಗಿದೆ. ಮೂಲ ವಿಡಿಯೊದಲ್ಲಿ ಅದಿಲ್ಲ. ಅನುಮಾನ ಬಂದು, ಎಕ್ಸ್‌ನಲ್ಲಿ ಪೋಸ್ಟ್ ಮಾಡಲಾಗಿರುವ ವಿಡಿಯೊದಲ್ಲಿರುವ ತರೂರ್ ಅವರ ಧ್ವನಿಯ ಮಾದರಿಯನ್ನು ಎಐ ಪತ್ತೆ ಟೂಲ್ ಹಿಯಾದಲ್ಲಿ ಹಾಕಿ ಪರಿಶೀಲಿಸಿದಾಗ, ಅದು ಡಿಜಿಟಲ್ ತಂತ್ರಜ್ಞಾನದಲ್ಲಿ ತಿರುಚಿದ ಧ್ವನಿ ಎಂಬುದು ದೃಢಪಟ್ಟಿತು. ಡೀಪ್‌ಫೇಕ್ ವಿಡಿಯೊವನ್ನು ಹಂಚಿಕೊಂಡು ಸುಳ್ಳು ಮಾಹಿತಿ ಹಂಚಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಏಕಾಗ್ರತೆ ಸಾಧನೆ ಹೇಗೆ?

ನುಡಿ ಬೆಳಗು



ದೀಪಾ ಹಿರೇಗುತ್ತಿ

ಬಹು ಹಿಂದೆ ಬೌದ್ಧ ಗುರುಕುಲವೊಂದರಲ್ಲಿ ಯುವ ಸನ್ಯಾಸಿಯೊಬ್ಬ ತನ್ನ ಗುರುಗಳ ಹತ್ತಿರ ಹೋಗಿ ಹೇಳಿದ, 'ಗುರುಗಳೇ, ನಾನು ಇಲ್ಲಿ ಇರುವುದಿಲ್ಲ. ನನಗೆ ಶಾಂತಿಯುತವಾಗಿ ಇರುವ ಕಡೆ ಅಧ್ಯಯನ ಮಾಡಬೇಕಾಗಿದೆ. ಅನುಮತಿ ಕೊಡಿ'. ಗುರುಗಳು, ಯಾಕೆ ಎಂದು ಕೇಳಿದರು. ಆಗ ಶಿಷ್ಯ, 'ಇಲ್ಲಿ ಯಾರಿಗೂ ನನ್ನನ್ನು ಕಂಡರೆ ಆಗುವುದಿಲ್ಲ. ಸನ್ಯಾಸಿಗಳಾದರೂ ಬಹಳ ರಾಜಕೀಯ ಮಾಡುತ್ತಾರೆ. ಬೇರೆಯವರ ಕುರಿತು ಕೆಟ್ಟದ್ದನ್ನೇ ಆಡುತ್ತಾರೆ. ನನ್ನ ಬಗ್ಗೆ ಬಿಡಿ, ನಿಮ್ಮ ಬಗ್ಗೆ ಕೂಡ ಸುಳ್ಳುಸುದ್ದಿಗಳನ್ನು ಹರಡುತ್ತಾರೆ. ನಾನು ನನ್ನ ಅಧ್ಯಾತ್ಮ ಸಾಧನೆಯನ್ನು ಮಾಡಲಾಗುತ್ತಿಲ್ಲ' ಅಂದ.

ಆಗ ಗುರುಗಳು ಹೇಳಿದರು, 'ಆಯಿತು. ನಿನ್ನನ್ನು ಹೋಗಲು ಬಿಡುತ್ತೇನೆ. ಆದರೆ ಹೋಗುವ ಮುನ್ನ ಒಂದು ಉಪಕಾರ ಮಾಡು'. ಶಿಷ್ಯ ಏನೆಂದು ಕೇಳಿದಾಗ, ಅಲ್ಲಿಯೇ ಇದ್ದ ಚಮಚವೊಂದರಲ್ಲಿ ನೀರು ತುಂಬಿ ಅವನಿಗೆ ಕೊಟ್ಟು, 'ಒಂದು ಹನಿ ನೀರೂ ಚೆಲ್ಲದಂತೆ ಇಡೀ ಗುರುಕುಲವನ್ನು ಸುತ್ತಿ ಹಾಕಿ ಬಂದರೆ ನೀನು ಹೋಗಲು ಸ್ವತಂತ್ರ' ಅಂದರು.

ಆಗ ಶಿಷ್ಯ ಬಹಳ ಗಮನವಿಟ್ಟು ಒಂದು ಹನಿಯೂ ತುಳುಕದಂತೆ ಆ ಚಮಚವನ್ನಿಟ್ಟುಕೊಂಡು ಇಡೀ ಗುರುಕುಲವನ್ನು ಸುತ್ತು ಹಾಕಿದ. ಎರಡು ಗಂಟೆಗಳ ನಂತರ ಹೆಮ್ಮೆಯಿಂದ ಚಮಚದ ನೀರನ್ನು ಚೆಲ್ಲದಂತೆ ತಂದ ಶಿಷ್ಯ ಹೇಳಿದ, 'ಗುರುಗಳೇ, ಚೂರು ಚೆಲ್ಲದಂತೆ ತಂದೆ ನೋಡಿ, ಈಗ ನಿಮ್ಮ ಮಾತು ಉಳಿಸಿಕೊಂಡು ನನ್ನನ್ನು ಕಳಿಸಿಕೊಡಿ'.

ಆಗ ಗುರುಗಳು, 'ಖಂಡಿತ, ನಿನ್ನನ್ನು ಕಳಿಸಿಕೊಡುತ್ತೇನೆ. ಆದರೆ ಹೋಗುವ ಮುನ್ನ ಒಂದು ಮಾತು ಹೇಳು. ನೀನು ಚಮಚದಲ್ಲಿ ನೀರು ತೆಗೆದುಕೊಂಡು ಹೋಗುತ್ತಿದ್ದೆಯಲ್ಲ, ಆಗ ಯಾರಾದರೂ ಸನ್ಯಾಸಿಗಳು ರಾಜಕೀಯ ಮಾಡುವುದನ್ನು ನೋಡಿದೆಯಾ? ಅಥವಾ ಬೇರೆಯವರ ಬಗ್ಗೆ ಕೆಟ್ಟ ಮಾತಾಡುವುದನ್ನು ಕೇಳಿದೆಯಾ?' ಆಗ ಶಿಷ್ಯ, 'ನನ್ನ ಗಮನ ಪೂರ್ತಿ ಚಮಚದ ಮೇಲಿದ್ದುದರಿಂದ ನನಗೇನೂ ಕಾಣಲಿಲ್ಲ, ಕೇಳಲೂ ಇಲ್ಲ' ಅಂದ. ಆಗ ಗುರುಗಳು ಮುಗುಳ್ನಗುತ್ತ, 'ನೋಡು, ಇದೇ ರೀತಿ ನೀನು ಪೂರ್ತಿಯಾಗಿ ನಿನ್ನ ಗುರಿಯ ಕಡೆ ಗಮನ ಹರಿಸಿದರೆ ಬೇರೆ ಯಾರ ಅನವಶ್ಯಕ ಮಾತುಗಳನ್ನು ಕೇಳಲೂ ನಿನ್ನ ಬಳಿ ಸಮಯವಿರುವುದಿಲ್ಲ. ಒಂದು ವಿಷಯ ನೆನಪಿಟ್ಟುಕೋ, ನೀನು ಎಲ್ಲಿ ಹೋದರೂ ಅಲ್ಲಿ ಈ ರೀತಿಯ ಜನಗಳಿರುತ್ತಾರೆ. ಆದರೆ ನಿನ್ನ ಉದ್ದೇಶ ಸ್ಪಷ್ಟವಾಗಿದ್ದರೆ ಅವೆಲ್ಲ ಲೆಕ್ಕಕ್ಕೆ ಬರುವುದಿಲ್ಲ' ಅಂದರು. ಗುರುಗಳ ಮಾತು ಅರ್ಥ ಮಾಡಿಕೊಂಡ ಶಿಷ್ಯ ಅಲ್ಲಿಯೇ ತನ್ನ ವಿದ್ಯಾಭ್ಯಾಸ ಮುಂದುವರಿಸಿ ಯಶಸ್ವಿಯಾದ.


ಸುತ್ತಲಿನ ನೂರಾರು ಆಕರ್ಷಣೆಗಳಿಂದ, ಸಮಸ್ಯೆಗಳಿಂದ ಬಚಾವಾಗಲು ಗುರಿಯೆಡೆಗೆ ಪೂರ್ತಿ ಗಮನ ಹರಿಸುವುದೊಂದೇ ನಮ್ಮೆಲ್ಲರಿಗೂ ಇರುವ ಮಾರ್ಗ. ಇತಿಹಾಸದ ಪುಟಗಳಲ್ಲಿ ಸಿಗುವ ಮಹಾತ್ಮರ ಉದಾಹರಣೆಗಳೇ ಇದಕ್ಕೆ ಸಾಕ್ಷಿ. ತಮ್ಮ ಸುತ್ತಲಿನ ವಾತಾವರಣ ಕಿಂಚಿತ್ ಅನುಕೂಲವಾಗಿರದಿದ್ದರೂ ಕೆಚ್ಚಿನಿಂದ ಗುರಿ ಸಾಧಿಸಿದ ಮಹಾನ್ ವ್ಯಕ್ತಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮದಿನ ಇವತ್ತು. 'ಕಪ್ಪು ಕತ್ತಲಿನ ಭೀತ ಹಾದಿಯಲಿ' ಸಿಡಿಲಿನಂತೆ ಬಂದವರು ಎಂದು ಅವರನ್ನು ವರ್ಣಿಸುತ್ತಾರೆ ಎಲ್.ಎನ್.ಮುಕುಂದರಾಜ್ ತಮ್ಮ ಕವಿತೆಯೊಂದರಲ್ಲಿ. ಹೆಜ್ಜೆ ಹೆಜ್ಜೆಗೂ ಅವಮಾನವನ್ನು ಎದುರಿಸಿದರೂ ಕೋಟ್ಯಂತರ ಜನರ ಉದ್ಧಾರದ ಗುರಿಯನ್ನು ಸಾಧಿಸಲು ಅಹರ್ನಿಶಿ ದುಡಿದ ಅಂಬೇಡ್ಕರ್, ತಾವು ಮೇಲೆದ್ದು ಬೇರೆಯವರಿಗೂ ಆಸರೆಯಾದರು. ದೀನರ, ತುಳಿತಕ್ಕೊಳಗಾದವರ, ಮಹಿಳೆಯರ ಪಾಲಿನ ಆಶಾದೀಪವಾದರು. ಭಾರತೀಯರೆಲ್ಲರೂ ಕೃತಜ್ಞತೆಯಿಂದ ನೆನೆಯಲೇಬೇಕಾದ ವ್ಯಕ್ತಿ ಬಾಬಾ ಸಾಹೇಬರು. ❖

ಗುಂಡಣ್ಣ



ಪದಬಂಧ 6373

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಉದ್ಯಾನದಲ್ಲಿ ಮಾಡಿದ ಚಿಂತನೆ (2)
3.ಕಾರಿನಲ್ಲಿ ಕಾರ್ಮಿಕರ ಕೆಲಸ! (4)
6.ನಮ್ಮನೆಯ ಮಾದರಿ ! (3)
8.ಮರವನ್ನು ಕೊಯ್ಯುವ ಸಾಧನ (4)
9.ಪ್ರತೀ ಕತೆಯಲ್ಲೂ ಬಂದಿರುವ ಚಿಹ್ನೆ (3)
10.ಟಾರ ರಸ್ತೆ ಹತ್ತಿರವಿರುವ ಮೋರಿ (3)
11.ಆನಂದಾನುಭವಕ್ಕೆ ಉಂಟಾಗಿರುವ ಅಡ್ಡಿ (4)
13. ಅಳಿವಿನ ವಿರುದ್ಧ ಪದ (3)
15.ಊರವರಿಗೆ ಮಾಡಿದ ಸಹಾಯ (4)
16.ಹತ್ತಿರದಲ್ಲಿರುವ ಅರಳೆ (2)

ಮೇಲಿಂದ ಕೆಳಕ್ಕೆ

2.ತಿರುಗಿಸಿದರೂ ಇದು ಹೊಸತು (3)
3.ರತಿಪತಿಯಿಂದ ಮೂಡಿದ ಆಸೆ (3)
4.ಗಾಣದಿಂದ ಎಣ್ಣೆ ತೆಗೆಯುವವನು (3)
5.ಕರದಲ್ಲಿರುವ ಚಿನ್ನ (4)
7.ಗಣಪತಿಯ ವಾಹನ (3)
9.ಈತ ಪ್ರಚಾರ ಮಾಡುವವನು (4)
10.ದುಷ್ಟ ಸ್ವಭಾವದ ಹೆಂಗಸು (3)
12.ಸರಸದ ಮಾತುಕತೆ (3)
13.ಊರಲ್ಲಿ ಆಡಿದ್ದು ಆವೇಶದ ಮಾತು (3)
14.ಧಾನ್ಯವನ್ನು ಶೇಖರಿಸುವ ಕಣಜವಿಲ್ಲಿ ಉಲ್ಟಾ ಆಗಿದೆ (3)

6372ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕರ್ನಾಟಕ 3.ಸಂಪನ್ನ 4.ಸಹವಾಸ 8.ಆಯವ್ಯಯ 9.ಕಳಸ 10.ಹಕೀಕತ್ತು 14.ನಪುಂಸಕ 16.ತಡಿಕೆ 17.ವಿದ್ಯಾಧರ

ಮೇಲಿಂದ ಕೆಳಕ್ಕೆ:
1.ಕನ್ನಡ 2.ಕಸ 3.ಸಂದೂಕ 5.ಹರೆಯ 6.ಸಮಯ 7.ತಾಕತ್ತು 8.ಆಸರೆ 10.ಹವನ 11.ಕರೀಸ 12.ಹರಕೆ 13.ಅಂತರ 15.ಕವಿ

ಸುಡೊಕು 6756

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	1				5	4		9
4		7	6					
	6				8	1		
	2				7			6
5		1		6			2	
			5				1	7
	3	9				6		
6	5		8		4		3	
		4		3		2		5

6755 ಸುಡೊಕು

3	4	9	1	5	8	2	7	6
2	5	6	4	9	7	8	1	3
1	7	8	3	6	2	4	5	9
5	3	7	2	4	6	9	8	1
8	9	1	7	3	5	6	2	4
4	6	2	8	1	9	7	3	5
6	8	4	5	2	3	1	9	7
7	1	3	9	8	4	5	6	2
9	2	5	6	7	1	3	4	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

14 ಏಪ್ರಿಲ್ 2026 ಮಂಗಳವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ದ್ವಾದಶಿ ಗಂ. 24-13 ನಕ್ಷತ್ರ: ಶತಭಿಷ ಗಂ. 16-06 ಯೋಗ: ಶುಕ್ಲ (ಶುಕ್ರ) ಗಂ. 15-39 ಕರಣ: ಕೌಲವ ಗಂ. 12-47 ಮೇಷ ಮಾಸದ 01 ನೇ ದಿನ. ಮಳೆ ನಕ್ಷತ್ರ : ಅಶ್ವಿನಿ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30 , ಸೂರ್ಯೋದಯ : 06-22 ಸೂರ್ಯಾಸ್ತ : 06-40, ಮುಸ್ಲಿಂ ದಿನಾಂಕ : 25 ಶವ್ವಾಲ್ , ದಿನ ವಿಶೇಷ : ವಿಶು, ಅಂಬೇಡ್ಕರ್ ಜಯಂತಿ, ಅದೃಷ್ಟ ಸಂಖ್ಯೆ : 8, 1

ಮೇಷ: ಅವಕಾಶಗಳು ಅರಸಿ ಬಂದರೂ ಸರಿಯಾದದನ್ನು ಆಯ್ಕೆ ಮಾಡುವುದರಲ್ಲಿ ದುಡುಕುವ ಲಕ್ಷಣಗಳಿವೆ. ನಿಶ್ಚಿತ ರೂಪದಲ್ಲಿ ,ಸಮಯಕ್ಕೆ ಸರಿಯಾಗಿ ಕೆಲಸಗಳು ಜರುಗಲಿವೆ. ಕೃಷಿ ಉತ್ಪನ್ನಗಳಿಂದ ಉತ್ತಮ ಆದಾಯವಿದೆ.

ವೃಷಭ: ವಿದ್ಯಾರ್ಥಿಗಳ ಅಧ್ಯಯನದಲ್ಲಿ ಪ್ರಗತಿ ಇರಲಿದೆ. ಹಿರಿಯರ ಅಥವಾ ಗುರುಗಳ ಸಲಹೆಗಳನ್ನು ಸ್ವೀಕರಿಸಿ. ಅಧಿಕಾರಿಗಳ ಖಾಸಗಿ ಸಂಪರ್ಕದಿಂದ ಕೆಲಸಗಳಿಗೆ ಪುಷ್ಟಿ ದೊರೆಯಲಿದೆ.

ಮಿಥುನ: ವ್ಯವಹಾರಕ್ಕೆ ಸಂಬಂಧಿಸಿದಂತೆ ಔದಾರ್ಯ ಬುದ್ಧಿಯನ್ನು ತೋರಿದಲ್ಲಿ ವಂಚನೆಗೆ ಒಳಗಾಗುವ ಸನ್ನಿವೇಶಗಳಿವೆ. ಯಂತ್ರೋಪಕರಣಗಳ ಮಾರಾಟದಿಂದ ಮತ್ತು ಅದರ ಸೇವೆಯಿಂದ ಲಾಭ ಪಡೆಯುವಿರಿ.

ಕರ್ಕಾಟಕ: ಅಡ್ಡಿ-ಆತಂಕ, ಭೀತಿ ಹಾಗೂ ಮನೋವ್ಯಾಕುಲಗಳಿಗೆ ಹೆದರುವ ಅವಶ್ಯಕತೆ ಇಲ್ಲ. ಮದುವೆ ವಿಷಯಗಳತ್ತ ಗಮನಹರಿಸುವಂತೆ ಮನೆಯವರಿಂದ ಒತ್ತಡ ಬರಲಿದೆ. ಕುಟುಂಬದಲ್ಲಿ ಪರಿಸ್ಥಿತಿ ನಿಭಾಯಿಸುವಿರಿ.

ಸಿಂಹ: ಪರಿಸ್ಥಿತಿಗೆ ಹೊಂದಿಕೊಂಡು ಹೋಗುವ ಗುಣದಿಂದ ವಿವಾಹಕ್ಕೆ ಸಂಬಂಧಪಟ್ಟ ಭಿನ್ನಾಭಿಪ್ರಾಯವನ್ನು ದೂರ ಮಾಡಿಕೊಳ್ಳುವಿರಿ. ಒಳ್ಳೆಯ ಸ್ನೇಹಪರ ವರ್ತನೆಯಿಂದ ಅಕ್ಕ-ಪಕ್ಕದವರಲ್ಲಿ ಬಾಂಧವ್ಯ ಬೆಳೆಯಲಿದೆ.

ಕನ್ಯಾ: ದೈವಾನುಗ್ರಹದಿಂದ ಸಂತಾನ ಭಾಗ್ಯದ ಸುದ್ದಿ ಕೇಳುವಿರಿ. ಅದರ ಫಲವಾಗಿ ಮನೆಯಲ್ಲಿ ಸಡಗರದ ವಾತಾವರಣ ಸೃಷ್ಟಿಯಾಗಲಿದೆ. ಯೋಗ ಕಲಿಸಿಕೊಡುವವರಿಗೆ ಕೀರ್ತಿ ಸಂಪಾದನೆಯಾಗಲಿದೆ.

ತುಲಾ: ಆಂತರಿಕ ಸಮಸ್ಯೆ ಬಗೆಹರಿಯಬೇಕಾದರೆ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುವುದು. ದಾಂಪತ್ಯದಲ್ಲಿ ಆಗಾಗ ಸಮಸ್ಯೆಗಳು ತೋರಿಬಂದರೂ ಮುಂದಿನ ದಿನಗಳಲ್ಲಿ ಸಂತಸವಿದೆ.

ವೃಶ್ಚಿಕ: ಮಾತಿನಿಂದ ಕಾರ್ಯ ಸಾಧಿಸುವ ಗುಣದಿಂದ ಅನುಕೂಲಕರ ವಾತಾವರಣ ಕಾಣುವಿರಿ. ಆಂಜನೇಯಸಹಿತ ಶ್ರೀರಾಮಚಂದ್ರನನ್ನು ಮನಃಪೂರ್ವಕವಾಗಿ ಪೂಜಿಸಿದರೆ ಫಲಪ್ರಾಪ್ತಿ.


ಧನು: ದವಸ ಧಾನ್ಯಗಳ ವ್ಯಾಪಾರಸ್ಥರು ಎಚ್ಚರಿಕೆಯಿಂದಿದ್ದರೆ ಬಂಡವಾಳದ ಮೂಲಧನವನ್ನು ಕಾಪಾಡಿಕೊಳ್ಳಲು ಸಾಧ್ಯ. ದಾನ-ಧರ್ಮ ಪ್ರವೃತ್ತಿಯನ್ನು ರೂಢಿಸಿಕೊಳ್ಳುವುದರಿಂದ ಶುಭಫಲಗಳು ಅನುಭವಕ್ಕೆ ಬರಲಿವೆ.

ಮಕರ: ಹಿರಿಯರ ಆರೋಗ್ಯದಲ್ಲಿ ಚೇತರಿಕೆ ಕಂಡುಬರುವುದು. ನಾಯಕತ್ವದ ಗುಣಗಳನ್ನು ಪ್ರದರ್ಶಿಸಲು ವೇದಿಕೆ ಸಿಗಲಿದೆ. ಏರುಪೇರಾಗಿದ್ದ ವ್ಯವಹಾರಗಳನ್ನು ಉತ್ತಮ ರೀತಿಯಲ್ಲಿ ಸರಿಪಡಿಸಿಕೊಳ್ಳಿ.

ಕುಂಭ: ಪೆಟ್ರೋಲಿಯಂ ಉತ್ಪನ್ನಗಳ ಮಾರಾಟದಿಂದ ಆದಾಯದ ಜತೆಯಲ್ಲಿ ಸಾಗಾಣಿಕೆಯಲ್ಲಿ ಸಮಸ್ಯೆಗಳೂ ಕಾಣಬಹುದು. ಗೃಹ ನಿರ್ಮಾಣದ ಕೆಲಸವನ್ನು ಆರಂಭಿಸಲು ಸೂಕ್ತ ಸಮಯವನ್ನು ತಿಳಿದುಕೊಳ್ಳುವಿರಿ.

ಮೀನ: ಪರಿಶ್ರಮಕ್ಕೆ ಹಾಗೂ ಪರೋಪಕಾರದ ವ್ಯಕ್ತಿತ್ವಕ್ಕೆ ತಕ್ಕ ಪ್ರತಿಫಲ ಹೊಂದುವಿರಿ. ಸಂಗೀತದಲ್ಲಿನ ಆಸಕ್ತಿಗೆ ಮನೆಯವರಿಂದ ಪ್ರೋತ್ಸಾಹ ಸಿಗಲಿದೆ. ಸಂಪಾದನೆ ಕಡಿಮೆಯಿದ್ದರೂ ಚಿಂತೆ ಇರದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,050
ಇಂದಿನ ಅಂತ್ಯ: 23,842
ದಿನದ ಕನಿಷ್ಠ: 23,555
207

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು: 100 ಕ್ಕೆ ₹560; 12 ಕ್ಕೆ ₹78
ಮೈಸೂರು: 100 ಕ್ಕೆ ₹575

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹228
ಆರ್‌ಎಸ್‌ಎಸ್-5 ₹221
ರಬ್ ಲಾಟ್ ₹200


ರಾಮನಗರ ರೇಷ್ಮೆಗೂಡು
ಮಿಶ್ರತಳಿ (ಬಿ.ವಿ) ₹433-732
ದ್ವಿತಳಿ (ಬಿ.ವಿ) ₹355-842

ಮುದ್ರೆಮನೆ ಕಾಫಿ
ಎಪಿ ₹23500
ಎಸಿ ₹13850
ಆರ್‌ಪಿ ₹18000
ಆರ್‌ಸಿ ₹9600

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟು ದರ)
ಶೇಂಗಾ (ರಿಫೈನ್ಡ್) ₹1750 (1735)
ಸೋಯಾ (ರಿಫೈನ್ಡ್) ₹1550 (1555)
ಸೂರ್ಯಕಾಂತಿ (ರಿಫೈನ್ಡ್) ₹1675 (1695)
ಪಾಮೋಲಿನ್ ₹1450 (1475)

ಕ್ವಿಂಟಲ್ ಕೊಬ್ಬರಿ ₹38 ಸಾವಿರ

ಪ್ರಜಾವಾಣಿ ವಾರ್ತೆ



ತುಮಕೂರು: ಉಂಡೆ ಕೊಬ್ಬರಿ ಧಾರಣೆ ದಿನದಿಂದ ದಿನಕ್ಕೆ ಏರುತ್ತಲೇ ಸಾಗಿದ್ದು ಸೋಮವಾರ ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಕ್ವಿಂಟಲ್ ₹38 ಸಾವಿರಕ್ಕೆ ಮಾರಾಟವಾಗುವ ಮೂಲಕ ಮತ್ತೊಂದು ದಾಖಲೆ ನಿರ್ಮಿಸಿದೆ.

ಏ.9ರಂದು ನಡೆದ ಹರಾಜಿನಲ್ಲಿ ಕ್ವಿಂಟಲ್ ₹36,006ಕ್ಕೆ ಮಾರಾಟವಾಗಿತ್ತು. ಸೋಮವಾರ ಗರಿಷ್ಠ ₹38 ಸಾವಿರ, ಮಾದರಿ ₹36,711, ಕನಿಷ್ಠ ₹32,500ಕ್ಕೆ ಮಾರಾಟವಾಗಿದೆ. ತಿಪಟೂರು ಮಾರುಕಟ್ಟೆಗೆ ಕೇವಲ 1,705 ಕ್ವಿಂಟಲ್ (ಚೀಲ 3,989) ಕೊಬ್ಬರಿ ಆವಕವಾಗಿದೆ.

ಮಾರುಕಟ್ಟೆಯಲ್ಲಿ ಆವಕ ಸಾಕಷ್ಟು ಪ್ರಮಾಣದಲ್ಲಿ ಕುಸಿತ ಕಂಡಿದೆ. ಕೊಬ್ಬರಿ ಮಂಡಿಗಳಿಗೆ ನಿರೀಕ್ಷಿಸಿದಷ್ಟು ಮಾಲು ಬರುತ್ತಿಲ್ಲ. ಹಾಗಾಗಿ ಈ ಮಟ್ಟಕ್ಕೆ ಬೆಲೆ ಏರಿಕೆಯಾಗಿದೆ ಎಂದು ವರ್ತಕರು ಹೇಳುತ್ತಿದ್ದಾರೆ.

ಅಡಿಕೆ ಧಾರಣೆ

ಮಾರುಕಟ್ಟೆ	ತಳಿ	ಧಾರಣೆ
ಕುಮಟಾ	ಚಿಪ್ಪು	32089-37099
ಕುಮಟಾ	ಕೋಕ	18099-34569
ಕುಮಟಾ	ಫ್ಯಾಕ್ಟರಿ	12019-30699
ಕುಮಟಾ	ಹಳೆಚಾಲಿ	48069-50199
ಕುಮಟಾ	ಹೊಸಚಾಲಿ	44029-48399
ಪುತ್ತೂರು	ಕೋಕ	20000-34500
ಪುತ್ತೂರು	ಹೊಸತು	30000-50000
ಪುತ್ತೂರು	ಹಳತು	50000-55500
ಸಾಗರ	ಬಿಳಿಗೋಟು	15599-36222
ಸಾಗರ	ಚಾಲಿ	35899-44352
ಸಾಗರ	ಕೋಕ	13500-37500
ಸಾಗರ	ಕೆಂಪುಗೋಟು	24999-43009
ಸಾಗರ	ರಾಶಿ	34499-56469
ಸಾಗರ	ಸಿಪ್ಪೆಗೋಟು	6899-23389
ಶಿವಮೊಗ್ಗ	ಸರಕು	51099-97100
ಶಿವಮೊಗ್ಗ	ಬೆಟ್ಟೆ	50099-63200
ಶಿವಮೊಗ್ಗ	ರಾಶಿ	44009-56209
ಶಿವಮೊಗ್ಗ	ಗೊರಬಲು	19010-41307
ಸಿದ್ದಾಪುರ	ಬಿಳಿಗೋಟು	21700-39899
ಸಿದ್ದಾಪುರ	ಚಾಲಿ	41399-47609
ಸಿದ್ದಾಪುರ	ಕೋಕ	15699-33289
ಸಿದ್ದಾಪುರ	ಕೆಂಪುಗೋಟು	32099-34900
ಸಿದ್ದಾಪುರ	ರಾಶಿ	48219-53899
ಸಿದ್ದಾಪುರ	ತಟ್ಟಿಬೆಟ್ಟೆ	36699-48099
ಶಿರಸಿ	ಬೆಟ್ಟೆ	40799-52599
ಶಿರಸಿ	ಬಿಳಿಗೋಟು	24299-38769
ಶಿರಸಿ	ಚಾಲಿ	44600-48709
ಶಿರಸಿ	ಕೆಂಪುಗೋಟು	30189-36899
ಶಿರಸಿ	ರಾಶಿ	48600-53899
ಯಲ್ಲಾಪುರ	ಬಿಳಿಗೋಟು	16109-42499
ಯಲ್ಲಾಪುರ	ಚಾಲಿ	38479-48811
ಯಲ್ಲಾಪುರ	ಕೋಕ	13109-34879
ಯಲ್ಲಾಪುರ	ಕೆಂಪುಗೋಟು	18909-38969
ಯಲ್ಲಾಪುರ	ರಾಶಿ	50719-59375
ಯಲ್ಲಾಪುರ	ತಟ್ಟಿಬೆಟ್ಟೆ	38711-50299

ಮಾರ್ಚ್‌ನಲ್ಲಿ ಹೆಚ್ಚಿದ ಹಣದುಬ್ಬರ

ಪಶ್ಚಿಮ ಏಷ್ಯಾದಲ್ಲಿನ ಯುದ್ಧವೂ ಕಾರಣ: ತಜ್ಞರ ಅಭಿಮತ



ನವದೆಹಲಿ (ಪಿಟಿಐ): ಮಾರ್ಚ್ ತಿಂಗಳಿನಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇಕಡ 3.4ಕ್ಕೆ ಹೆಚ್ಚಳ ಆಗಿದೆ. ಕೆಲವು ಆಹಾರ ವಸ್ತುಗಳ ಬೆಲೆಯಲ್ಲಿ ಆಗಿರುವ ಹೆಚ್ಚಳವು ಈ ಏರಿಕೆಗೆ ಒಂದು ಕಾರಣವಾಗಿದೆ.

ಫೆಬ್ರುವರಿಯಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 3.21ರಷ್ಟು ಇತ್ತು. ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಈ ಅಂಕಿ-ಅಂಶವು 2024ನೆಯ ಇಸವಿಯನ್ನು ಮೂಲ ವರ್ಷವನ್ನಾಗಿ ಇರಿಸಿಕೊಂಡಿದೆ.

ಮಾರ್ಚ್‌ನಲ್ಲಿ ದಾಖಲಾಗಿರುವ ಚಿಲ್ಲರೆ ಹಣದುಬ್ಬರ ಪ್ರಮಾಣವು ಆರ್‌ಬಿಐ ನಿಗದಿ ಮಾಡಿಕೊಂಡಿರುವ ಮಟ್ಟದಲ್ಲಿಯೇ ಇದೆ (ಶೇ 4ರ ಮಟ್ಟ). ಆದರೆ ಹಣದುಬ್ಬರ ಪ್ರಮಾಣವು ಜನವರಿಯಿಂದ ಈಚೆಗೆ ಹೆಚ್ಚಳ ಕಾಣುತ್ತಿದೆ. ಜನವರಿಯಲ್ಲಿ ಶೇ 2.75ರಷ್ಟು ಚಿಲ್ಲರೆ ಹಣದುಬ್ಬರ ದಾಖಲಾಗಿತ್ತು.

ಚಿನ್ನ ಮತ್ತು ಬೆಳ್ಳಿ, ಕೊಬ್ಬರಿ, ಟೊಮೆಟೊ ಮತ್ತು ಹೂಕೋಸಿನ ಬೆಲೆಯಲ್ಲಿ ಮಾರ್ಚ್‌ನಲ್ಲಿ ತೀವ್ರ ಹೆಚ್ಚಳ ಆಗಿದೆ. ಈರುಳ್ಳಿ, ಆಲೂಗಡ್ಡೆ, ಬೆಳ್ಳುಳ್ಳಿ, ತೊಗರಿಬೇಳೆ, ಕಡಲೆಕಾಳಿನ ಬೆಲೆಯಲ್ಲಿ ಇಳಿಕೆ ಕಂಡುಬಂದಿದೆ.

ವಿದ್ಯುತ್, ಅನಿಲ ಮತ್ತು ಇಂಧನ ಉತ್ಪನ್ನಗಳ ಹಣದುಬ್ಬರ ಪ್ರಮಾಣ ಶೇ 1.65ರಷ್ಟು ಆಗಿದೆ.

ಚಿಲ್ಲರೆ ಹಣದುಬ್ಬರ ಪ್ರಮಾಣದ ಕುರಿತು ಪ್ರತಿಕ್ರಿಯೆ ನೀಡಿರುವ ಅಸೋಚಾಂ (ಭಾರತೀಯ ವಾಣಿಜ್ಯೋದ್ಯಮ ಮಹಾಸಂಘ) ಅಧ್ಯಕ್ಷ ನಿರ್ಮಲ್ ಕೆ. ಮಿಂದಾ ಅವರು 'ಕಚ್ಚಾ ತೈಲದ ಬೆಲೆಯಲ್ಲಿ ತೀವ್ರ ಹೆಚ್ಚಳ ಆಗಿದ್ದರೂ ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಬದಲಾಯಿಸದೆ ಬೆಲೆ ಏರಿಕೆಯನ್ನು ನಿಯಂತ್ರಣದಲ್ಲಿ ಇರಿಸಿರುವುದು ಮೆಚ್ಚತಕ್ಕದ್ದು' ಎಂದು ಹೇಳಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ನಡೆದಿರುವ ಸಮರದ ಅಲ್ಪ ಪರಿಣಾಮವು ಮಾರ್ಚ್ ತಿಂಗಳಲ್ಲಿ ವಿವಿಧ ಉತ್ಪನ್ನಗಳ ಬೆಲೆಯ ಮೇಲೆ ಆಗಿದೆ ಎಂಬುದನ್ನು ಹಣದುಬ್ಬರಕ್ಕೆ ಸಂಬಂಧಿಸಿದ ಅಂಕಿ-ಅಂಶಗಳು ಹೇಳುತ್ತಿವೆ ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಯ್ಯರ್ ಹೇಳಿದ್ದಾರೆ.

> ಆಹಾರ ವಸ್ತುಗಳು, ವಿದ್ಯುತ್, ಅನಿಲ ಮತ್ತು ಇತರ ಇಂಧನ ಉತ್ಪನ್ನಗಳ ಬೆಲೆಯಲ್ಲಿನ ಏರಿಕೆಯಿಂದಾಗಿ ಹಣದುಬ್ಬರ ಪ್ರಮಾಣ ಹೆಚ್ಚಳ ಕಂಡಿದೆ. ಇದರಲ್ಲಿ ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು ಎಲ್‌ಪಿಜಿ ಹಾಗೂ ಇತರ ಪರ್ಯಾಯ ಇಂಧನಗಳ ಮೇಲೆ ಬೀರಿರುವ ಪರಿಣಾಮ ಕೂಡ ಕಾಣುತ್ತಿದೆ
> **ಅದಿತಿ ನಯ್ಯರ್,** ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ

ಮುಖ್ಯಾಂಶಗಳು
- ಚಿಲ್ಲರೆ ಹಣದುಬ್ಬರ ಶೇ 3.4ಕ್ಕೆ ಏರಿಕೆ
- ಆರ್‌ಬಿಐ ಮಿತಿಯಲ್ಲೇ ಇರುವ ಹಣದುಬ್ಬರ

ಸುದ್ದಿ 2 ನಿಮಿಷ

ಏಳು ವರ್ಷದ ಬಳಿಕ ಭಾರತಕ್ಕೆ ಇರಾನ್ ಕಚ್ಚಾ ತೈಲ

ನವದೆಹಲಿ (ಪಿಟಿಐ): 'ಇರಾನ್‌ನ ಕಚ್ಚಾ ತೈಲ ಹೊಂದಿರುವ ಎರಡು ಹಡಗುಗಳು ಭಾರತದ ಬಂದರುಗಳಿಗೆ ಬಂದಿವೆ. ಏಳು ವರ್ಷದ ಬಳಿಕ ಭಾರತಕ್ಕೆ ಇರಾನ್‌ನಿಂದ ಪೂರೈಕೆ ಆಗಿರುವ ಕಚ್ಚಾ ತೈಲ ಇದಾಗಿದೆ ಎಂದು ಹಡಗುಗಳ ಮಾಹಿತಿಯನ್ನು ದಾಖಲಿಸುವ ದತ್ತಾಂಶವು ತಿಳಿಸಿದೆ.

ನ್ಯಾಷನಲ್ ಇರಾನಿಯನ್ ಟ್ಯಾಂಕರ್ ಕಂಪನಿ ನಿರ್ವಹಣೆ ಮಾಡುವ ಫೆಲಿಸಿಟಿ ಹೆಸರಿನ ಹಡಗು, ಗುಜರಾತ್‌ನ ಸಿಕ್ಕಾ ಬಂದರಿಗೆ ಭಾನುವಾರ ತಡರಾತ್ರಿ ಬಂದಿದೆ. ಈ ಹಡಗು 20 ಲಕ್ಷ ಬ್ಯಾರಲ್‌ನಷ್ಟು ಕಚ್ಚಾ ತೈಲ ಹೊಂದಿದ್ದು, ಮಾರ್ಚ್ ಮಧ್ಯದಲ್ಲಿ ಖಾರ್ಗ್ ದ್ವೀಪದಿಂದ ಹೊರಟಿತ್ತು.

ಮತ್ತೊಂದು ಹಡಗು ಜಯಾ, ಇಷ್ಟೇ ಪ್ರಮಾಣದ ಕಚ್ಚಾ ತೈಲ ಹೊಂದಿದ್ದು ಒಡಿಶಾದ ಬಂದರನ್ನು ತಲುಪಿದೆ. ಈ ಹಡಗು ಪಶ್ಚಿಮ ಏಷ್ಯಾ ಸಂಘರ್ಷ ಆರಂಭವಾಗುವುದಕ್ಕೂ ಮುನ್ನವೇ (ಫೆಬ್ರುವರಿ ತಿಂಗಳ ಅಂತ್ಯದಲ್ಲಿ) ತನ್ನ ಪ್ರಯಾಣ ಆರಂಭಿಸಿತ್ತು.

ಭಾರತವು, ಇರಾನ್‌ನಿಂದ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲ ಖರೀದಿಸುವ ಪ್ರಮುಖ ರಾಷ್ಟ್ರವಾಗಿತ್ತು. 2018ರಲ್ಲಿ ಪ್ರತಿ ದಿನ 5.18 ಲಕ್ಷ ಬ್ಯಾರಲ್‌ನಷ್ಟು ಕಚ್ಚಾ ತೈಲವನ್ನು ಇರಾನ್‌ನಿಂದ ಖರೀದಿಸುತ್ತಿತ್ತು. ಇದು 2019ರ ಜನವರಿಯಿಂದ ಮೇ ತಿಂಗಳವರೆಗೆ 2.68 ಲಕ್ಷ ಬ್ಯಾರಲ್‌ಗೆ ಇಳಿದಿತ್ತು. ಅಮೆರಿಕದ ನಿರ್ಬಂಧದ ಕಾರಣದಿಂದಾಗಿ ಆಮದು ನಿಂತಿತು.

ಆದರೆ, ಕಳೆದ ತಿಂಗಳು ಅಮೆರಿಕ ಆಡಳಿತವು, ಈ ನಿರ್ಬಂಧಗಳನ್ನು 30 ದಿನಗಳವರೆಗೆ ಸಡಿಲಗೊಳಿಸಿದೆ. ಈ ಅವಧಿ ಏಪ್ರಿಲ್ 19ಕ್ಕೆ ಮುಕ್ತಾಯಗೊಳ್ಳಲಿದೆ.



ಇರಾನ್‌ನ ಅಂದಾಜು 9.5 ಕೋಟಿ ಬ್ಯಾರಲ್ ಕಚ್ಚಾ ತೈಲವು ಸಮುದ್ರದಲ್ಲಿರುವ ಹಡಗುಗಳಲ್ಲಿದೆ. ಅದರಲ್ಲಿ ಸುಮಾರು 5.1 ಕೋಟಿ ಬ್ಯಾರಲ್ ಭಾರತಕ್ಕೆ ಬರಬಹುದು ಎಂಬ ಅಂದಾಜಿದೆ.

ಸೆನ್ಸೆಕ್ಸ್ 702 ಅಂಶ ಇಳಿಕೆ

ಮುಂಬೈ/ನವದೆಹಲಿ (ಪಿಟಿಐ): ಅಮೆರಿಕ–ಇರಾನ್ ನಡುವೆ ಮಾತುಕತೆ ವಿಫಲಗೊಂಡಿರುವುದರಿಂದ ಪಶ್ಚಿಮ ಏಷ್ಯಾದ ಬಿಕ್ಕಟ್ಟು ಹೆಚ್ಚಳವಾಗುವ ಆತಂಕ ಸೃಷ್ಟಿಯಾಗಿದೆ. ಇದರಿಂದ ದೇಶದ ಷೇರು ಪೇಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 702 ಅಂಶ ಇಳಿಕೆಯಾಗಿ, 76,847ಕ್ಕೆ ವಹಿವಾಟು ಕೊನೆಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 207 ಅಂಶ ಕಡಿಮೆಯಾಗಿ, 23,842ಕ್ಕೆ ಅಂತ್ಯಗೊಂಡಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 7.73ರಷ್ಟು ಏರಿಕೆಯಾಗಿದ್ದು, ಪ್ರತೀ ಬ್ಯಾರಲ್ ದರವು 102.6 ಡಾಲರ್ ಆಗಿದೆ.

ಚಿನ್ನ, ಬೆಳ್ಳಿ ದರ ಇಳಿಕೆ: ದೆಹಲಿಯ ಚಿನಿವಾರ ಪೇಟೆಯಲ್ಲಿ 10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹300ರಷ್ಟು ಇಳಿಕೆಯಾಗಿ, ₹1.55 ಲಕ್ಷದಂತೆ ಮಾರಾಟವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹1,800ರಷ್ಟು ಕಡಿಮೆಯಾಗಿ, ₹2,45,200 ಆಗಿದೆ.

ರೂಪಾಯಿ ಮೌಲ್ಯ ಕುಸಿತ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಸೋಮವಾರ ಡಾಲರ್ ಎದುರು ರೂಪಾಯಿ ಮೌಲ್ಯವು 52 ಪೈಸೆ ಇಳಿಕೆಯಾಗಿದೆ. ವಹಿವಾಟಿನ ಅಂತ್ಯದ ವೇಳೆಗೆ ರೂಪಾಯಿ ಮೌಲ್ಯವು 93.35 ಆಗಿದೆ.

ಅಮೆರಿಕ–ಇರಾನ್ ಮಾತುಕತೆ ವಿಫಲ ಆಗಿರುವುದು ಮತ್ತು ಕಚ್ಚಾ ತೈಲ ದರ ಏರಿಕೆಯಾಗಿರುವುದು ರೂಪಾಯಿ ಮೇಲೆ ಒತ್ತಡ ಹೇರಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಉನ್ನತ ಮಟ್ಟದ ಸಮಿತಿ ಸಭೆ • 15,032 ಉದ್ಯೋಗ ಅವಕಾಶಗಳು ಸೃಷ್ಟಿ

₹18,430 ಕೋಟಿ ಹೂಡಿಕೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ಬೆಳವಣಿಗೆಗೆ ಇನ್ನಷ್ಟು ವೇಗ ನೀಡುವ ಮತ್ತು ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ₹18,430.44 ಕೋಟಿ ಬಂಡವಾಳ ಹೂಡಿಕೆಗೆ ರಾಜ್ಯ ಉನ್ನತ ಮಟ್ಟದ ಅನುಮೋದನೆ ಸಮಿತಿ ಒಪ್ಪಿಗೆ ನೀಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ಹೊಸದಾಗಿ 11 ಮತ್ತು ಹೆಚ್ಚುವರಿ 6 ಬಂಡವಾಳ ಹೂಡಿಕೆಯ ಯೋಜನೆಗಳಿಗೆ ಸಮ್ಮತಿ ನೀಡಲಾಗಿದೆ. ಇದರಿಂದ 15,032 ಉದ್ಯೋಗ ಅವಕಾಶಗಳು ಸೃಷ್ಟಿಯಾಗಲಿವೆ.

ಈ ಯೋಜನೆಗಳು ಬಾಗಲಕೋಟೆ, ಬೀದರ್, ಬೆಳಗಾವಿ, ಬಳ್ಳಾರಿ, ಕೋಲಾರ, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ತುಮಕೂರು, ಚಾಮರಾಜನಗರ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಕಾರ್ಯಗತಗೊಳ್ಳಲಿವೆ ಎಂದು ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ.

ಹೊಸ ಮತ್ತು ವಿಸ್ತರಣೆಯ 11 ಯೋಜನೆಗಳ ₹14,906.90 ಕೋಟಿ ಮತ್ತು ಹೆಚ್ಚುವರಿ ಬಂಡವಾಳ ಹೂಡಿಕೆಯ 6 ಯೋಜನೆಗಳ ₹3,523.54 ಕೋಟಿ ಹೂಡಿಕೆಗೆ ಅನುಮೋದನೆ ನೀಡಲಾಗಿದೆ. ಒಟ್ಟು 17 ಯೋಜನೆಗಳಲ್ಲಿ ವಾಹನ, ವೈಮಾಂತರಿಕ್ಷ, ಔಷಧಿ, ಜವಳಿ, ಉಕ್ಕು, ಸೆಮಿಕಂಡಕ್ಟರ್ ಮತ್ತು ಸಕ್ಕರೆ ತಯಾರಿಕಾ ವಲಯಗಳೂ ಸೇರಿವೆ ಎಂದು ಹೇಳಿದ್ದಾರೆ.

ಬಳ್ಳಾರಿಯಲ್ಲಿ ಕಾರ್ಯಗತಗೊಳ್ಳಲಿರುವ ಜೆಎಸ್‌ಡಬ್ಲ್ಯು ವಿಜಯನಗರ ಮೆಟ್ಯಾಲಿಕ್ಸ್ ಲಿಮಿಟೆಡ್‌ನ ₹4,600 ಕೋಟಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಎನರ್ಜಿ ಟ್ರಾನ್ಸಿಷನ್‌ನ ₹1,600 ಕೋಟಿ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ವೋಲ್ವೊ ಗ್ರೂಪ್ ಇಂಡಿಯಾದ ₹1,500 ಕೋಟಿ ಹೂಡಿಕೆಯ ಹೊಸ ಯೋಜನೆಗಳು ಪ್ರಮುಖವಾಗಿವೆ ಎಂದಿದ್ದಾರೆ.

ಹೆಚ್ಚುವರಿ ಬಂಡವಾಳ ಹೂಡಿಕೆಯ ಪ್ರಸ್ತಾವಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ವಿಪ್ರೊ ಗ್ಲೋಬಲ್ ಎಂಜಿನಿಯರಿಂಗ್ ಮತ್ತು ಎಲೆಕ್ಟ್ರಾನಿಕ್ಸ್ ಮಟೀರಿಯಲ್ಸ್ ಪ್ರೈವೇಟ್ ಲಿಮಿಟೆಡ್ ₹1,397 ಕೋಟಿ ಮತ್ತು ಎಂಎಸ್‌ಪಿಎಲ್ ಲಿಮಿಟೆಡ್‌ನ ₹884.25 ಕೋಟಿ ಹೂಡಿಕೆಗಳು ಪ್ರಮುಖವಾಗಿವೆ ಎಂದು ಹೇಳಿದ್ದಾರೆ.

ಹೆಚ್ಚುವರಿ ಬಂಡವಾಳ ಹೂಡಿಕೆಯ ಪ್ರಸ್ತಾವಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ವಿಪ್ರೊ ಗ್ಲೋಬಲ್ ಎಂಜಿನಿಯರಿಂಗ್ ಮತ್ತು ಎಲೆಕ್ಟ್ರಾನಿಕ್ಸ್ ಮಟೀರಿಯಲ್ಸ್ ಪ್ರೈವೇಟ್ ಲಿಮಿಟೆಡ್‌ನ ₹1,397 ಕೋಟಿ ಮತ್ತು ಎಂಎಸ್‌ಪಿಎಲ್ ಲಿಮಿಟೆಡ್‌ನ ರೂ. 884.25 ಕೋಟಿ ಹೂಡಿಕೆಗಳು ಪ್ರಮುಖವಾಗಿವೆ.

ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಇಂಧನ ಸಚಿವ ಕೆ.ಜೆ.ಜಾರ್ಜ್, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಇದ್ದರು.



ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಇಂಧನ ಸಚಿವ ಕೆ.ಜೆ.ಜಾರ್ಜ್, ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಹಿರಿಯ ಅಧಿಕಾರಿಗಳು ಇದ್ದರು.

ಫೀಚರ್ ಫೋನ್‌ನಲ್ಲಿ ಬ್ಯಾಂಕಿಂಗ್ ಆ್ಯಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೀಚರ್ ಫೋನ್ ಬಳಸುತ್ತಿರುವ ತನ್ನ ಗ್ರಾಹಕರಿಗೆ ಸಮಗ್ರ ಮೊಬೈಲ್ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸಲು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾ (ಬಿಒಬಿ) 'ಬಿಒಬಿ ವರ್ಲ್ಡ್ ಲೈಟ್' ಆ್ಯಪ್ ಅನ್ನು ಬಿಡುಗಡೆ ಮಾಡಿದೆ.

ಇದಕ್ಕಾಗಿ ಬ್ಯಾಂಕ್ ದೇಶದ ದೂರಸಂಪರ್ಕ ಸೇವಾ ಕಂಪನಿ ರಿಲಯನ್ಸ್ ಜಿಯೊ ಜೊತೆ ಪಾಲುದಾರಿಕೆ ಮಾಡಿಕೊಂಡಿದೆ. ಈ ಆ್ಯಪ್ ಜಿಯೊಫೋನ್ ಪ್ರೈಮಾ 4ಜಿ ಫೋನ್‌ನಲ್ಲಿ ಲಭ್ಯವಿದೆ.

ಸಾಮಾನ್ಯವಾಗಿ ಸ್ಮಾರ್ಟ್ ಫೋನ್‌ಗಳಲ್ಲಿ ಮಾತ್ರ ಮೊಬೈಲ್ ಬ್ಯಾಂಕಿಂಗ್ ಆ್ಯಪ್‌ಗಳು ಕಾರ್ಯನಿರ್ವಹಿಸುತ್ತವೆ. ಆದರೆ ಬಿಒಬಿ 'ವರ್ಲ್ಡ್ ಲೈಟ್ ಆ್ಯಪ್' ಬಳಸಿ ಫೀಚರ್ ಫೋನ್ (ಜಿಯೊಫೋನ್ ಪ್ರೈಮಾ 4ಜಿ) ಮೂಲಕವೂ ನಿತ್ಯದ ಮೊಬೈಲ್ ಬ್ಯಾಂಕಿಂಗ್ ಸೇವೆಗಳನ್ನು ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

ಈ ಆ್ಯಪ್ ಮೂಲಕ ಬಳಕೆದಾರರು ಯುಪಿಐ ಆಧಾರಿತ ಪಾವತಿ, ಹಣ ಕಳಿಸುವುದು, ಬಿಲ್ ಪಾವತಿ, ರಿಚಾರ್ಜ್ ಸೇರಿದಂತೆ ಹಲವು ಕೆಲಸಗಳನ್ನು ಮಾಡಬಹುದು ಎಂದು ಪ್ರಕಟಣೆಯು ತಿಳಿಸಿದೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹18000-25000
ದಾವಣಗೆರೆ	₹12800-13350
ತಿಪಟೂರು	₹32500-38000
ತುರುವೇಕೆರೆ	₹37500-37500

ಉಪ ಚುನಾವಣೆ: ದಾವಣಗೆರೆಯಲ್ಲಿ ತನ್ನ ಒಳಜಗಳಗಳಿಂದ ಕಾಂಗ್ರೆಸ್‌ಗೆ ಸೋಲುವ ಭಯ ಕಾಡುತ್ತಿದೆಯೇ?
ಹೌದು | ಇಲ್ಲ
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಐಎಂಎಫ್‌ನಿಂದ ಪ್ರತಿಗಾಮಿ ಸಲಹೆ: ಆಕ್ಸ್‌ಫ್ಯಾಮ್

ನವದೆಹಲಿ (ಪಿಟಿಐ): 2022ರಿಂದ 2024ರ ನಡುವೆ ಭಾರತವು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಕಡೆಯಿಂದ ಅತ್ಯಂತ ಹೆಚ್ಚಿನ ಸಂಖ್ಯೆಯ ಪ್ರತಿಗಾಮಿ ತೆರಿಗೆ ಶಿಫಾರಸುಗಳನ್ನು ಸ್ವೀಕರಿಸಿದೆ ಎಂದು ಆಕ್ಸ್‌ಫ್ಯಾಮ್ ಸಿದ್ಧಪಡಿಸಿದ ವಿಶ್ಲೇಷಣಾ ವರದಿಯೊಂದು ಹೇಳಿದೆ.

ಶ್ರೀಮಂತ ದೇಶಗಳಿಗೆ ಬಹುತೇಕ ಪ್ರಗತಿಪರವಾದ ಶಿಫಾರಸುಗಳನ್ನು ಐಎಂಎಫ್ ನೀಡುತ್ತದೆ, ಇತರ ದೇಶಗಳಿಗೆ ಅದು ಪ್ರತಿಗಾಮಿಯಾದ ಶಿಫಾರಸುಗಳನ್ನು ಕಳುಹಿಸುತ್ತದೆ. ಇಂತಹ ಶಿಫಾರಸುಗಳು ಅಸಮಾನತೆಯನ್ನು ಇನ್ನಷ್ಟು ಹೆಚ್ಚು ಮಾಡುವಂತೆ ಇರುತ್ತವೆ ಎಂದು ಆಕ್ಸ್‌ಫ್ಯಾಮ್ ಕಳವಳ ವ್ಯಕ್ತಪಡಿಸಿದೆ.

ಕೆಳ ಹಾಗೂ ಕೆಳ-ಮಧ್ಯಮ ಆದಾಯದ ದೇಶಗಳಿಗೆ ಐಎಂಎಫ್ ರವಾನಿಸಿದ ತೆರಿಗೆಗೆ ಸಂಬಂಧಿಸಿದ ಶೇಕಡ 59ರಷ್ಟು ಸಲಹೆಗಳು ಪ್ರತಿಗಾಮಿಯಾಗಿದ್ದವು. ಹೆಚ್ಚಿನ ಆದಾಯ ಹೊಂದಿರುವ ದೇಶಗಳಿಗೆ ಅದು ರವಾನಿಸಿದ ಶೇ 52ರಷ್ಟು ಶಿಫಾರಸುಗಳು ಪ್ರಗತಿಪರವಾಗಿ ಇದ್ದವು ಎಂದು ಆಕ್ಸ್‌ಫ್ಯಾಮ್ ವರದಿಯು ಹೇಳಿದೆ.

ಕಡಿಮೆ ಆದಾಯ ಇರುವವರಿಗೆ ಹೊರೆ ಆಗುವಂತೆ ಮಾಡುವ ಏಕರೂಪಿ ತೆರಿಗೆ ವ್ಯವಸ್ಥೆಯನ್ನು ಪ್ರತಿಗಾಮಿ ಎಂದು ವ್ಯಾಖ್ಯಾನಿಸಲಾಗಿದೆ. ಆದರೆ, ವ್ಯಕ್ತಿಯ ಆದಾಯಕ್ಕೆ ಅನುಗುಣವಾಗಿ ತೆರಿಗೆ ವಿಧಿಸುವ ವ್ಯವಸ್ಥೆಯನ್ನು ಪ್ರಗತಿಪರ ಎಂದು ವ್ಯಾಖ್ಯಾನಿಸಲಾಗಿದೆ.

2022ರಿಂದ 2024ರ ನಡುವೆ ಐಎಂಎಫ್ ಒಟ್ಟು 125 ದೇಶಗಳಿಗೆ ರವಾನಿಸಿದ ತೆರಿಗೆ ಶಿಫಾರಸುಗಳನ್ನು ಆಕ್ಸ್‌ಫ್ಯಾಮ್ ಪರಿಶೀಲಿಸಿದೆ.

ಎಲ್ಲ ಬಗೆಯ ವಿತ್ತೀಯ ಸಲಹೆಗಳನ್ನು ನೀಡುವಾಗ ಅಸಮಾನತೆಯನ್ನು ಕೇಂದ್ರಭಾಗದಲ್ಲಿ ಇರಿಸಬೇಕು ಎಂದು ಆಕ್ಸ್‌ಫ್ಯಾಮ್ ಸಂಸ್ಥೆಯು ಐಎಂಎಫ್‌ಗೆ ಮನವಿ ಮಾಡಿದೆ.

ಪೋಪ್–ಟ್ರಂಪ್: ವಾಕ್ಸಮರ


'ಯುದ್ಧ ನಿಲ್ಲಿಸಬೇಕು' ಎಂಬ ಪೋಪ್ 14ನೇ ಲಿಯೊ ಅವರ ಹೇಳಿಕೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರತಿ ಹೇಳಿಕೆ ನೀಡಿದ್ದು, ಇಬ್ಬರ ಮಧ್ಯೆ ವಾಕ್ಸಮರ ಏರ್ಪಟ್ಟಿದೆ

ಟ್ರಂಪ್ ಹೇಳಿದ್ದೇನು?



- ಪರಮಾಣು ಶಸ್ತ್ರಾಸ್ತ್ರ ಹೊಂದಲು ಬಯಸುತ್ತಿರುವ ಇರಾನ್‌ಗೆ ಪೋಪ್ ಬೆಂಬಲ ಸೂಚಿಸಿದ್ದಾರೆ. ಶಸ್ತ್ರಾಸ್ತ್ರ ಹೊಂದುವುದು ಸರಿ ಎಂದು ಭಾವಿಸುವ ಪೋಪ್ ನನಗೆ ಬೇಡ
- ಅಪರಾಧ ಎಸಗುವವರ ವಿಷಯದಲ್ಲಿ ಪೋಪ್ ಮೃದು ಧೋರಣೆ ಹೊಂದಿದ್ದಾರೆ. ವಿದೇಶಾಂಗ ನೀತಿಯಲ್ಲಿ ಅವರು ದುರ್ಬಲರು
- ತಾವು ಅಮೆರಿಕನ್ನರು ಎಂಬ ಒಂದೇ ಕಾರಣದಿಂದ ಅವರು ಪೋಪ್ ಆಗಿ ಆಯ್ಕೆಯಾಗಿದ್ದಾರೆ. ಅದು ಅಧ್ಯಕ್ಷ ಟ್ರಂಪ್ ಅವರೊಂದಿಗೆ ವ್ಯವಹರಿಸಲು ಉತ್ತಮ ಮಾರ್ಗ ಎಂದು ಭಾವಿಸಿದ್ದಾರೆ
- ನಾನು ಶ್ವೇತಭವನದಲ್ಲಿ ಇರದೇ ಇದ್ದರೆ ಲಿಯೊ ವ್ಯಾಟಿಕನ್‌ನಲ್ಲಿ ಇರುತ್ತಿರಲಿಲ್ಲ

ಪೋಪ್ ಹೇಳಿದ್ದೇನು?



- ಸಂಘರ್ಷದ ವಿರುದ್ಧ ನಾನು ದನಿ ಎತ್ತುತ್ತಲೇ ಇರುತ್ತೇನೆ. ಯುದ್ಧದ ವಿರುದ್ಧ ಗಟ್ಟಿಯಾಗಿ ಮಾತನಾಡುವುದನ್ನು ಮುಂದುವರಿಸುತ್ತೇನೆ
- ಶಾಂತಿ ನೆಲಸಲು ಹಾಗೂ ಹಾಗೂ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರ ಕಂಡುಕೊಳ್ಳಲು ದೇಶಗಳ ನಡುವಿನ ಬಹುಪಕ್ಷೀಯ ಸಂಬಂಧಗಳನ್ನು ಉತ್ತೇಜಿಸಲು ಬಯಸುತ್ತೇನೆ
- ಯುದ್ಧಗಳಿಂದಾಗಿ ಪ್ರಪಂಚದಲ್ಲಿ ಹಲವರು ಬಳಲುತ್ತಿದ್ದಾರೆ. ನಾಗರಿಕರು ಕೊಲ್ಲಲ್ಪಡುತ್ತಿದ್ದಾರೆ. ಇದು ಯಾವುದೇ ಸಮಸ್ಯೆಗೆ ಪರಿಹಾರವಲ್ಲ ಮತ್ತು ಸಮಸ್ಯೆ ಬಗೆಹರಿಸಲು ಉತ್ತಮ ಮಾರ್ಗವಿದೆ ಎಂಬುದನ್ನು ಯಾರಾದರೂ ಎದ್ದು ನಿಂತು ಹೇಳಬೇಕಿದೆ
- ಟ್ರಂಪ್ ಜೊತೆಗೆ ವಾದ ಮಾಡಲು ನಾನು ಬಯಸುವುದಿಲ್ಲ. ನಾನು ರಾಜಕಾರಣಿಯಾಗಿ ಈ ವಿಷಯದ ಕುರಿತು ಮಾತನಾಡುತ್ತಿಲ್ಲ

ತಮ್ಮನ್ನು ಯೇಸುವಿಗೆ ಹೋಲಿಸಿದ ಟ್ರಂಪ್

ಪೋಪ್ ಲಿಯೊ ಜೊತೆಗೆ ಮಾತಿನ ಚಕಮಕಿ ಮುಂದುವರಿದಿರುವ ನಡುವೆಯೇ ಟ್ರಂಪ್, ತಮ್ಮನ್ನು ತಾವು ಯೇಸುವಿನಂತೆ ಬಿಂಬಿಸಿ ಕೃತಕ ಬುದ್ಧಿಮತ್ತೆ (ಎ.ಐ) ಚಿತ್ರವೊಂದನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ಚಿತ್ರದಲ್ಲಿ ಟ್ರಂಪ್, ಕೆಂಪು ಮತ್ತು ಬಿಳಿ ಬಟ್ಟೆಯಲ್ಲಿ ಕಾಣಿಸಿಕೊಂಡಿದ್ದಾರೆ. ಯೇಸುವಿನಂತೆ ಟ್ರಂಪ್ ಅವರು ಅನಾರೋಗ್ಯ ಪೀಡಿತರನ್ನು ಆಶೀರ್ವದಿಸುತ್ತಿರುವ ರೀತಿಯಲ್ಲಿ ಚಿತ್ರವನ್ನು ಸೃಷ್ಟಿಸಲಾಗಿದೆ.

ಚಿತ್ರದಲ್ಲಿ ಅಮೆರಿಕ ಧ್ವಜ ಇದೆ. ಅಲ್ಲದೇ ಸೈನಿಕರನ್ನು ದೇವದೂತರಂತೆ ಬಿಂಬಿಸಲಾಗಿದ್ದು, ಕ್ಷಿಪಣಿಗಳು ಹಾದು ಹೋಗುತ್ತಿರುವುದೂ ಚಿತ್ರದಲ್ಲಿದೆ.

ಲೈಂಗಿಕ ದೌರ್ಜನ್ಯ, ಮತಾಂತರ ಕುರಿತು ಟಿಸಿಎಸ್ ತನಿಖೆ

ಮುಂಬೈ (ಪಿಟಿಐ): ಟಿಸಿಎಸ್ ಕಂಪನಿಯ ನಾಸಿಕ್ ಕಚೇರಿಯಲ್ಲಿ ವರದಿಯಾಗಿರುವ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ಆರೋಪಗಳು 'ತೀವ್ರ ಕಳವಳಕಾರಿ ಹಾಗೂ ಸಂಕಟ ಮೂಡಿಸುವಂಥದ್ದು' ಎಂದು ಹೇಳಿರುವ ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್ ಅವರು, ಹಿರಿಯ ಅಧಿಕಾರಿಯೊಬ್ಬರ ನೇತೃತ್ವದಲ್ಲಿ ಈ ಆರೋಪಗಳ ಬಗ್ಗೆ ತನಿಖೆ ಆಗಲಿದೆ ಎಂದು ತಿಳಿಸಿದ್ದಾರೆ.

ಸತ್ಯ ಏನು ಎಂಬುದನ್ನು ಕಂಡುಕೊಳ್ಳಲು ಹಾಗೂ ಹೊಣೆಗಾರರನ್ನು ಗುರುತಿಸಲು ಟಿಸಿಎಸ್ ಸಿಒಒ ಆರತಿ ಸುಬ್ರಮಣಿಯನ್ ಅವರಿಂದ ಆಳವಾದ ತನಿಖೆಯೊಂದು ನಡೆಯುತ್ತಿದೆ ಎಂದು ಚಂದ್ರಶೇಖರನ್ ಅವರು ಹೇಳಿದ್ದಾರೆ.

ಟಿಸಿಎಸ್‌ನ ನಾಸಿಕ್ ಶಾಖೆಯಲ್ಲಿ ಕೆಲಸ ಮಾಡುತ್ತಿರುವ ಎಂಟು ಮಂದಿ ಮಹಿಳಾ ಉದ್ಯೋಗಿಗಳು, ಅಲ್ಲಿ ಲೈಂಗಿಕ ಕಿರುಕುಳ ನೀಡಲಾಗುತ್ತಿತ್ತು, ಮತಾಂತರಕ್ಕೆ ಬಲವಂತ ಮಾಡಲಾಗುತ್ತಿತ್ತು ಎಂದು ದೂರಿದ್ದಾರೆ.

ಯಾವುದೇ ಬಗೆಯ ಬಲವಂತದ ಕ್ರಮಗಳನ್ನು ಅಥವಾ ದುರ್ನಡತೆಯನ್ನು ಟಾಟಾ ಸಮೂಹವು ಸಹಿಸುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ತಪ್ಪು ಮಾಡಿದವರ ವಿರುದ್ಧ ಕಠಿಣ ಕ್ರಮ ಜರುಗಿಸುವುದು ಖಂಡಿತ ಎಂದು ಅವರು ಭರವಸೆ ನೀಡಿದ್ದಾರೆ.

ಹಿರಿಯ ಸಹೋದ್ಯೋಗಿಗಳು ತಮ್ಮ ಮೇಲೆ ಮಾನಸಿಕವಾಗಿ ಹಾಗೂ ಲೈಂಗಿಕವಾಗಿ ದೌರ್ಜನ್ಯ ಎಸಗಿದ್ದಾರೆ, ದೂರುಗಳನ್ನು ಒಯ್ದಾಗ ಕಂಪನಿಯ ಮಾನವ ಸಂಪನ್ಮೂಲ ವಿಭಾಗವು ಅದನ್ನು ಆಲಿಸುತ್ತಿರಲಿಲ್ಲ ಎಂದು ಎಂಟು ಮಂದಿ ಮಹಿಳಾ ಸಿಬ್ಬಂದಿ ಕಳೆದ ವಾರ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ತನಿಖೆಗೆ ಪೊಲೀಸರು ಎಸ್‌ಐಟಿ ರಚಿಸಿದ್ದಾರೆ. ಇದಾದ ನಂತರದಲ್ಲಿ ಪೊಲೀಸರು ಏಳು ಮಂದಿಯನ್ನು ಬಂಧಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ)
13-04-2026

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8300-8400
ದಪ್ಪ ಗುಜರಾತ್ (ಹೊಸ)	9600-9700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1760 (1745)
ಒಂದು ವಾರದ ಡೆಲಿವರಿ	1755 (1720)
ಪಾಮ್ ವಾರದ ಡೆಲಿವರಿ	1448 (1472)
ಸೂರ್ಯಕಾಂತಿ ಎಣ್ಣೆ ಕಚ್ಚಾ	1570 (1580)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,50,000 (1,49,000)
ಬೆಳ್ಳಿ ಕೆ.ಜಿಗೆ	2,36,500 (2,42,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಇರಾನ್: ವರ್ಷದಲ್ಲಿ 1,639 ಮಂದಿಗೆ ಮರಣದಂಡನೆ

ಪ್ಯಾರಿಸ್ (ಎಎಫ್‌ಪಿ): ಇರಾನ್‌ನ ಅಧಿಕಾರಿಗಳು 2025ರಲ್ಲಿ ಕನಿಷ್ಠ 1,639 ಮಂದಿಗೆ ಮರಣದಂಡನೆ ಜಾರಿ ಮಾಡಿದ್ದಾರೆ ಎಂದು ಎರಡು ಎನ್‌ಜಿಒಗಳು ಸೋಮವಾರ ಹೇಳಿವೆ.

'2024ಕ್ಕೆ ಹೋಲಿಸಿದರೆ ಇರಾನ್‌ನಲ್ಲಿ ಮರಣದಂಡನೆ ಜಾರಿ ಪ್ರಮಾಣ ಶೇ 68ರಷ್ಟು ಏರಿಕೆಯಾಗಿದೆ. 2024ರಲ್ಲಿ 975 ಮಂದಿಗೆ ಮರಣದಂಡನೆ ಜಾರಿಗೊಳಿಸಲಾಗಿತ್ತು' ಎಂದು ನಾರ್ವೆ ಮೂಲದ ಇರಾನ್ ಹ್ಯೂಮನ್ ರೈಟ್ಸ್ (ಐಎಚ್‌ಆರ್) ಮತ್ತು ಪ್ಯಾರಿಸ್ ಮೂಲದ 'ಟುಗೆದರ್ ಅಗೇನ್ಸ್ಟ್ ದಿ ಡೆತ್ ಪೆನಾಲ್ಟಿ' (ಇಸಿಪಿಎಂ) ಎನ್‌ಜಿಒ ಸಂಸ್ಥೆಗಳ ಜಂಟಿ ವರದಿ ತಿಳಿಸಿದೆ.

'ಈಗ ನಡೆಯುತ್ತಿರುವ ಸಂಘರ್ಷದಲ್ಲಿ ಇರಾನ್ ಸೋಲು ಒಪ್ಪದಿದ್ದರೆ, ಮುಂದಿನ ದಿನಗಳಲ್ಲಿ ಮರಣದಂಡನೆ ಶಿಕ್ಷೆ ಜಾರಿ ಪ್ರಮಾಣ ಇನ್ನಷ್ಟು ಹೆಚ್ಚುವ ಆತಂಕವಿದೆ' ಎಂದು ಹೇಳಿದೆ.

'2025ರಲ್ಲಿ ಕನಿಷ್ಠ 48 ಮಹಿಳೆಯರಿಗೆ ಮರಣದಂಡನೆ ವಿಧಿಸಲಾಗಿದೆ. ಒಂದು ವರ್ಷದಲ್ಲಿ ಇಷ್ಟೊಂದು ಮಹಿಳೆಯರಿಗೆ ಮರಣದಂಡನೆ ವಿಧಿಸಿದ್ದು ಇದೇ ಮೊದಲು. 2024ರಲ್ಲಿ 31 ಮಹಿಳೆಯರಿಗೆ ಮರಣದಂಡನೆ ವಿಧಿಸಲಾಗಿತ್ತು' ಎಂದು ತಿಳಿಸಿದೆ.

ಇರಾನ್ ಬಂದರುಗಳಿಗೆ ದಿಗ್ಬಂಧನ

ಒಂದನೇ ಪುಟದಿಂದ...

ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ನಡೆದಿದ್ದ ಶಾಂತಿ ಮಾತುಕತೆ ಮುರಿದುಬಿದ್ದ ಬಳಿಕ ಟ್ರಂಪ್ ಪ್ರತಿಕ್ರಿಯಿಸಿ, 'ಹೊರ್ಮುಜ್ ಜಲಸಂಧಿಗೆ ದಿಗ್ಬಂಧನ ಹಾಕಲಾಗುವುದು' ಎಂದು ಬೆದರಿಕೆ ಒಡ್ಡಿದ್ದರು. 'ಇರಾನ್‌ನ ಬಂದರುಗಳಿಂದ ಯಾವುದೇ ದೇಶದ ಹಡಗುಗಳಿಗೆ ಹೊರಬರಲು ಅಥವಾ ಬೇರೆ ಕಡೆಗಳಿಂದ ಇರಾನ್ ಬಂದರು ತಲುಪಲು ಬಿಡುವುದಿಲ್ಲ' ಎಂದು ಅಮೆರಿಕ ಸೇನೆ ಹೇಳಿತ್ತು. ಇರಾನ್ ಕಾಲಮಾನ ಸೋಮವಾರ ಸಂಜೆ 5.30ರಿಂದ ದಿಗ್ಬಂಧನ ಜಾರಿಗೆ ಬಂದಿದೆ.

'ಪರ್ಷಿಯನ್ ಕೊಲ್ಲಿ ಮತ್ತು ಒಮಾನ್ ಸಾಗರದ ಸರಹದ್ದಿನಲ್ಲಿ ಒಂದೋ ಎಲ್ಲರೂ ಸುರಕ್ಷಿತರಾಗಿರಬೇಕು. ಇಲ್ಲವೇ ಯಾರೂ ಸುರಕ್ಷಿತವಾಗಿರಬಾರದು' ಎಂದು ಇರಾನ್‌ನ ಸೇನೆಯು ಅಮೆರಿಕದ ಸೇನೆಗೆ ಎಚ್ಚರಿಕೆ ನೀಡಿತ್ತು.

'ಇರಾನ್‌ನ ರಫ್ತುಗಳನ್ನು ತಡೆದು ದೇಶದ ಆದಾಯದ ಹರಿವನ್ನು ತಡೆಯುವುದು ಟ್ರಂಪ್ ಅವರ ಯೋಚನೆ. ಇರಾನ್‌ನಿಂದ ಚೀನಾವು ದೊಡ್ಡ ಪ್ರಮಾಣದಲ್ಲಿ ತೈಲ ಖರೀದಿಸುತ್ತದೆ. ಜಲಸಂಧಿಗೆ ದಿಗ್ಬಂಧನ ಹಾಕುವ ಮೂಲಕ ಚೀನಾದ ಮೇಲೆ ಒತ್ತಡ ಹೇರುವುದು, ಆ ಮೂಲಕ ಇರಾನ್‌ನ ಮೇಲೆ ಒತ್ತಡ ಬರುವಂತೆ ಮಾಡುವುದು ಅಮೆರಿಕದ ಯೋಜನೆ' ಎನ್ನಲಾಗುತ್ತಿದೆ.

ಚೀನಾ ಸೇರಿದಂತೆ ಕೆಲವು ಸ್ನೇಹಿತ ದೇಶಗಳ ಹಡಗುಗಳಿಗೆ ಮಾತ್ರವೇ ಹೊರ್ಮುಜ್ ಜಲಸಂಧಿಯನ್ನು ದಾಟಲು ಇರಾನ್ ಅನುವು ಮಾಡಿಕೊಡುತ್ತಿತ್ತು. ಜಲಸಂಧಿಗೆ ದಿಗ್ಬಂಧನ ಹಾಕುವ ಅಮೆರಿಕದ ಕ್ರಮಕ್ಕೆ ಚೀನಾ ವಿರೋಧ ವ್ಯಕ್ತಪಡಿಸಿದೆ. 'ಇದೇ ಮಂಗಳವಾರ ಮತ್ತು ಬುಧವಾರ ನಾನು ಚೀನಾಕ್ಕೆ ಭೇಟಿ ನೀಡಲಿದ್ದೇನೆ' ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊ ಹೇಳಿದ್ದಾರೆ.

ಬ್ರಿಟನ್, ಸ್ಪೇನ್ ಮತ್ತು ಫ್ರಾನ್ಸ್ ಸೇರಿದಂತೆ ನ್ಯಾಟೊ ದೇಶಗಳು ಅಮೆರಿಕದ ಕ್ರಮವನ್ನು ವಿರೋಧಿಸಿವೆ. 'ಇದಕ್ಕೆ ನಮ್ಮ ಬೆಂಬಲವಿಲ್ಲ' ಎಂದಿವೆ. ಆದರೆ, ಇಸ್ರೇಲ್ ಮಾತ್ರ ಅಮೆರಿಕದ ಜೊತೆ ಇದ್ದೇವೆ ಎಂದಿದೆ. 'ನಾವು ಅಮೆರಿಕದೊಂದಿಗೆ ಸಂಪರ್ಕದಲ್ಲಿದ್ದೇವೆ. ದಿಗ್ಬಂಧನಕ್ಕೆ ನಮ್ಮ ಬೆಂಬಲವಿದೆ' ಎಂದು ಇಸ್ರೇಲ್ ಹೇಳಿದೆ.

ಹಡಗು ವಶಕ್ಕೆ: ಅಮೆರಿಕ ಎಚ್ಚರಿಕೆ

'ನಾವು ದಿಗ್ಬಂಧನ ಹಾಕಿರುವ ಪ್ರದೇಶಗಳಿಂದ ಯಾವುದೇ ದೇಶದ ಹಡಗು ಹೊರಬರಲು ಅಥವಾ ಒಳಹೋಗಲು ನಮ್ಮ ಅನುಮತಿ ಬೇಕು. ಅನುಮತಿ ಇಲ್ಲದೆ ಜಲಸಂಧಿಯನ್ನು ದಾಟಲು ಮುಂದಾದರೆ ಅಂಥ ಹಡಗುಗಳನ್ನು ತಡೆದು, ಬೇರೆಡೆ ತೆರಳಲು ಸೂಚಿಸಲಾಗುವುದು ಇಲ್ಲವೇ ವಶಕ್ಕೆ ಪಡೆಯಲಾಗುವುದು' ಎಂದು ಅಮೆರಿಕ ಸೇನೆ ಎಚ್ಚರಿಕೆ ನೀಡಿದೆ. 'ಇರಾನ್ ಹೊರತುಪಡಿಸಿ ಬೇರೆ ದೇಶಗಳ ಹಡಗುಗಳಿಗೆ ಯಾವುದೇ ತಡೆಯಿಲ್ಲ. ಇರಾನ್‌ನ ಇಡೀ ಕರಾವಳಿ ಪ್ರದೇಶಕ್ಕೆ ನಾವು ದಿಗ್ಬಂಧನ ವಿಧಿಸಿದ್ದೇವೆ. ಆಹಾರ, ವೈದ್ಯಕೀಯ ಸರಕುಗಳು ಮತ್ತು ಇತರೆ ಅಗತ್ಯ ಸರಕುಗಳಿಗೆ ಮಾತ್ರವೇ ಜಲಸಂಧಿ ದಾಟಲು ಅವಕಾಶ ನೀಡಲಾಗುವುದು. ಆದರೆ, ಈ ಹಡಗುಗಳನ್ನು ಪರಿಶೀಲಿಸಿಯೇ ಅನುಮತಿ ನೀಡಲಾಗುವುದು' ಎಂದಿದೆ.

ಹೊರ್ಮುಜ್ ನಮ್ಮ ನಿಯಂತ್ರಣದಲ್ಲಿದೆ: ಇರಾನ್

'ಹೊರ್ಮುಜ್ ಜಲಸಂಧಿಯ ಮೇಲೆ ನಮಗೆ ಸಂಪೂರ್ಣ ನಿಯಂತ್ರಣವಿದೆ. ನಮ್ಮ ಅಸ್ತಿತ್ವವನ್ನು ಕಡೆಗಣಿಸಿ ಜಲಸಂಧಿಯನ್ನು ದಾಟಲು ಮುಂದಾದರೆ, ಗಂಭೀರವಾದ ಮತ್ತು ಅಪಾಯಕಾರಿಯಾದ ಪರಿಸ್ಥಿತಿ ಎದುರಾಗಲಿದೆ. ಸೇನಾ ಹಡಗುಗಳು ಇಲ್ಲಿ ಇರುವಂತಿಲ್ಲ. ಒಂದು ವೇಳೆ ಅಂಥ ಹಡಗುಗಳು ಕಂಡರೆ, ಸೂಕ್ತವಾದ ಪ್ರತಿಕ್ರಿಯೆ ನೀಡಲಾಗುವುದು' ಎಂದು ಇರಾನ್‌ನ ರೆವಲ್ಯೂಷನರಿ ಗಾರ್ಡ್ ಎಚ್ಚರಿಕೆ ನೀಡಿದೆ.

'ಇನ್ನೂ ಪ್ರಯೋಗಿಸದ ಶಸ್ತ್ರಾಸ್ತ್ರಗಳು ನಮ್ಮ ಬಳಿ ಇವೆ. ಟ್ವೀಟ್‌ಗಳು ಮತ್ತು ಕಾಲ್ಪನಿಕ ಯೋಜನೆಗಳಿಂದ ನಮ್ಮನ್ನು ಬೆದರಿಸಲು ಸಾಧ್ಯವಿಲ್ಲ' ಎಂದಿದೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಪ್ರಕಾಶನ ಜೆರಾಕ್ಸ್ ಕಥೆ

• ಅಭಿಲಾಷ್ ಪಿ.ಎಸ್.

ಜೀ5 ಜೊತೆಗೂಡಿ ಡಾಲಿ ಪಿಕ್ಚರ್ಸ್ ಲಾಂಛನದಲ್ಲಿ ನಟ ಧನಂಜಯ ನಿರ್ಮಾಣ ಮಾಡಿರುವ 'ಜೆರಾಕ್ಸ್' ವೆಬ್‌ಸರಣಿಯಲ್ಲಿ ನಾಗಭೂಷಣ್ ನಾಯಕರಾಗಿ ನಟಿಸುತ್ತಿದ್ದು, ಪಾಯಲ್ ಚೆಂಗಪ್ಪ ಜೋಡಿಯಾಗಿದ್ದಾರೆ.

'ಹನಿಮೂನ್' ವೆಬ್‌ಸರಣಿ ಹಾಗೂ 'ಇಕ್ಕಟ್', 'ಟಗರು ಪಲ್ಯ', 'ವಿದ್ಯಾಪತಿ' ಸಿನಿಮಾಗಳ ಮೂಲಕ ಕನ್ನಡದ ಜನತೆಗೆ ಹತ್ತಿರವಾಗಿರುವ ನಾಗಭೂಷಣ್, ಮತ್ತೊಮ್ಮೆ ವೆಬ್‌ಸರಣಿ ಲೋಕಕ್ಕೆ ಹೆಜ್ಜೆ ಇಟ್ಟಿದ್ದಾರೆ. ಈ ಬಗ್ಗೆ ಮಾತಿಗಿಳಿದ ನಾಗಭೂಷಣ್, 'ನಾನು ನಟಿಸಿದ್ದ 'ಹನಿಮೂನ್' ಬಿಡುಗಡೆಯಾದ ಸಂದರ್ಭದಲ್ಲಿ ಒಟಿಟಿಯಲ್ಲಿ ಕನ್ನಡದ ಕಾಂಟೆಂಟ್‌ಗಳು ವಿರಳವಾಗಿತ್ತು. ಕನ್ನಡದಲ್ಲಿ ವೆಬ್‌ಸರಣಿಗಳು ಬರಬೇಕು ಎನ್ನುವ ಆಶಯ ಹೊತ್ತು ಕೆಲಸ ಮಾಡಿದ್ದೆವು. ಈ ಮಾದರಿಯ ಕಾಂಟೆಂಟ್‌ಗಳ ಬಗ್ಗೆ ನನಗೆ ಆಸಕ್ತಿಯೂ ಇತ್ತು. ವೆಬ್‌ಸರಣಿಯ ಮುಂದಿನ ಹೆಜ್ಜೆಯಾಗಿ ಸಿನಿಮಾಗೆ ಇಳಿದೆ. ಹಾಗೆಂದ ಮಾತ್ರಕ್ಕೆ ವೆಬ್‌ಸರಣಿಯತ್ತ ಮರಳಬಾರದು ಎಂದೇನಿಲ್ಲವಲ್ಲ. ನಾನೊಬ್ಬ ನಟ. ನನಗೆ ಸಿನಿಮಾ ಅಥವಾ ವೆಬ್‌ಸರಣಿಯಲ್ಲಿ ಪಾತ್ರವಷ್ಟೇ ಮುಖ್ಯ. ವೆಬ್‌ಸರಣಿ ವಿಷಯದಲ್ಲಿ ಕನ್ನಡದಲ್ಲಿ ಇತ್ತೀಚೆಗೆ ಹೆಚ್ಚಿನ ಪ್ರಯೋಗಗಳಾಗುತ್ತಿವೆ. ಜೀ5 ನಿರಂತರವಾಗಿ ವೆಬ್ ಸರಣಿ ಮಾಡುತ್ತಿದೆ. ಕನ್ನಡದ ಕಾಂಟೆಂಟ್‌ಗಳಿಗೂ ಒಳ್ಳೆಯ ವೇದಿಕೆ ಸಿಗುತ್ತಿದೆ' ಎಂದರು.

ಮರಳಿ ಬೇರಿಗೆ

'ವೆಬ್‌ಸರಣಿ ಎನ್ನುವುದು ಬರಹಗಾರರ ವೇದಿಕೆ. ಇಲ್ಲಿ ಹಲವು ವಿಷಯಗಳನ್ನು ಹೇಳಲು ಅವಕಾಶವಿದೆ. 'ಕೆಇಬಿ' ಯುಟ್ಯೂಬ್ ವಿಡಿಯೊಗಳಿಂದ ನನ್ನ ಈ ಪಯಣ ಆರಂಭವಾಯಿತು. ನನಗೆ ಕೀರ್ತಿ ತಂದುಕೊಟ್ಟಿರುವುದೇ ಒಟಿಟಿ ವೇದಿಕೆ. 'ಜೆರಾಕ್ಸ್' ಸರಣಿಯ ಪಯಣ ಮರಳಿ ಬೇರಿಗೆ ಎನ್ನಬಹುದು. ನನಗೆ ಸಿನಿಮಾ, ವೆಬ್‌ಸರಣಿ ಬೇರೆ ಬೇರೆಯಲ್ಲ. ಎರಡನ್ನೂ ಇಷ್ಟಪಡುತ್ತೇನೆ' ಎನ್ನುತ್ತಾರೆ ನಾಗಭೂಷಣ್.

'ಜೆರಾಕ್ಸ್' ಡ್ರಾಮಾ...


'ಈ ವೆಬ್‌ಸರಣಿ ಫ್ಯಾಂಟಸಿ ಕಾಮಿಡಿ ಥ್ರಿಲ್ಲರ್ ಜಾನರ್‌ನಲ್ಲಿದೆ. ಬಹುತೇಕ ಫ್ಯಾಂಟಸಿ ಸಿನಿಮಾಗಳ ಕಥೆಗಳು ದೊಡ್ಡ ನಗರಗಳಲ್ಲಿ ನಡೆಯುವಂತೆ ಚಿತ್ರಿತವಾಗಿರುತ್ತವೆ. ಆದರೆ 'ಜೆರಾಕ್ಸ್' ಕಥೆ ನಡೆಯುವುದು ಸಣ್ಣ ಊರಿನಲ್ಲಿ. ಒಂದು 'ಜೆರಾಕ್ಸ್' ಯಂತ್ರದಿಂದ ಮನುಷ್ಯರನ್ನೇ ನಕಲು ಮಾಡುವ ಶಕ್ತಿ ನನಗಿರುತ್ತದೆ. 'ಪ್ರಕಾಶ' ನನ್ನ ಪಾತ್ರದ ಹೆಸರು. ಈ ಶಕ್ತಿಯಿಂದ ಆ ಊರಿನಲ್ಲಿ ನಡೆಯುವ ಡ್ರಾಮಾ, ಗೊಂದಲಗಳೇ ಸರಣಿಯ ಕಥೆ' ಎಂದರು ನಾಗಭೂಷಣ್.

'ವಿದ್ಯಾಪತಿ ಸಿನಿಮಾದಲ್ಲಿ ಹಿಂದಿನೆಲ್ಲಾ ಸಿನಿಮಾಗಳಿಗಿಂತ ಹೆಚ್ಚಿನ ಪ್ರಯತ್ನ ಹಾಕಿದ್ದೆ. ಆದರೆ ನಿರೀಕ್ಷಿತ ಪ್ರತಿಫಲ ಸಿಗಲಿಲ್ಲ. ಮಾಡಿದ ಸಿನಿಮಾಗಳೆಲ್ಲವೂ ಯಶಸ್ವಿಯಾಗಬೇಕು ಎಂದೇನಿಲ್ಲ ಎನ್ನುವ ಪಾಠ ಇದರಿಂದ ಕಲಿತೆ. ಹಿನ್ನೆಡೆಯನ್ನು ಒಪ್ಪಿಕೊಂಡರಷ್ಟೇ ಮುನ್ನಡೆಯಲು ಸಾಧ್ಯ' ಎನ್ನುತ್ತಾ ಮಾತಿಗೆ ವಿರಾಮವಿತ್ತರು.

ಪಾಯಲ್ ಜೋಡಿ

'ಅಮೃತ ಅಂಜನ್' ಸಿನಿಮಾ ಹಾಗೂ ಹತ್ತಾರು ಯುಟ್ಯೂಬ್ ಕಿರುಚಿತ್ರಗಳ ಮೂಲಕ ಖ್ಯಾತಿ ಪಡೆದಿರುವ ನಟಿ ಪಾಯಲ್ ಚೆಂಗಪ್ಪ ಈ ಸರಣಿಯಲ್ಲಿ 'ಸೂಜಿ'ಯಾಗಿ ಕಾಣಿಸಿಕೊಂಡಿದ್ದಾರೆ. 'ಬ್ಲಿಂಕ್' ಖ್ಯಾತಿಯ ಶ್ರೀನಿಧಿ ಬೆಂಗಳೂರು ನಿರ್ದೇಶಿಸಿರುವ ಈ ಸರಣಿಯ ಟ್ರೇಲರ್ ಏ.14 ರಂದು ಬಿಡುಗಡೆಯಾಗಲಿದೆ. ಡಾರ್ಕ್ ಹಾಸ್ಯ ಥ್ರಿಲ್ಲರ್ ಕಥೆಯ ಈ ಸರಣಿ ಶೀಘ್ರದಲ್ಲೇ ಜೀ5ನಲ್ಲಿ ಸ್ಟ್ರೀಮ್ ಆಗಲಿದೆ.


ಪಾಯಲ್


ನಾಗಭೂಷಣ್

ಕೈಯಲ್ಲಿ ನಾಲ್ಕೈದು ಸಿನಿಮಾಗಳು

'ಟಗರು ಪಲ್ಯ', 'ವಿದ್ಯಾಪತಿ' ಬಳಿಕ ಸಾಲು ಸಾಲು ಸಿನಿಮಾಗಳಲ್ಲೂ ನಾಗಭೂಷಣ್ ತೊಡಗಿಸಿಕೊಂಡಿದ್ದಾರೆ. ಅವರು ಮುಖ್ಯಭೂಮಿಕೆಯಲ್ಲಿರುವ 'ಲವ್ ಕೇಸ್' ಸಿನಿಮಾ ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಅವರು ನಟಿಸಿರುವ 'ಅಣ್ಣಫ್ರಮ್ ಮೆಕ್ಸಿಕೋ', 'ಯುವರ್ಸ್‌ಸಿನ್ಸಿಯರ್ಲಿ ರಾಮ್' ಹಾಗೂ 'ಫಾದರ್' ಸಿನಿಮಾ ಈ ವರ್ಷದಲ್ಲೇ ತೆರೆಕಾಣುವ ಸಾಧ್ಯತೆ ಇದೆ. ಇದರ ಜೊತೆಗೆ ಎರಡು ಸಿನಿಮಾಗಳು ಮಾತುಕತೆ ಹಂತದಲ್ಲಿವೆ.

ಏಪ್ರಿಲ್ 17ಕ್ಕೆ 'ಬೆಂಗಳೂರು ಇನ್'


ರಿಷಾ ಗೌಡ

ಧರ್ಮ ಕೀರ್ತಿರಾಜ್ ಅಭಿನಯದ 'ಬೆಂಗಳೂರು ಇನ್' ಸಿನಿಮಾ ಏ.17ರಂದು ತೆರೆಕಾಣಲಿದೆ.

ಬೆಂಗಳೂರಿನಲ್ಲಿ ನಡೆಯುವ ಕೊಲೆ ಪ್ರಕರಣದ ಸುತ್ತ ಈ ಸಿನಿಮಾವಿದೆ. ಸಸ್ಪೆನ್ಸ್ ಥ್ರಿಲ್ಲರ್ ಕಥೆಯುಳ್ಳ ಈ ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಗಿದೆ. ಒಬ್ಬ ಫುಡ್ ಡೆಲಿವರಿ ಏಜೆಂಟ್‌ನ ಕಥೆ ಇಲ್ಲಿದ್ದು, ಕಾರ್ತಿಕ್ ಕೆ. ಮೂರ್ತಿ ನಿರ್ದೇಶಿಸಿದ್ದಾರೆ. ಚಿತ್ರದಲ್ಲಿ ಧರ್ಮ ಕೀರ್ತಿರಾಜ್, ರಿಷಾ ಗೌಡ ಮತ್ತು ಅನುಷಾ ರೈ ಮುಖ್ಯಭೂಮಿಕೆಯಲ್ಲಿದ್ದಾರೆ. ನಟ ಶಶಿಕುಮಾರ್ ಚಿತ್ರದಲ್ಲಿ ಸಹಾಯಕ ಪೊಲೀಸ್ ಆಯುಕ್ತರ ಪಾತ್ರದಲ್ಲಿ ನಟಿಸಿದ್ದಾರೆ. ಅನುಷಾ ರೈ ವರದಿಗಾರ್ತಿಯಾಗಿ ಅಭಿನಯಿಸಿದ್ದಾರೆ.

'ನಿಜ ಜೀವನದ ಒಂದು ಘಟನೆ ಈ ಚಿತ್ರದ ಕಥೆ ಬರೆಯಲು ಸ್ಫೂರ್ತಿ ನೀಡಿತು. ಈ ಸಿನಿಮಾದಲ್ಲಿ ಪೋಷಕರಿಗೆ ಒಂದು ಸಂದೇಶವಿದೆ. ಜೊತೆಗೆ ಕಮರ್ಷಿಯಲ್ ಅಂಶಗಳು ಮತ್ತು ಮನರಂಜನೆಯೂ ಇದೆ' ಎನ್ನುತ್ತಾರೆ ಕಾರ್ತಿಕ್.

'ನಾನೆಂದೂ ಕುಗ್ಗಿಲ್ಲ, ಯಶಸ್ಸು ಸಿಕ್ಕಲಿಲ್ಲ ಎನ್ನುವ ಬೇಸರವೂ ಇಲ್ಲ. ಕೆಲ ಸಿನಿಮಾಗಳ ಸೋಲಿನ ನಂತರ ನಾನು ಚೆನ್ನೈನಲ್ಲಿ ವಾಸವಾಗಿದ್ದೆ. 'ಚಾಣಾಕ್ಷ' ಸಿನಿಮಾದ ಬಳಿಕ ಸಾಲು ಸಾಲು ಸಿನಿಮಾಗಳಲ್ಲಿ ನಟಿಸಿದ್ದೇನೆ. ಇದೇ ಸಿನಿಮಾ ನಿರ್ಮಾಪಕರು 'ಚಾಣಾಕ್ಷ' ಸಿನಿಮಾ ಮಾಡಿದ್ದರು. ಈ ಸಿನಿಮಾದ ಕಥೆ ಅದಕ್ಕಿಂತ ವಿಭಿನ್ನವಾಗಿದೆ. ಚಿತ್ರದಲ್ಲಿ ನಾನು ಪಿಜ್ಜಾ ಡೆಲಿವರಿ ಹುಡುಗನಾಗಿ ನಟಿಸಿದ್ದೇನೆ. ಜೀವನದಲ್ಲಿ ಏನನ್ನಾದರೂ ಸಾಧಿಸಬೇಕೆನ್ನುವ ಕನಸು ಇರುವ ಹುಡುಗನೀತ. ಇದರಲ್ಲೊಂದು ಪ್ರೇಮಕಥೆಯೂ ಇದೆ' ಎಂದರು ಧರ್ಮ.


ಧರ್ಮ ಕೀರ್ತಿರಾಜ್

ಚಿತ್ರವನ್ನು ವೆಂಕಟೇಶಮೂರ್ತಿ ನಿರ್ಮಾಣ ಮಾಡಿದ್ದಾರೆ. ನವೀನ್ ಪಂಚಾಕ್ಷರಿ ಛಾಯಾಚಿತ್ರಗ್ರಹಣ, ಅಸಿಫ್ ಎ. ಕಾದರ್, ಅರವಿಂದ್ ಮುರಳಿ ಸಂಗೀತ, ಕುಮಾರ್ ಸಿ.ಕೆ ಸಂಕಲನ ಚಿತ್ರಕ್ಕಿದೆ.


ನಿಶ್ವಿಕಾ, ಸುದೀಪ್

'ಮಸ್ತ್' ಮಲ್ಲೈಕಾ...

ಸುದೀಪ್ ನಟನೆಯ 'ಮಾರ್ಕ್' ಸಿನಿಮಾದ 'ಮಸ್ತ್ ಮಲ್ಲೈಕಾ' ಹಾಡು ಯುಟ್ಯೂಬ್‌ನಲ್ಲಿ ಐದು ಕೋಟಿ ವೀಕ್ಷಣೆ ಪಡೆದಿದೆ.

ಸಾನ್ವಿ ಸುದೀಪ್ ಹಾಗೂ ನಕಾಶ್ ಅಜೀಜ್ ಹಾಡಿದ್ದ ಈ ಹಾಡಿನಲ್ಲಿ ಸುದೀಪ್ ಹಾಗೂ ನಿಶ್ವಿಕಾ ನಾಯ್ಡು ಹೆಜ್ಜೆ ಹಾಕಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ನೀಡಿರುವ ಈ ಹಾಡಿಗೆ ಅನೂಪ್ ಭಂಡಾರಿ ಸಾಹಿತ್ಯ ಬರೆದಿದ್ದರು. ವಿಶೇಷ ಏನೆಂದರೆ ಸರೆಗಮ ಯುಟ್ಯೂಬ್ ಚಾನಲ್‌ನಲ್ಲಿ ಐದು ಕೋಟಿ ವೀಕ್ಷಣೆ ಕಂಡ ಮೊದಲ ಕನ್ನಡ ಹಾಡು ಇದಾಗಿದೆ. ಯುಟ್ಯೂಬ್ ಮಾತ್ರವಲ್ಲದೆ ಸಾವಿರಾರು ರೀಲ್ಸ್‌ನಲ್ಲೂ ಹಾಡು ಬಳಕೆಯಾಗಿತ್ತು.

₹40 ಕೋಟಿ ಗಳಿಸಿದ ಡಕೈತ್


ಮೃಣಾಲ್ ಠಾಕೂರ್

ಅದಿವಿ ಶೇಷ್ ಹಾಗೂ ಮೃಣಾಲ್ ಠಾಕೂರ್ ನಟನೆಯ 'ಡಕೈತ್: ಏಕ್ ಪ್ರೇಮ್ ಕಥಾ' ಸಿನಿಮಾ ಮೊದಲ ವಾರಾಂತ್ಯದಲ್ಲಿ ವಿಶ್ವದಾದ್ಯಂತ ₹40 ಕೋಟಿ ಗಳಿಸಿದೆ ಎಂದು ಚಿತ್ರತಂಡ ತಿಳಿಸಿದೆ.

ಕಳೆದ ಏ.10ರಂದು ಹಿಂದಿ ಮತ್ತು ತೆಲುಗಿನಲ್ಲಿ ಏಕಕಾಲದಲ್ಲಿ ಬಿಡುಗಡೆಯಾಗಿದ್ದ ಈ ಸಿನಿಮಾವನ್ನು ಶಾನಿಯಲ್ ಡಿಯೊ ನಿರ್ದೇಶಿಸಿದ್ದಾರೆ. ಇದು ಅವರ ನಿರ್ದೇಶನದ ಚೊಚ್ಚಲ ಸಿನಿಮಾ. ಮೊದಲ ದಿನವೇ ₹15 ಕೋಟಿ ಬಾಚಿದ್ದ ಈ ಚಿತ್ರದಲ್ಲಿ ನಿರ್ದೇಶಕ ಅನುರಾಗ್ ಕಶ್ಯಪ್ ಕೂಡಾ ನಟಿಸಿದ್ದಾರೆ. ಅಪರಾಧಿಯೊಬ್ಬ ತನಗೆ ಮೋಸ ಮಾಡಿದ್ದ ಪ್ರೇಯಸಿಯ ವಿರುದ್ಧ ಪ್ರತೀಕಾರ ತೆಗೆದುಕೊಳ್ಳಲು ಮುಂದಾಗುವ ಕಥೆ ಸಿನಿಮಾದಲ್ಲಿದೆ. ಚಿತ್ರವನ್ನು ಸುಪ್ರಿಯಾ ಯಾರ್ಲಗಡ್ಡ ನಿರ್ಮಾಣ ಮಾಡಿದ್ದು, ಪ್ರಕಾಶ್ ರಾಜ್, ಅತುಲ್ ಕುಲಕರ್ಣಿ, ಜ್ಯಾನ್ ಮೇರಿ ಖಾನ್ ಚಿತ್ರದ ತಾರಾಬಳಗದಲ್ಲಿದ್ದಾರೆ.

ಮೊದಲ ಗೆಲುವಿನ ಯತ್ನದಲ್ಲಿರುವ ಅಜಿಂಕ್ಯ ಬಳಗ
ಕೆಕೆಆರ್‌ಗೆ ಉತ್ಸಾಹಿ ಕಿಂಗ್ಸ್ ಸವಾಲು

ಚೆನ್ನೈ (ಪಿಟಿಐ): ಈ ಋತುವಿನಲ್ಲಿ ಅತ್ಯಗತ್ಯವಾಗಿದ್ದ ಗೆಲುವನ್ನು ಸಾಧಿಸಿರುವ ಉಮೇದಿನಲ್ಲಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಮಂಗಳವಾರ ತವರಿನಂಗಳ ಚೆಪಾಕ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ವಿಶ್ವಾಸದಿಂದ ಎದುರಿಸಲಿದೆ. ನೈಟ್ ರೈಡರ್ಸ್ ತಂಡ ಈ ಬಾರಿ ಒಂದೂ ಗೆಲುವನ್ನು ಕಾಣದೇ ಹತಾಶ ಮನಃಸ್ಥಿತಿಯಲ್ಲಿದೆ.

ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಹೋದ ವಾರ ಆಲ್‌ರೌಂಡ್ ಆಟವಾಡಿದ್ದ ಸೂಪರ್ ಕಿಂಗ್ಸ್ ಅತ್ಯಗತ್ಯವಾಗಿದ್ದ ಮೊದಲ ಜಯವನ್ನು ಸಂಪಾದಿಸಿತ್ತು.

ಮೂರು ಪಂದ್ಯಗಳಲ್ಲಿ ವಿಫಲರಾಗಿದ್ದ ವಿಕೆಟ್ ಕೀಪರ್–ಬ್ಯಾಟರ್ ಸಂಜು ಸ್ಯಾಮ್ಸನ್ ಲಯಕ್ಕೆ ಮರಳಿ 56 ಎಸೆತಗಳಲ್ಲಿ 115 ರನ್ ಸಿಡಿಸಿದ್ದರು. ಬೌಲಿಂಗ್‌ನಲ್ಲೂ ತಂಡ ಸಾಂಘಿಕ ಪ್ರದರ್ಶನ ನೀಡಿತ್ತು. ಪದಾರ್ಪಣೆ ಪಂದ್ಯದಲ್ಲಿ ಎಡಗೈ ವೇಗದ ಬೌಲರ್ ಗುರ್ಜಪನೀತ್ ಸಿಂಗ್ ಎಕ್ಸ್‌ಟ್ರಾ ಬೌನ್ಸ್ ಪಡೆದು ಎದುರಾಳಿ ಬ್ಯಾಟರ್‌ಗಳನ್ನು ಕಾಡಿದರು. ಜೇಮಿ ಓವರ್ಟನ್ ಸಹ ನಾಲ್ಕು ವಿಕೆಟ್ ಪಡೆದು ಮಿಂಚಿದರು. ಎಡಗೈ ಸ್ಪಿನ್ನರ್ ಅಖೀಲ್ ಹುಸೇನ್ ದಾಳಿಗೆ ವೈವಿಧ್ಯತೆ ನೀಡಿದರು.

ನಾಯಕ ಋತುರಾಜ್ ಗಾಯಕವಾಡ್ ಮಾತ್ರ ನಿರೀಕ್ಷೆಗೆ ತಕ್ಕಂತೆ ಆಡಿಲ್ಲ. ಪರದಾಡುತ್ತಿರುವ ಕೆಕೆಆರ್ ವಿರುದ್ಧ ಲಯಕ್ಕೆ ಮರಳಲು ಅವರಿಗೊಂದು ಸುವರ್ಣಾವಕಾಶವಿದೆ.

ತಂಡದ ದಿಗ್ಗಜ ಆಟಗಾರ ಮಹೇಂದ್ರ ಸಿಂಗ್ ಧೋನಿ ಅವರ ಪುನರಾಗಮನ ಸನ್ನಿಹಿತವಾಗಿದೆ ಎಂಬ ಸುಳಿವನ್ನು ಋತುರಾಜ್ ಈ ಹಿಂದಿನ ಪಂದ್ಯದ ವೇಳೆ ಪ್ರಕಟಿಸಿದ್ದಾರೆ.

ಯಶಸ್ಸಿನ ನಿರೀಕ್ಷೆ: ಕೈಗೆ ಬಂದ ಗೆ ಕೋಲ್ಕತ್ತ ನೈಟ್ ರೈಡರ್ಸ್ ತಂಡ ಮೊದಲ ಗೆಲುವಿನ ಶೋಧದಲ್ಲಿದೆ. ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಪಂದ್ಯದಲ್ಲಿ ಇನ್ನೇನು ಗೆಲುವು ಖಚಿತ ಎನ್ನುವಷ್ಟರಲ್ಲಿ ಕೊನೆಯ ಎರಡು ಓವರುಗಳಲ್ಲಿ ಮುಕುಲ್ ಚೌಧರಿ ಆಡಿದ ಸ್ಫೋಟಕ ಇನಿಂಗ್ಸ್ ಅಜಿಂಕ್ಯ ರಹಾನೆ ಪಡೆಯ ಕೈಯಿಂದ ಗೆಲುವನ್ನು ಕಸಿದುಕೊಂಡಿತು.

ಬಿಡ್‌ನಲ್ಲಿ ಭಾರಿ ಮೊತ್ತ ಪಡೆದ ಕ್ಯಾಮರೂನ್ ಗ್ರೀನ್ ಬೌಲಿಂಗ್‌ಗೆ ಮರಳಿದ್ದಾರೆ. ಅವರು ತಮ್ಮ ಭಾರಿ ಮೌಲ್ಯಕ್ಕೆ ತಕ್ಕಂತೆ ಆಟವಾಡಿಲ್ಲ. ಮಧ್ಯಮ ಕ್ರಮಾಂಕದಲ್ಲಿ ರಿಂಕು ಸಿಂಗ್ ಸಹ ರನ್‌ಗಳಿಗೆ ತಿಣುಕಾಡುತ್ತಿರುವುದು ತಂಡಕ್ಕೆ ಹಿನ್ನಡೆಯಾಗುತ್ತಿದೆ.

ಅಂಗ್‌ಕ್ರಿಷ್ ರಘುವಂಶಿ ಬಿಟ್ಟರೆ ಅಜಿಂಕ್ಯ ರಹಾನೆ ಮಾತ್ರ ಯಶಸ್ಸು ಕಾಣುತ್ತಿರುವುದು ಮಾತ್ರ ತಂಡಕ್ಕೆ ಇದ್ದುದರಲ್ಲಿ ಸಮಾಧಾನದ ಅಂಶ.

ಅನುಭವಿ ಸ್ಪಿನ್ನರ್ ಸುನಿಲ್ ನಾರಾಯಣ್ ಅವರು ಕೈಚಳಕ ತೋರಬೇಕಿದೆ.

ಇಂದಿನ ಪಂದ್ಯ

ಚೆನ್ನೈ ಸೂಪರ್ ಕಿಂಗ್ಸ್ V/s ಕೋಲ್ಕತ್ತ ನೈಟ್ ರೈಡರ್ಸ್
ತಾಣ: ಚೆನ್ನೈ,
ಆರಂಭ: ರಾತ್ರಿ ಬೆಳಿಗ್ಗೆ 7.30
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್


ಸುನಿಲ್ ನಾರಾಯಣ್

ಬಲಾಬಲ — 32 ಒಟ್ಟು ಪಂದ್ಯ

ಚೆನ್ನೈ ಗೆಲುವು	32
ಕೋಲ್ಕತ್ತ ಜಯ	11
ಫಲಿತಾಂಶವಿಲ್ಲ	1


ಸಂಜು ಸ್ಯಾಮ್ಸನ್ ತಾಲೀಮು ಪಿಟಿಐ ಚಿತ್ರ

ಇಶಾನ್ ಅಬ್ಬರ: ಸನ್‌ರೈಸರ್ಸ್‌ಗೆ ಗೆಲುವು

ಚೊಚ್ಚಲ ಪಂದ್ಯದಲ್ಲೇ ಸ್ಮರಣೀಯ ಪ್ರದರ್ಶನ ನೀಡಿದ ಪ್ರಫುಲ್, ಸಾಕಿಬ್

ಹೈದರಾಬಾದ್ (ಪಿಟಿಐ): ನಾಯಕ ಇಶಾನ್ ಕಿಶನ್ (91;44ಎ) ಅವರ ಮಿಂಚಿನ ಬ್ಯಾಟಿಂಗ್ ಬಳಿಕ ಮಧ್ಯಮ ವೇಗಿಗಳಾದ ಪ್ರಫುಲ್ ಹಿಂಗೆ ಮತ್ತು ಸಾಕಿಬ್ ಹುಸೇನ್ ಅವರು ಐಪಿಎಲ್ ಪದಾರ್ಪಣೆ ಪಂದ್ಯವನ್ನು ಸ್ಮರಣೀಯವಾಗಿಸಿಕೊಂಡರು. ಈ ಮೂವರ ಆಟದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವು ಗೆಲುವಿನ ಹಳಿಗೆ ಮರಳಿತು.

ರಾಜೀವಗಾಂಧಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಸನ್‌ರೈಸರ್ಸ್ ತಂಡವು ರಾಜಸ್ಥಾನ ರಾಯಲ್ಸ್ ವಿರುದ್ಧ 57 ರನ್‌ಗಳ ಸುಲಭ ಗೆಲುವು ದಾಖಲಿಸಿತು. ಸತತ ನಾಲ್ಕು ಪಂದ್ಯಗಳನ್ನು ಗೆದ್ದಿದ್ದ ರಿಯಾನ್ ಪರಾಗ್ ಪಡೆ ಹಾಲಿ ಆವೃತ್ತಿಯಲ್ಲಿ ಮೊದಲ ಸೋಲು ಅನುಭವಿಸಿತು. ಆದರೂ, ಅಗ್ರಸ್ಥಾನ ಅಬಾಧಿತವಾಗಿದೆ.

ಟಾಸ್ ಗೆದ್ದ ರಾಜಸ್ಥಾನ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ಇಶಾನ್ ಮತ್ತು ಹೆನ್ರಿಚ್ ಕ್ಲಾಸೆನ್ (40) ಬ್ಯಾಟಿಂಗ್ ಬಲದಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವು 6 ವಿಕೆಟ್‌ಗೆ 216 ರನ್‌ಗಳ ಉತ್ತಮ ಮೊತ್ತ ಕಲೆಹಾಕಿತು. ಸವಾಲಿನ ಗುರಿ ಪಡೆದ ರಾಜಸ್ಥಾನ ತಂಡವು ಹೊಸಮುಖಗಳಾದ ಪ್ರಫುಲ್ (4–0–34–4) ಮತ್ತು ಸಾಕಿಬ್ (4–0–24–4) ಅಮೋಘ ದಾಳಿಗೆ ಅಕ್ಷರಶಃ ತತ್ತರಿಸಿತು. ಇದರಿಂದಾಗಿ 19 ಓವರ್‌ಗಳಲ್ಲಿ 159 ರನ್ ಗಳಿಸಿ ಹೋರಾಟ ಮುಗಿಸಿತು.

ವಿದರ್ಭದ 24 ವರ್ಷ ವಯಸ್ಸಿನ ಪ್ರಫುಲ್ ಮೊದಲ ಓವರ್‌ನಲ್ಲೇ ಬಲವಾದ ಪೆಟ್ಟು ನೀಡಿದರು. ಮೂವರು ಬ್ಯಾಟರ್‌ಗಳಿಗೆ ಖಾತೆ ತೆರೆಯಲು ಅವಕಾಶ ನೀಡದೆ ಪೆವಿಲಿಯನ್ ದಾರಿ ತೋರಿಸಿದರು.

4-0-24-4


ಸಾಕಿಬ್ ಹುಸೇನ್

ಎರಡನೇ ಎಸೆತದಲ್ಲಿ ವೈಭವ್ ಸೂರ್ಯವಂಶಿ (0; 1ಎ), ನಾಲ್ಕನೇ ಎಸೆತದಲ್ಲಿ ವಿಕೆಟ್ ಕೀಪರ್ ಧ್ರುವ ಜುರೇಲ್ (0; 2ಎ), ಕೊನೆಯ ಎಸೆತದಲ್ಲಿ ಲ್ಹುವಾನ್-ಡ್ರೆ ಪ್ರಿಟೋರಿಯಸ್ (0; 2ಎ) ಅವರ ವಿಕೆಟ್ ಉರುಳಿಸಿದರು.

ಎರಡನೇ ಓವರ್‌ನಲ್ಲಿ 22 ವರ್ಷದ ಸಾಕಿಬ್ ಮೋಡಿ ಮಾಡಿದರು. ಉತ್ತಮ ಲಯದಲ್ಲಿದ್ದ ಯಶಸ್ವಿ ಜೈಸ್ವಾಲ್ (1) ಅವರನ್ನು ಔಟ್ ಮಾಡಿದರು. ಮೂರನೇ ಓವರ್‌ನಲ್ಲಿ ಪ್ರಫುಲ್ ಅವರು ಪರಾಗ್ (4) ಅವರ ವಿಕೆಟ್ ಪಡೆಯುವ ಮೂಲಕ ಎದುರಾಳಿ ತಂಡವನ್ನು ಕಂಗೆಡಿಸಿದರು. ಈ ಹಂತದಲ್ಲಿ ರಾಜಸ್ಥಾನ ತಂಡದ ಮೊತ್ತ 5 ವಿಕೆಟ್‌ಗೆ 9 ರನ್!.

ದೇಶಿ ಕ್ರಿಕೆಟ್‌ನಲ್ಲಿ ವಿದರ್ಭ ತಂಡವನ್ನು ಪ್ರತಿನಿಧಿಸುತ್ತಿರುವ ಪ್ರಫುಲ್ 10 ಪ್ರಥಮ ದರ್ಜೆ ಮತ್ತು 6 ಲಿಸ್ಟ್ ಎ ಕ್ರಿಕೆಟ್ ಆಡಿದ್ದಾರೆ. ಬಿಹಾರದ ಸಾಹಿಲ್ ಅವರು ಆರು ಪ್ರಥಮ ದರ್ಜೆ ಪಂದ್ಯಗಳನ್ನು ಮಾತ್ರ ಆಡಿದ್ದಾರೆ. ಈ ಇಬ್ಬರು ಬೌಲರ್‌ಗಳನ್ನು ಸನ್‌ರೈಸರ್ಸ್ ತಂಡವು ತಲಾ ₹30 ಲಕ್ಷ ಮೂಲಬೆಲೆಗೆ ಖರೀದಿಸಿತ್ತು.

ಅನುಭವಿ ಆಲ್‌ರೌಂಡರ್ ರವೀಂದ್ರ ಜಡೇಜ (45;32ಎ) ಮತ್ತು ಡೊನೊವನ್ ಫೆರೀರಾ (69;44ಎ, 4x7, 6x3) ಅವರು ಆರನೇ ವಿಕೆಟ್‌ಗೆ 118 (72ಎ) ರನ್ ಸೇರಿಸಿ ತಂಡಕ್ಕೆ ಚೇತರಿಕೆ ನೀಡುವ ಯತ್ನ ನಡೆಸಿದರು. ಆದರೆ, ಗೆಲುವಿನ ಗುರಿ ಬಹಳ ದೂರದಲ್ಲಿತ್ತು.

ಇಶಾನ್ ಮಿಂಚು: ಆಕ್ರಮಣಕಾರಿ ಆಟಗಾರ ಅಭಿಷೇಕ್ ಶರ್ಮಾ ಅವರು ಜೋಫ್ರಾ ಆರ್ಚರ್ ಮಾಡಿದ ಇನಿಂಗ್ಸ್‌ನ ಮೊದಲ ಎಸೆತದಲ್ಲೇ ಔಟಾದರು. ಕಿಶನ್ ಬಂದ ಹಾಗೆ ಬೀಸಾಟ ನಡೆಸಿದರು. ಕ್ರೀಸ್‌ನಲ್ಲಿದ್ದಷ್ಟೂ ಸಮಯ ಇಶಾನ್ ಅತ್ಯುತ್ತಮ ಲಯದಲ್ಲಿದ್ದಂತೆ ಕಂಡಿದ್ದು, ಎಂಟು ಬೌಂಡರಿಗಳ ಜೊತೆ ಆರು ಸಿಕ್ಸರ್‌ಗಳನ್ನು ಎತ್ತಿದರು. ಹೆನ್ರಿಚ್ ಜೊತೆ ಮೂರನೇ ವಿಕೆಟ್‌ಗೆ ಅವರು ಕೇವಲ 39 ಎಸೆತಗಳಲ್ಲಿ 88 ರನ್‌ಗಳ ಜೊತೆಯಾಟವಾಡಿದರು. ಕಿಶನ್ ಶತಕ ಸಮೀಪಿಸುತ್ತಿರುವಾಗಲೇ ಸಂದೀಪ್ ಶರ್ಮಾ ಬೌಲಿಂಗ್‌ನಲ್ಲಿ ಭರ್ಜರಿ ಹೊಡೆತಕ್ಕೆ ಯತ್ನಿಸಿ ಬೌಲರ್‌ಗೇ ಕ್ಯಾಚ್ ನೀಡಿದರು.

ಲಯದಲ್ಲಿರುವ ನಿತೀಶ್ (28, 13 ಎಸೆತ) ಮತ್ತು ಸಲೀಲ್ (ಔಟಾಗದೇ 24, 13 ಎಸೆತ) ಅವರ ಆಟದಿಂದ ತಂಡದ ಮೊತ್ತ 200ರ ಗಡಿ ದಾಟಿತು.

ಸಂಕ್ಷಿಪ್ತ ಸ್ಕೋರು: ಸನ್‌ರೈಸರ್ಸ್ ಹೈದರಾಬಾದ್: 20 ಓವರ್‌ಗಳಲ್ಲಿ 6ಕ್ಕೆ 216 (ಇಶಾನ್ ಕಿಶನ್ 91, ಹೆನ್ರಿಚ್ ಕ್ಲಾಸೆನ್ 40, ನಿತೀಶ್ ಕುಮಾರ್ ರೆಡ್ಡಿ 28, ಸಲೀಲ್ ಅರೋರಾ ಔಟಾಗದೇ 24; ಜೋಫ್ರಾ ಆರ್ಚರ್ 37ಕ್ಕೆ2. ರಾಜಸ್ಥಾನ ರಾಯಲ್ಸ್: 19 ಓವರ್‌ಗಳಲ್ಲಿ 159 (ರವೀಂದ್ರ ಜಡೇಜ 45, ಡೊನೊವನ್ ಫೆರೀರಾ 69, ತುಷಾರ್ ದೇಶಪಾಂಡೆ 25; ಪ್ರಫುಲ್ ಹಿಂಗೆ 34ಕ್ಕೆ4, ಸಾಕಿಬ್ ಹುಸೇನ್ 24ಕ್ಕೆ4, ಇಶಾನ್ ಮಾಲಿಂಗ 31ಕ್ಕೆ2.
ಪಂದ್ಯದ ಆಟಗಾರ: ಪ್ರಫುಲ್ ಹಿಂಗೆ.

ಪ್ರಫುಲ್ ದಾಖಲೆ

ಐಪಿಎಲ್ ಇತಿಹಾಸದಲ್ಲಿಯೇ ಮೊದಲ ಓವರ್‌ನಲ್ಲಿ ಮೂರು ವಿಕೆಟ್ ಗಳಿಸಿದ ಮೊದಲ ಬೌಲರ್ ಎಂಬ ಹಿರಿಮೆಗೆ ಪ್ರಫುಲ್ ಪಾತ್ರರಾದರು. ಪ್ರಫುಲ್– ಸಾಕಿಬ್ ಅವರು ಆರಂಭದ 3 ಓವರ್‌ಗಳಲ್ಲಿಯೇ ರಾಯಲ್ಸ್ ತಂಡದ ಪ್ರಮುಖ 5 ವಿಕೆಟ್‌ಗಳನ್ನು ಪಡೆದರು. ಇದು ಪಂದ್ಯದ ಹಣೆಬರಹವನ್ನೂ ನಿರ್ಧರಿಸಿತು.


ಪ್ರಫುಲ್ ಹಿಂಗೆ
ಚಿತ್ರಗಳು: ಎಎಫ್‌ಪಿ / ಪಿಟಿಐ
4-0-34-4

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಆರ್	5	4	0	0	8	0.889
ಪಿಬಿಕೆಎಸ್	4	3	0	1	7	0.720
ಆರ್‌ಸಿಬಿ	4	3	1	0	6	1.148
ಎಸ್‌ಆರ್‌ಎಚ್	5	2	3	0	4	0.576
ಡಿಸಿ	4	2	2	0	4	0.322
ಜಿಟಿ	4	2	2	0	4	0.322
ಎಲ್‌ಎಸ್‌ಜಿ	4	2	2	0	4	- 0.427
ಎಂಐ	4	1	3	0	2	- 0.772
ಸಿಎಸ್‌ಕೆ	4	1	3	0	2	- 1.532
ಕೆಕೆಆರ್	4	0	3	1	1	- 1.315

ಆರೇಂಜ್ ಕ್ಯಾಪ್–ಹೆನ್ರಿಚ್ ಕ್ಲಾಸೆನ್, ಎಸ್‌ಆರ್‌ಎಚ್ (224 ರನ್)
ಪರ್ಪಲ್ ಕ್ಯಾಪ್–ಪ್ರಸಿದ್ಧ ಕೃಷ್ಣ, ಜಿಟಿ (10 ವಿಕೆಟ್)

ಸಿ.ಎಂ ಕಪ್: ರಾಜಾಜಿನಗರ, ಶಾಂತಿನಗರ ಫೈನಲ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕವಿ ಅರಸನ್ ಅವರ ಅವಳಿ ಗೋಲುಗಳ ನೆರವಿನಿಂದ ರಾಜಾಜಿನಗರ ತಂಡವು ಸಿ.ಎಂ ಕಪ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಸೋಮವಾರ 3–2ರಿಂದ ರಾಜರಾಜೇಶ್ವರಿನಗರ ತಂಡದ ವಿರುದ್ಧ ರೋಚಕ ಜಯ ಸಾಧಿಸಿತು. ಶಾಂತಿನಗರ ತಂಡವು ಕೆ.ಆರ್.ಪುರ ತಂಡವನ್ನು ಮಣಿಸಿ, ಫೈನಲ್‌ಗೆ ಲಗ್ಗೆ ಇಟ್ಟಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ರಾಜಾಜಿನಗರ ತಂಡದ ಕವಿ ಅರಸನ್ (34ನೇ ಹಾಗೂ 77ನೇ ನಿ.) ಎರಡು ಗೋಲು ಹಾಗೂ ಸೂರ್ಯಪ್ರಕಾಶ್ ಬಿ. (83ನೇ ನಿ.) ಒಂದು ಗೋಲು ಹೊಡೆದು ಗೆಲುವಿನ ರೂವಾರಿಯಾದರು. ರಾಜರಾಜೇಶ್ವರಿನಗರ ತಂಡದ ಪವನ್ ಬಿ. (79ನೇ ನಿ.) ಹಾಗೂ ಮೈಕೆಲ್ ಆರ್. (90 + 4ನೇ ನಿ.) ಅವರು ಕೊನೆಯಲ್ಲಿ ಹೋರಾಟ ತೋರಿದರೂ, ಗೆಲುವು ದಕ್ಕಲಿಲ್ಲ.

ಇನ್ನೊಂದು ಸೆಮಿಫೈನಲ್‌ನಲ್ಲಿ ಮಗೇಶ್ ಎಸ್. (53ನೇ ನಿ.) ದಾಖಲಿಸಿದ ಏಕೈಕ ಗೋಲಿನ ಬಲದಿಂದ ಶಾಂತಿನಗರ ತಂಡವು 1–0ಯಿಂದ ಕೆ.ಆರ್.ಪುರ ತಂಡವನ್ನು ಸೋಲಿಸಿತು. ಅದರೊಂದಿಗೆ, ಬುಧವಾರ ನಡೆಯಲಿರುವ ಫೈನಲ್‌ನಲ್ಲಿ ರಾಜಾಜಿನಗರ ತಂಡದೊಂದಿಗೆ ಸೆಣಸಲು ವೇದಿಕೆ ಸಿದ್ಧಪಡಿಸಿಕೊಂಡಿತು.

ಸಂಕ್ಷಿಪ್ತ ಸುದ್ದಿ

ಟಿಮ್ ಡೇವಿಡ್, ಹಾರ್ದಿಕ್‌ಗೆ ದಂಡ

ಮುಂಬೈ (ಪಿಟಿಐ): ಮುಂಬೈ ಇಂಡಿಯನ್ಸ್ ವಿರುದ್ಧ ಐಪಿಎಲ್ ಪಂದ್ಯದ ವೇಳೆ ಅಂಪೈರ್‌ಗಳ ನಿರ್ದೇಶನಕ್ಕೆ ಅಗೌರವ ತೋರಿದ ಕಾರಣ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಲ್‌ರೌಂಡರ್ ಟಿಮ್ ಡೇವಿಡ್ ಅವರಿಗೆ ಪಂದ್ಯ ಸಂಭಾವನೆಯ ಶೇ 25ರಷ್ಟು ದಂಡವನ್ನಾಗಿ ವಿಧಿಸಲಾಗಿದೆ. ಅವರ ಶಿಸ್ತಿನ ಖಾತೆಗೆ ಒಂದು ಡಿಮೆರಿಟ್ ಪಾಯಿಂಟ್ ಸಹ ಸೇರ್ಪಡೆಯಾಗಿದೆ.

ನಿಗದಿತ ಅವಧಿಯೊಳಗೆ ಓವರು ಪೂರೈಸದ ಕಾರಣ ಮುಂಬೈ ಇಂಡಿಯನ್ಸ್ ನಾಯಕ ಹಾರ್ದಿಕ್ ಪಾಂಡ್ಯ ಅವರಿಗೆ ₹12 ಲಕ್ಷ ದಂಡ ವಿಧಿಸಲಾಗಿದೆ. ತಂಡ ನಿಗದಿತ ಓವರುಗಳನ್ನು ಪೂರೈಸಲು ಎರಡು ಗಂಟೆಗಿಂತಲೂ ಹೆಚ್ಚು ಸಮಯ ತೆಗೆದುಕೊಂಡಿತ್ತು.

ಡೇವಿಡ್ ಅವರು ಐಪಿಎಲ್ ನೀತಿಸಂಹಿತೆಯ ವಿಧಿ 2.4 ಉಲ್ಲಂಘಿಸಿದ್ದಾರೆ ಎಂದು ಐಪಿಎಲ್ ಹೇಳಿಕೆಯಲ್ಲಿ ತಿಳಿಸಲಾಗಿದೆ. ಅಂಪೈರ್‌ಗಳು ಹೇಳಿದರೂ, ಡೇವಿಡ್ ಎರಡು ಸಂದರ್ಭಗಳಲ್ಲಿ ಚೆಂಡನ್ನು ಅವರಿಗೆ ಹಸ್ತಾಂತರಿಸಿರಲಿಲ್ಲ.



18ನೇ ಓವರಿನಲ್ಲಿ (17.2) ಅಂಪೈರ್‌ಗಳು ಚೆಂಡನ್ನು ಬದಲಿಸಿದ್ದರು. ಚೆಂಡನ್ನು ಡೇವಿಡ್ ನೋಡಲು ಬಯಸಿದ್ದರು. ಆದರೆ ಅಂಪೈರ್‌ಗಳು ಪದೇಪದೇ ಕೇಳಿದ್ದರೂ ಮರಳಿ ನೀಡಿರಲಿಲ್ಲ ಎಂದು ಐಪಿಎಲ್ ತಿಳಿಸಿದೆ. ಎರಡನೇ ಪ್ರಕರಣ 20ನೇ ಓವರಿನಲ್ಲಿ (19.2) ಮತ್ತೆ ಅಂಥದ್ದೇ ತಪ್ಪು ಮಾಡಿದ್ದರು. ಡೇವಿಡ್ ತಪ್ಪನ್ನು ಒಪ್ಪಿಕೊಂಡಿದ್ದಾರೆ ಎಂದೂ ಹೇಳಿಕೆ ತಿಳಿಸಿದೆ.

ಜಿಟಿ– ಸಿಎಸ್‌ಕೆ ಪಂದ್ಯಗಳ ತಾಣ ಅದಲು ಬದಲು

ನವದೆಹಲಿ (ಪಿಟಿಐ): ಇದೇ ತಿಂಗಳ 26ರಂದು ಗುಜರಾತ್‌ನ ಅಹಮದಾಬಾದ್ ಮತ್ತು ಇತರ ನಗರಗಳಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆ ಇರುವ ಕಾರಣ ಗುಜರಾತ್ ಟೈಟನ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ನಡುವಣ ಪಂದ್ಯಗಳ ತಾಣಗಳನ್ನು ಅದಲುಬದಲು ಮಾಡಲಾಗಿದೆ. ಮೂಲ ವೇಳಾಪಟ್ಟಿಯಂತೆ ಜಿಟಿ ಮತ್ತು ಸಿಎಸ್‌ಕೆ ನಡುವಣ ಮಧ್ಯಾಹ್ನದ ಪಂದ್ಯ 26ರಂದು ಅಹಮದಾಬಾದಿನಲ್ಲಿ ನಡೆಯಬೇಕಿತ್ತು. ಪರಿಷ್ಕೃತ ವೇಳಾಪಟ್ಟಿಯ ಪ್ರಕಾರ ಈ ಪಂದ್ಯ ಅದೇ ದಿನ ಚೆನ್ನೈನಲ್ಲಿ ಮಧ್ಯಾಹ್ನ 3.30ಕ್ಕೆ ನಡೆಯಲಿದೆ.

ಅಂತೆಯೇ ಮೇ 21ರಂದು ಚೆನ್ನೈನಲ್ಲಿ ನಿಗದಿಯಾಗಿದ್ದ ಸಿಎಸ್‌ಕೆ ಮತ್ತು ಜಿಟಿ ನಡುವಣ ಮರು ಪಂದ್ಯವನ್ನು ಅದೇ ದಿನ ರಾತ್ರಿ ಅಹಮದಾದಿನಲ್ಲಿ 7.30ಕ್ಕೆ ನಡೆಸಲಾಗುತ್ತಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಹೇಳಿಕೆಯಲ್ಲಿ ತಿಳಿಸಿದೆ.


ಕ್ರೀಡಾಂಗಣ ಸಿಬ್ಬಂದಿಗೆ ₹25 ಲಕ್ಷ

ಗುವಾಹಟಿ (ಪಿಟಿಐ): ಪ್ರತಿಕೂಲ ಹವಾಮಾನದ ನಡುವೆ ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸಿ ಐಪಿಎಲ್‌ನ ಮೂರು ಪಂದ್ಯಗಳು ಯಶಸ್ವಿಯಾಗಿ ನಡೆಯಲು ಕಾರಣರಾದ ಬರ್ಸಾಪರ ಕ್ರೀಡಾಂಗಣದ ಸಿಬ್ಬಂದಿಗೆ ಅಸ್ಸಾಂ ಕ್ರಿಕೆಟ್ ಸಂಸ್ಥೆ ₹25 ಲಕ್ಷ ನಗದು ಬಹುಮಾನ ಪ್ರಕಟಿಸಿದೆ.

ಕ್ಯುರೇಟರ್ ಮತ್ತು ಸಿಬ್ಬಂದಿ ಸೇರಿಕೊಂಡು ಪಿಚ್, ಹೊರಾಂಗಣ ಉತ್ತಮ ಗುಣಮಟ್ಟದಲ್ಲಿರುವಂತೆ ಶ್ರಮಿಸಿದ್ದರು. 'ಗ್ರೌಂಡ್ಸ್‌ಮನ್‌ಗಳ ಕೊಡುಗೆ ಪರಿಗಣಿಸಿ ಸಂಸ್ಥೆಯು ಬಹುಮಾನ ಘೋಷಿಸಿದೆ' ಎಂದು ಎಸಿಎ ಕಾರ್ಯದರ್ಶಿ ಸನಾತನ್ ದಾಸ್ ತಿಳಿಸಿದ್ದಾರೆ.

'ದೀರ್ಘ ರ‍್ಯಾಲಿಗೆ ತಾಳ್ಮೆ ಅಗತ್ಯ'

ನವದೆಹಲಿ (ಪಿಟಿಐ): 'ಅಗ್ರ ಕ್ರಮಾಂಕದ ಆಟಗಾರರ ಸವಾಲನ್ನು ಎದುರಿಸುವ ವೇಳೆ ದೀರ್ಘ ರ‍್ಯಾಲಿಗಳಲ್ಲಿ ತೊಡಗಿಸಿಕೊಳ್ಳಲು ಹೆಚ್ಚಿನ ತಾಳ್ಮೆ ಅಗತ್ಯ. ಪಾದಚಲನೆಯ ಮೇಲೆ ಹೆಚ್ಚಿನ ಹಿಡಿತವೂ ಬೇಕಾಗುತ್ತದೆ' ಎಂದು ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದ ಕನ್ನಡಿಗ ಆಯುಷ್ ಶೆಟ್ಟಿ ಹೇಳಿದರು.



ಶ್ರೇಯಾಂಕರಹಿತ ಆಟಗಾರನಾಗಿದ್ದ 20 ವರ್ಷದ ಆಯುಷ್, ಚೀನಾದಲ್ಲಿ ಭಾನುವಾರ ಮುಕ್ತಾಯಗೊಂಡ ಚಾಂಪಿಯನ್‌ಷಿಪ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿ ರನ್ನರ್ಸ್ ಅಪ್ ಆಗಿದ್ದರು. ಈ ಹಾದಿಯಲ್ಲಿ ತಮಗಿಂತ ಮೇಲಿನ ಕ್ರಮಾಂಕದ ಆಟಗಾರರಿಗೆ ಆಘಾತ ನೀಡಿದ್ದರು.

ಅವರ ಯಶಸ್ಸಿನ ಓಟವು ಫೈನಲ್‌ನಲ್ಲಿ ವಿಶ್ವದ ಎರಡನೇ ಕ್ರಮಾಂಕದ ಶಿಯು ಕಿ (ಚೀನಾ) ವಿರುದ್ಧ ನೇರ ಗೇಮ್‌ಗಳಲ್ಲಿ ಸೋಲುವುದರೊಂದಿಗೆ ಕೊನೆಗೊಂಡಿತ್ತು. ಆದರೆ, ಪುರುಷರ ಸಿಂಗಲ್ಸ್‌ನಲ್ಲಿ 61 ವರ್ಷಗಳ ನಂತರ ಫೈನಲ್ ತಲುಪಿದ್ದ ಭಾರತದ ಆಟಗಾರ ನೆಂಬ ಹೆಗ್ಗಳಿಕೆಗೆ ಅವರು ಪಾತ್ರರಾದರು.

'ಹೌದು, ಫೈನಲ್‌ನಲ್ಲಿ ನನಗೆ ದಾಳಿ ಮಾಡಲು ಎದುರಾಳಿ ಆಟಗಾರ ಹೆಚ್ಚಿನ ಅವಕಾಶ ನೀಡಲಿಲ್ಲ. ಅವರು ತನ್ನ ಲೆಂಥ್ ಅನ್ನು ಪರಿಪೂರ್ಣವಾಗಿ ಇಟ್ಟುಕೊಂಡಿದ್ದರು. ಅವರು ನಿಜವಾಗಿಯೂ ನನಗೆ ನೆಟ್ ಬಳಿ ಯಾವುದೇ ಅವಕಾಶವನ್ನು ನೀಡಲಿಲ್ಲ. ಹೀಗಾಗಿ, ಆಕ್ರಮಣಕಾರಿ ಆಟದ ಅವಕಾಶವನ್ನು ಸೃಷ್ಟಿಸಲು ನನ್ನಿಂದ ಸಾಧ್ಯವಾಗಲಿಲ್ಲ' ಎಂದು ಉಡುಪಿ ಜಿಲ್ಲೆಯ ಕಾರ್ಕಳದ ಆಯುಷ್ ಸೋಮವಾರ ಮಾಧ್ಯಮ ಸಂವಾದದಲ್ಲಿ ಹೇಳಿದರು.

'ನನ್ನ ಈ ಲೋಪಗಳನ್ನು ಸರಿಪಡಿಸಿಕೊಳ್ಳುವತ್ತ ಗಮನಹರಿಸಬೇಕಾಗಿದೆ. ಆದರೆ, ಉನ್ನತ ಕ್ರಮಾಂಕದ ಆಟಗಾರರನ್ನು ಎದುರಿಸುವಾಗ ತಾಳ್ಮೆ ಮುಖ್ಯ. ದೀರ್ಘ ರ‍್ಯಾಲಿ ಆಡುವಾಗ ಸ್ವಲ್ಪ ತಾಳ್ಮೆ ಕಳೆದುಕೊಂಡೆ' ಎಂದು ಅವರು ಹೇಳಿದರು.

ಮಹಿಳಾ ವಿಭಾಗದಲ್ಲಿ ಹೆಚ್ಚಿದ ಪೈಪೋಟಿ

ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿ • ಓಪನ್ ವಿಭಾಗದಲ್ಲಿ ಸಿಂದರೋವ್‌ಗೆ ಪ್ರಶಸ್ತಿ ಖಚಿತ

ಪಾಫೋಸ್ (ಸೈಪ್ರಸ್), (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ವೈಶಾಲಿ ಅವರು ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ 12ನೇ ಸುತ್ತಿನಲ್ಲಿ ಭಾನುವಾರ ಚೀನಾದ ಜಿನೆರ್ ಝು ಅವರಿಗೆ ಮಣಿದರು. ಇದರಿಂದ ಕೇವಲ ಎರಡು ಸುತ್ತುಗಳಿರುವಂತೆ ಪ್ರಶಸ್ತಿ ಅವಕಾಶ ಇನಷ್ಟು ಆಟಗಾರ್ತಿಯರಿಗೆ ಮುಕ್ತವಾಗಿದೆ.

ಇಲ್ಲಿ ಗೆದ್ದವರು ಮಹಿಳಾ ವಿಶ್ವ ಚಾಂಪಿಯನ್ ಜು ವೆನ್‌ಜುನ್ (ಚೀನಾ) ಅವರಿಗೆ ಚಾಲೆಂಜರ್ ಆಗಲಿದ್ದಾರೆ.

ಸೋಮವಾರ ಈ ಟೂರ್ನಿಗೆ ಅಂತಿಮ ವಿಶ್ರಾಂತಿ ದಿನವಾಗಿತ್ತು. ಬಿಳಿ ಕಾಯಿಗಳಲ್ಲಿ ಆಡಿದ್ದ ವೈಶಾಲಿ ಡ್ರಾ ಮಾಡಿಕೊಂಡರೂ ಅಗ್ರಸ್ಥಾನ ಉಳಿಸಿಕೊಳ್ಳಲು ಅವಕಾಶವಿತ್ತು. ಆದರೆ ಗೆಲ್ಲಬೇಕೆಂಬ ದಿಟ್ಟ ಆಟಕ್ಕೆ ಹೋಗಿ ಸೋಲು ಅನುಭವಿಸಬೇಕಾಯಿತು. ಇದು ವೈಶಾಲಿ ಅವರಿಗೆ ಎರಡನೇ ಸೋಲು. ಎರಡೂ ಸೋಲು ಜಿನೆರ್ ಎದುರೇ ಬಂದಿದೆ.

ವೈಶಾಲಿ 12 ಪಂದ್ಯಗಳಿಂದ 7 ಅಂಕ ಸಂಗ್ರಹಿಸಿದ್ದಾರೆ. ಝು ಜಿನೆರ್ ಕೂಡ ಇಷ್ಟೇ ಅಂಕ ಸಂಗ್ರಹಿಸಿದ್ದಾರೆ. ಇಬ್ಬರು ಆಟಗಾರ್ತಿಯರು– ಕಜಾಕಸ್ತಾನದ ಬಿಬಿಸಾರಾ ಅಸೌಬಯೇವಾ ಮತ್ತು ಉಕ್ರೇನ್‌ನ ಅನ್ನಾ ಮುಝಿಚುಕ್– ತಲಾ 6.5 ಅಂಕ ಗಳಿಸಿದ್ದು ಪ್ರಶಸ್ತಿ ಅವಕಾಶ ಜೀವಂತವಾಗಿ ಉಳಿಸಿಕೊಂಡಿದ್ದಾರೆ.

ಅಸೌಬಯೇವಾ ಅವರು ರಷ್ಯಾದ ಕ್ಯಾತರಿನಾ ಲಾಗ್ನೊ (5.5) ಅವರನ್ನು ಸೋಲಿಸಿದರು. ಕೋನೇರು ಹಂಪಿ ಬದಲು ಕೊನೆಗಳಿಗೆಯಲ್ಲಿ ಈ ಟೂರ್ನಿಯಲ್ಲಿ ಆಡುವ ಅವಕಾಶ ಪಡೆದ ಮುಝಿಚುಕ್ ಅವರು ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ (5.5) ಜೊತೆ ಡ್ರಾ ಮಾಡಿಕೊಂಡರು.

ದಿನದ ಮತ್ತೊಂದು ಪಂದ್ಯದಲ್ಲಿ ಭಾರತದ ದಿವ್ಯಾ ದೇಶಮುಖ್ (5), ಚೀನಾದ ಝೊಂಗ್‌ಇ ತಾನ್ (5) ಅವರಿಗೆ ಮಣಿದರು. ಇವರಿಬ್ಬರೂ ಪ್ರಶಸ್ತಿ ರೇಸ್‌ನಿಂದ ಹೊರಬಿದ್ದಿದ್ದಾರೆ.

ಸಿಂದರೋವ್ ಪ್ರಾಬಲ್ಯ: ಓಪನ್ ವಿಭಾಗದಲ್ಲಿ ಉಜ್ಬೇಕ್ ತಾರೆ ಜಾವೊಖಿರ್ ಸಿಂದರೋವ್ ಆಟ ಮತ್ತೊಮ್ಮೆ ಗಮನ ಸೆಳೆಯಿತು. ಅವರು ಬಿಳಿ ಕಾಯಿಗಳಲ್ಲಿ ಆಡಿ, ವಿಶ್ವದ ಎರಡನೇ ಕ್ರಮಾಂಕದ ಆಟಗಾರ ಹಿಕಾರು ನಕಾಮುರ (ಅಮೆರಿಕ, 5) ಜೊತೆ ಡ್ರಾ ಸಾಧಿಸಿದರು.

ಗೋವಾದ ವಿಶ್ವಕಪ್ ವಿಜೇತ ಸಿಂದರೋವ್ 12 ಸುತ್ತುಗಳಿಂದ 9 ಪಾಯಿಂಟ್ ಹೊಂದಿದ್ದು, ಈ ಟೂರ್ನಿಯ ಇತಿಹಾಸದಲ್ಲೇ ಬೇಗನೇ ಪ್ರಶಸ್ತಿ ಖಚಿತಪಡಿಸಿಕೊಂಡಿದ್ದಾರೆ.

ಈ ವಿಭಾಗದಲ್ಲಿ ಭಾರತದ ಏಕೈಕ ಆಟಗಾರ ಪ್ರಜ್ಞಾನಂದ ಅವರು ಈ ಮೊದಲೇ ಪ್ರಶಸ್ತಿ ರೇಸ್‌ನಿಂದ ಹೊರಬಿದ್ದಿದ್ದು, 12ನೇ ಸುತ್ತಿನಲ್ಲಿ ಆ್ಯಂಡ್ರೆ ಇಸಿಪೆಂಕೊ (ರಷ್ಯಾ, 4.5) ಜೊತೆ ಡ್ರಾ ಮಾಡಿಕೊಂಡರು. ಅಮೆರಿಕದ ಫ್ಯಾಬಿಯಾನೊ ಕರುವಾನ (6) ಮತ್ತು ಜರ್ಮನಿಯ ಮಥಾಯಸ್ ಬ್ಲೂಬಾಮ್ (5) ನಡುವಣ, ಚೀನಾದ ವೀ ಯಿ (5) ಮತ್ತು ಅನಿಶ್ ಗಿರಿ (6.5) ನಡುವಣ ಪಂದ್ಯಗಳು ಡ್ರಾ ಆದವು.





ಭಾರತದ ವೈಶಾಲಿ ಆರ್. (ಎಡ). ಜಾವೊಖಿರ್ ಸಿಂದರೋವ್ ಫಿಡೆ ಚಿತ್ರಗಳು

ಟೆಕ್ನಿಕೊ ಎಫ್‌ಸಿ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಪ್ರದರ್ಶನ ತೋರಿದ ಟೆಕ್ನಿಕೊ ಫುಟ್‌ಬಾಲ್ ಫೌಂಡೇಶನ್ ತಂಡವು ಕೆಎಸ್‌ಎಫ್‌ಎ ಎ ಡಿವಿಷನ್ ಲೀಗ್ ಮಹಿಳಾ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಸೋಮವಾರ 8–0ಯಿಂದ ಜಿಆರ್‌ಕೆ ಗರ್ಲ್ಸ್ ತಂಡವನ್ನು ನಿರಾಯಾಸವಾಗಿ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟೆಕ್ನಿಕೊ ತಂಡದ ಪ್ರಾಚಿ ಬಿಷ್ಟ್ (2ನೇ ಹಾಗೂ 22ನೇ ನಿ.) ಮತ್ತು ತಿಹಿ ಶಿಂಗಟಿ (15ನೇ ಹಾಗೂ 33ನೇ ನಿ.) ಅವಳಿ ಗೋಲು ಹೊಡೆದು ಮಿಂಚಿದರು. ಸಬ್ರೀನ್ ಅಲಿ (6ನೇ ನಿ.), ಅನುಪ್ರಿಯಾ ಸಹಾನಿ (45ನೇ ನಿ.), ಅಧಿಶಾ ವಾಲಾ (53ನೇ ನಿ.) ಮತ್ತು ಅಂಜಲಿ ಮರಿಯಾ ಥಾಮಸ್ (55ನೇ ನಿ.) ತಲಾ ಒಂದು ಗೋಲು ದಾಖಲಿಸಿದರು.

ದಿನದ ಇನ್ನೊಂದು ಪಂದ್ಯದಲ್ಲಿ ಕೆಂಪ್ ಫುಟ್‌ಬಾಲ್ ಜೂನಿಯರ್ಸ್ ತಂಡವು 2–0 ಯಿಂದ ರೆಡ್ಸ್ ಯುನೈಟೆಡ್ ತಂಡದ ವಿರುದ್ಧ ಗೆಲುವು ಸಾಧಿಸಿತು. ಎರಡನೇ ಅವಧಿಯಲ್ಲಿ ಗೋಲು ಹೊಡೆದ ಜಾನ್ಹವಿ ರೆಡ್ಡಿ (50ನೇ ನಿ.) ಹಾಗೂ ಅನಿಕಾ ಜೋಶಿ (59ನೇ ನಿ.) ಅವರು ಕೆಂಪ್ ತಂಡದ ಗೆಲುವಿನ ರೂವಾರಿಯಾದರು.

ಮತ್ತೊಂದು ಪಂದ್ಯದಲ್ಲಿ ನಿಲವೊಲಿ ಸೇತುರಾಯರ್ (6ನೇ ನಿ.) ಅವರ ಗೋಲಿನ ನೆರವಿನಿಂದ ಯಂಗ್ ಬ್ಲ್ಯೂಸ್ ಎಲೀಟ್ ಫುಟ್‌ಬಾಲ್ ಕ್ಲಬ್ ತಂಡವು 1–0ಯಿಂದ ಶ್ರೀ ರೇಣುಕಾ ಎಫ್‌ಸಿ ತಂಡದ ವಿರುದ್ಧ ಜಯ ಸಾಧಿಸಿತು.



ಖ್ಯಾತ ಹಿನ್ನೆಲೆ ಗಾಯಕಿಗೆ ಗೌರವ ನಮನಗಳು!

ಪಿಕಲ್‌ಬಾಲ್: ಭಾರತಕ್ಕೆ ಮತ್ತೆರಡು ಚಿನ್ನ

ನವದೆಹಲಿ (ಪಿಟಿಐ): ಭಾರತದ ಅರ್ಜುನ್ ಸಿಂಗ್ ಮತ್ತು ಧಿರೇನ್ ಪಟೇಲ್ ಅವರು ಫ್ಲೋರಿಡಾದ ನೇಪಲ್ಸ್‌ನಲ್ಲಿ ನಡೆದ ಯುಎಸ್ ಓಪನ್ ಪಿಕಲ್‌ಬಾಲ್ ಚಾಂಪಿಯನ್‌ಷಿಪ್‌ನ ತಮ್ಮ ತಮ್ಮ ಸಿಂಗಲ್ಸ್ ಸ್ಪರ್ಧೆಗಳಲ್ಲಿ ಚಿನ್ನದ ಪದಕ ಗೆದ್ದರು.

ಪುರುಷರ ಸಿಂಗಲ್ಸ್ 5.0 ವಿಭಾಗದಲ್ಲಿ ಅರ್ಜುನ್ 13-11, 11-6 ಅಂತರದಿಂದ ಆಷ್ಟನ್ ಪ್ಯಾಟರ್ಸನ್ ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದರು. 40 + ಪ್ರೊ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಧಿರೇನ್ 11-9, 3-11, 11-9 ಅಂತರದಲ್ಲಿ ಜುವಾನ್ ಅರಾಯಾ ಅವರನ್ನು ಮಣಿಸಿದರು.



ಮಾಂಟೆ ಕಾರ್ಲೊ ಮಾಸ್ಟರ್ ಪ್ರಶಸ್ತಿ ಗೆದ್ದ ಯಾನಿಕ್ ಸಿನ್ನರ್ ಮತ್ತು ರನ್ನರ್ಸ್ ಅಪ್ ಕಾರ್ಲೋಸ್ ಅಲ್ಕರಾಜ್

ಮಾಂಟೆ ಕಾರ್ಲೊ ಪ್ರಶಸ್ತಿ ಗೆದ್ದ ಬೆನ್ನಲ್ಲೇ ಅಗ್ರಸ್ಥಾನಕ್ಕೆ ಸಿನ್ನರ್

ಮಾಂಟೆ ಕಾರ್ಲೊ (ಎಎಫ್‌ಪಿ): ಇಟಲಿಯ ತಾರೆ ಯಾನಿಕ್ ಸಿನ್ನರ್ ಅವರು ಭಾನುವಾರ ಫೈನಲ್‌ನಲ್ಲಿ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರನ್ನು ಮಣಿಸಿ ಮೊದಲ ಬಾರಿ ಮಾಂಟೆ ಕಾರ್ಲೊ ಮಾಸ್ಟರ್ ಪ್ರಶಸ್ತಿ ಮುಡಿಗೇರಿಸಿಕೊಂಡರು. ಅದರ ಬೆನ್ನಲ್ಲೇ ಸಿನ್ನರ್ ವಿಶ್ವದ ಅಗ್ರಮಾನ್ಯ ಆಟಗಾರ ಪಟ್ಟಕ್ಕೆ ಮರಳಿದರು.

ಕಳೆದ ತಿಂಗಳು ಇಂಡಿಯನ್ ವೆಲ್ಸ್ ಮತ್ತು ಮಯಾಮಿ ಓಪನ್‌ನಲ್ಲಿ ಚಾಂಪಿಯನ್ ಆಗಿದ್ದ 24 ವರ್ಷದ ಸಿನ್ನರ್ 7-6 (7/5), 6-3ರಲ್ಲಿ ನೇರ ಸೆಟ್‌ಗಳಿಂದ ಅಲ್ಕರಾಜ್ ಅವರನ್ನು ಸೋಲಿಸಿ ವರ್ಷದ ಮೂರನೇ 'ಎಟಿಪಿ 1000' ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ಇದರೊಂದಿಗೆ ಎಟಿಪಿ ರ‍್ಯಾಂಕಿಂಗ್‌ನಲ್ಲಿ ಅಲ್ಕರಾಜ್ ಅವರನ್ನು ಹಿಂದಿಕ್ಕಿ ಮತ್ತೆ ಅಗ್ರಸ್ಥಾನಕ್ಕೆ ಏರಿದರು.

ಸಿನ್ನರ್ ಅವರು ಸತತ ನಾಲ್ಕು 'ಎಟಿಪಿ 1000' ಪ್ರಶಸ್ತಿಗಳನ್ನು ಗೆದ್ದ ವಿಶ್ವದ ಮೂರನೇ ಆಟಗಾರ ಎಂಬ ಹಿರಿಮೆಗೂ ಪಾತ್ರವಾದರು. ಅವರು ಕಳೆದ ಋತುವಿನ ಕೊನೆಯಲ್ಲಿ ಪ್ಯಾರಿಸ್ ಮಾಸ್ಟರ್‌ನಲ್ಲಿಯೂ ಪ್ರಶಸ್ತಿ ಗೆದ್ದಿದ್ದರು. ಸರ್ಬಿಯಾದ ತಾರೆ ನೊವಾಕ್ ಜೊಕೊವಿಕ್ ಮತ್ತು ಸ್ಪೇನ್‌ನ ರಫೆಲ್ ನಡಾಲ್ ಈ ಸಾಧನೆ ಮಾಡಿದ್ದ ಇತರ ದಿಗ್ಗಜರು.

ನವೆಂಬರ್‌ನಲ್ಲಿ ನಡೆದ ಎಟಿಪಿ ಫೈನಲ್ಸ್ ಬಳಿಕ ಸಿನ್ನರ್ ಮತ್ತು ಅಲ್ಕರಾಜ್ ನಡುವೆ ಮೊದಲ ಮುಖಾಮುಖಿ ಇದಾಗಿತ್ತು. ಎಟಿಪಿ ಫೈನಲ್ಸ್‌ನಲ್ಲೂ ಸಿನ್ನರ್ ಪರಾಕ್ರಮ ಮೆರೆದಿದ್ದರು.

ಮಹಿಳಾ ಟಿ20 ಕ್ರಿಕೆಟ್ ವಿಶ್ವಕಪ್: ಬಹುಮಾನ ₹82 ಕೋಟಿಗೆ ಹೆಚ್ಚಳ

ದುಬೈ (ಪಿಟಿಐ): ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ಇದೇ ವರ್ಷ ನಡೆಯಲಿರುವ ಮಹಿಳಾ ಟಿ20 ವಿಶ್ವಕಪ್ ಟೂರ್ನಿಗೆ ದಾಖಲೆಯ ₹82 ಕೋಟಿ ಬಹುಮಾನ ಮೊತ್ತವನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಸೋಮವಾರ ಘೋಷಿಸಿದೆ.

ಹಿಂದಿನ ಆವೃತ್ತಿಗಿಂತ ಒಟ್ಟು ಬಹುಮಾನ ಮೊತ್ತದಲ್ಲಿ ಶೇ 10 ರಷ್ಟು ಹೆಚ್ಚಿಸಲಾಗಿದೆ. ಟೂರ್ನಿಯಲ್ಲಿ ಒಟ್ಟು 12 ತಂಡಗಳು ಸ್ಪರ್ಧಿಸಲಿವೆ. ಜೂನ್ 12ರಿಂದ ಜುಲೈ 5 ರವರೆಗೆ ಏಳು ತಾಣಗಳಲ್ಲಿ ಪಂದ್ಯಗಳು ನಡೆಯಲಿದೆ. ಜೂನ್ 12ರಂದು ಬರ್ಮಿಂಗ್‌ಹ್ಯಾಮ್‌ನ ಎಡ್ಜ್‌ಬಾಸ್ಟನ್‌ನಲ್ಲಿ ಆತಿಥೇಯ ಇಂಗ್ಲೆಂಡ್ ಮತ್ತು ಶ್ರೀಲಂಕಾ ತಂಡಗಳ ನಡುವೆ ಉದ್ಘಾಟನಾ ಪಂದ್ಯ ನಡೆಯಲಿದೆ. ಜುಲೈ 5ರಂದು ಫೈನಲ್ ಪಂದ್ಯವು ಲಾರ್ಡ್ಸ್ ಕ್ರಿಕೆಟ್ ಮೈದಾನದಲ್ಲಿ ನಿಗದಿಯಾಗಿದೆ.

'ಯುಎಇನಲ್ಲಿ ನಡೆದ ಹಿಂದಿನ ಆವೃತ್ತಿಯ ಒಟ್ಟು ಬಹುಮಾನ ನಿಧಿ ಸುಮಾರು ₹74 ಕೋಟಿ ಆಗಿದ್ದರೆ, ಅದನ್ನು ಈ ಬಾರಿ ₹82 ಕೋಟಿಗೆ ಹೆಚ್ಚಿಸಲಾಗಿದೆ. ಭಾಗವಹಿಸುವ ಎಲ್ಲಾ 12 ತಂಡಗಳು ಕನಿಷ್ಠ ₹2.06 ಕೋಟಿ ಮೊತ್ತವನ್ನು ಪಡೆಯಲಿವೆ' ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ವಿಜೇತ ತಂಡವು ₹21.8 ಕೋಟಿ, ರನ್ನರ್ಸ್ ಅಪ್ ತಂಡವು ₹10 ಕೋಟಿ, ಸೆಮಿಫೈನಲ್‌ನಲ್ಲಿ ಪರಾಭವಗೊಳ್ಳುವ ತಂಡಗಳು ತಲಾ ₹6.29 ಕೋಟಿ ಬಹುಮಾನ ಪಡೆಯಲಿವೆ.

ಭಾರತ, ಆಸ್ಟ್ರೇಲಿಯಾ, ಬಾಂಗ್ಲಾದೇಶ, ಐರ್ಲೆಂಡ್, ನೆದರ್ಲೆಂಡ್ಸ್, ನ್ಯೂಜಿಲೆಂಡ್, ಪಾಕಿಸ್ತಾನ, ಸ್ಕಾಟ್ಲೆಂಡ್, ದಕ್ಷಿಣ ಆಫ್ರಿಕಾ ಮತ್ತು ವೆಸ್ಟ್ ಇಂಡೀಸ್ ಕಣದಲ್ಲಿರುವ ಇತರ ತಂಡಗಳು. 24 ದಿನಗಳ ಟೂರ್ನಿಯಲ್ಲಿ 33 ಪಂದ್ಯಗಳು ನಡೆಯಲಿದೆ.

ಭಾರತದಲ್ಲಿ ಫಾರ್ಮುಲಾ 1 ರೇಸ್ ಆಯೋಜನೆಗೆ ಮಾಂಡವೀಯ ಆಸಕ್ತಿ

ನವದೆಹಲಿ (ಪಿಟಿಐ): ಭಾರತದಲ್ಲಿ ಮುಂದಿನ ವರ್ಷ ಫಾರ್ಮುಲಾ 1 ರೇಸ್ ಆಯೋಜಿಸಲು ಯತ್ನಿಸುತ್ತಿರುವುದಾಗಿ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ತಿಳಿಸಿದ್ದಾರೆ.

ಗ್ರೇಟರ್ ನೋಯ್ಡಾದಲ್ಲಿರುವ ಬುದ್ಧ ಇಂಟರ್ ನ್ಯಾಷನಲ್ ಸರ್ಕ್ಯೂಟ್‌ನಲ್ಲಿ ರೇಸ್ ನಡೆಸಲು ಕನಿಷ್ಠ ಮೂರು ಕಂಪನಿಗಳು ಆಸಕ್ತಿ ತೋರಿಸಿವೆ ಎಂದು ಸೋಮವಾರ ಅನೌಪಚಾರಿಕ ಮಾಧ್ಯಮ ಸಂವಾದದಲ್ಲಿ ಸಚಿವರು ಹೇಳಿದರು.

'ಮುಂದಿನ ವರ್ಷದ ಭಾರತದಲ್ಲಿ ಫಾರ್ಮುಲಾ 1 ರೇಸ್ ನಡೆಯಲಿದೆ. ಮೊದಲ ರೇಸ್ ಬುದ್ಧ ಇಂಟರ್ ನ್ಯಾಷನಲ್ ಸರ್ಕ್ಯೂಟ್‌ನಲ್ಲಿ ನಡೆಯಲಿದೆ' ಎಂದು ಮಾಂಡವೀಯ ತಿಳಿಸಿದರು.

ಲಿಬರ್ಟಿ ಮೀಡಿಯಾ ಒಡೆತನದ ಫಾರ್ಮುಲಾ 1 ಭಾರತಕ್ಕೆ ಮರಳುವ ಬಗ್ಗೆ ಇನ್ನೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.